ಅವರು ಸಂಸದೀಯ ವ್ಯವಹಾರ ಮಂತ್ರಿಗಳಾಗಿ ಉತ್ತರ ಹೇಳಿದ್ದಾರೆ. ಅದನ್ನು ಸದನಕ್ಕೆ ಯಾರು ಉತ್ತರ ಹೇಳಿದ್ದಾರೋ he will be held responsible for that. ಅದಕ್ಕೆ ತಮಗೆ ಅವತ್ತು ನಾನು ಅಭಿನಂದನೆ ಸಲ್ಲಿಸಿದ್ದೇನೆ. ಇವರ ಬಗ್ಗೆ ಅದೇ ದಿವಸ ನಾನು ತಿದ್ದುಪಡಿಯನ್ನು ತಂದಿದ್ದೇನೆ. ಅದು ಕಾನೂನು ಮಂತ್ರಿಗಳಿಗೆ ಬರುವುದಿಲ್ಲ ಎಂದು ಪತ್ರಿಕೆಗಳಲ್ಲಿ ಬಂದಿರತಕ್ಕಂಥಾದ್ದು ನಿಜ ಇದೆ ಎಂದು ಈ ತಿದ್ದುಪಡಿಯನ್ನು ನಾನು ಒಪ್ಪಿಕೊಳ್ಳುವುದಕ್ಕೆ ತಯಾರಾಗಿದ್ದೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಸನ್ಮಾನ್ಯ ಅಧ್ಯಕ್ಷರೆ, ಮೊನ್ನೆ 13ನೇ ತಾರೀಖು ಸನ್ಮಾನ್ಯ ಚಂದ್ರೇಗೌಡರು ಮಾರ್ಕೆಟಿಂಗ್ ಫೆಡರೇಷನ್ ಮೇಲೆ ಮಾತನಾಡುವಾಗ, ಕೆಲವು ಮಾತುಗಳನ್ನು ಗೊಬ್ಬರದ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆ ನನಗೆ ಹೇಳುವುದಕ್ಕೆ ತಾವು ಅವಕಾಶ ಕೊಡಬೇಕು. ಏಕೆಂದರೆ ನಾನೇ ಅಧ್ಯಕ್ಷನಾಗಿದ್ದೇನೆ. ಆದ್ದರಿಂದ ನನಗೆ ಹೇಳುವುದಕ್ಕೆ ತಾವು ಅವಕಾಶ ಕೊಡಬೇಕು.

ಅಧ್ಯಕ್ಷರು:- ತಾವು ಬರೆದು ಕಳುಹಿಸಿಕೊಡಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಆಯಿತು.

ಅಧ್ಯಕ್ಷರು:- ಈಗ ಕಾರ್ಯಸೂಚಿ ಪ್ರಕಾರ ಹೋಗುವುದಕ್ಕೆ ಬದಲಾಗಿ ಮೊನ್ನೆ ನಡೆದಂಥ 68ನೇ ನಿಯಮಾವಳಿ ಚೌಕಟ್ಟಿನಲ್ಲಿ ಆಶ್ರಯದ ಬಗ್ಗೆ ಏನು ಚರ್ಚೆ ನಡೆಯುತ್ತಾ ಇತ್ತು, ಅದನ್ನು ಮುಂದುವರೆಸಿ ಮುಗಿಸಿಬಿಡೋಣ. ಆನಂತರ ಗಮನಸೆಳೆಯುವ ಸೂಚನೆ ಮತ್ತು ಇತರ ವಿಚಾರಗಳನ್ನು ತೆಗೆದುಕೊಳ್ಳೋಣ.

ನಿಯಮ 68ರ ಮೇರೆಗೆ ಚರ್ಚೆ

† ಡಾ|| ಜೀವರಾಜ್ ಆಳ್ವ:- ಸಭಾಧ್ಯಕ್ಷರೆ, ಮೊನ್ನೆ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಗೆ ಸಂಬಂಧಪಟ್ಟ ಮಂತ್ರಿಗಳು ಇದ್ದರೂ ಕೂಡ ಬಹಳ ತೀಕ್ಷಣ ಟೀಕೆಗಳಿಗೆ ಉತ್ತರವಾಗಿ ಹಿಂದಿನ ಮಂತ್ರಿಗಳಾದ ಶ್ರೀ ಜಾರ್ಜ್‌ರವರು ಸಚಿವ ಸಂಪುಟದ ಒಪ್ಪಿಗೆಯಾಗಿದೆ ಎಂದು ಹೇಳಿದರು. ಸಚಿವ ಸಂಪುಟದ ಒಪ್ಪಿಗೆಯಾಗಿದೆ ಅದನ್ನು ಒಪ್ಪೋಣ. ಆದರೆ ಈ ಸ್ಕೀಂ ಆಗುವುದಕ್ಕಿಂತ ಮುಂಚೆ ಯಾವುದೇ ಫೈನಾನ್ಸಿಯಲ್ ಟೈ ಅಪ್ ಆಗಲಿಲ್ಲ. ಬ್ಯಾಂಕ್ ಗ್ಯಾರಂಟಿ ಆಗಿಲ್ಲ. ಕ್ಯಾಬಿನೆಟ್‌ನಲ್ಲೂ ಬ್ಯಾಂಕ್ ಗ್ಯಾರಂಟಿಯೂ ಆಗಿಲ್ಲ. ಇನ್ಸಿಟಿಟ್ಯೂಷನಲ್ ಫೈನಾನ್ಸಿಂಗ್ ಮತ್ತು ಇನ್ನೊಂದು ಮಾತು ಹೇಳಿದರು. ಸೆಲ್ಫ್ ಫೈನಾನ್ಸಿಂಗ್ ಸ್ಕೀಂ ಆಗಿತ್ತು. ಒಂದು ವೇಳೆ ಸೆಲ್ಫ್ ಫೈನಾನ್ಸಿಂಗ್ ಸ್ಕೀಂ ಆಗಿತ್ತು ಎಂದು ಒಪ್ಪಿಕೊಂಡರೂ ಕೂಡ ಈ ಸೆಲ್ಫ್ ಫೈನಾನ್ಸ್ ಸ್ಕೀಂನ್ನು ಯಾವತ್ತು ನೀವು ಅನೌನ್ಸ್ ಮಾಡಿದಿರಿ. ಇದಕ್ಕೆ ಎಷ್ಟು ಅಪ್ಲಿಕೇಷನ್ಸ್ ಬಂದವು? ಎಷ್ಟು ದುಡ್ಡು ಕಲೆಕ್ಟ್ ಆಯಿತು ಎಂದು ಹೇಳಬೇಕು ತಾನೇ? ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡಬೇಕು. ದಯವಿಟ್ಟು ಆ ಉತ್ತರ ಕೊಡಬೇಕಾಗುತ್ತದೆ. ಈ ಆಶ್ರಯದ ಸ್ಕೀಂನಲ್ಲಿ ಸೆಲ್ಫ್ ಫೈನಾನ್ಸಿಂಗ್ ಸ್ಕೀಂನಲ್ಲಿ ಅಪ್ಲಿಕೇಷನ್ ಎಷ್ಟು ಬಂತು? ಹಣ ಎಷ್ಟು ಕಲೆಕ್ಟ್ ಮಾಡಿದಿರಿ? ಏನು ಮಾಡಿದಿರಿ? ಯಾವುದಾದರೂ ಇನ್ಸ್‌ಟಿಟ್ಯೂಷನಲ್ ಫೈನಾನ್ಸಿಯಲ್ ಟೈಅಪ್ ಮಾಡಿದಿರಾ? ಅದು ಇಲ್ಲ. ಯಾವುದಾದರೂ ಬ್ಯಾಂಕಿಂಗ್ ಇನ್ಸಿಟಿಟ್ಯೂಷನಲ್ ಹತ್ತಿರ ಏನಾದರೂ ಬ್ಯಾಂಕ್ ಗ್ಯಾರಂಟಿ ತೆಗೆದುಕೊಂಡಿದ್ದೀರಾ? ಅದೂ ಇಲ್ಲ. ಗವರ್ನಮೆಂಟ್ ಗ್ಯಾರಂಟಿ ಏನಾದರೂ ಕೊಟ್ಟಿದ್ದೀರಾ? ಅದೂ ಇಲ್ಲ. ಇದು ಟೋಟಲ್ ವ್ಯಾಕ್ಯುಂ. ಇವರು ಏನು ಕ್ರಿಯೇಟ್ ಮಾಡಲಿಕ್ಕೆ ಹೋಗಿದ್ದಾರೆಂದರೆ ಕರ್ನಾಟಕವೇ ಕಂಡರಿಯದಂತಹ ಒಂದು ದುಷ್ಟ ಕೂಟವನ್ನು ಏರ್ಪಾಟು ಮಾಡಿ, ಇದರ ಮೂಲಕ ಸರ್ಕಾರದ ಖಜಾನೆಯನ್ನು ಬರಿದು ಮಾಡಲಿಕ್ಕೆ, ಖಾಲಿ ಮಾಡಲಿಕ್ಕೆ ಹೊರಟಂಥ ಸಂಚು. ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ಹೇಳುತ್ತಿದ್ದೇನೆ, ಯಾವ್ಯಾವ

ಕಂಟ್ರಾಕ್ಟರುಗಳಿಗೆ ಕೊಟ್ಟಿದ್ದಾರೆಂದು ಹೇಳಿದರು. ಹೊರರಾಜ್ಯದ ಕಂಟ್ರಾಕ್ಟರುಗಳಿಗೆ ಕೊಟ್ಟಿದ್ದಾರೆ. ಇದೂ ಕೂಡ ಇನ್ನೊಂದು, They have literally imposed un-tested technology. ಪ್ರೀ ಫ್ಯಾಬ್ರಿಕೇಟೆಡ್ ಅನ್ನುತ್ತಾರೆ, ಅದಕ್ಕೆ ಒಂದು ಟ್ರಯಲ್ಲೂ ಮಾಡಿಲ್ಲ. ಯಾರೋ ಒಬ್ಬ ತೋರಿಸಿದ, ನೀವು ಅವನಿಗೆ ಕೊಡಬೇಕಾಗಿತ್ತು, ಅದಕ್ಕೆ ಕಣ್ಣುಮುಚ್ಚಿಕೊಂಡು ಕೊಟ್ಟಿರಿ. ಅನಂತರ ಯಾವ ಒಬ್ಬ ಲೋಕಲ್ ಕಂಟ್ರಾಕ್ಟರಿಗೆ, ಈಗ ಸಬ್‌ಲೀಸ್, ಸಬ್ ಕಂಟ್ರಾಕ್ಟ್ ಅಂತ ಕೊಟ್ಟಿರಬಹುದು ಆದರೆ ಕರ್ನಾಟಕದ ಕಂಟ್ರಾಕ್ಟರಿಗೆ ಇವರು ಕೊಟ್ಟಿಲ್ಲ. ಆಮೇಲೆ ಮೊಬಿಲೈಸೇಷನ್ ಬಗ್ಗೆ ಮಾತನಾಡಿದರು. ಐದು ಪರ್ಸೆಂಟ್ ಮೊಬಲೈಸೇಷನ್ ಅಡ್ವಾನ್ಸ್ ಕನ್‌ಸೇಷನ್ ಎಂದು. ಇದಲ್ಲದೆ an advance concession on TOT of 2% was given. You are aware of it. Why was it given? ಇದರ ಅರ್ಥ ಇಷ್ಟು ದೊಡ್ಡ ಸುಮಾರು 2.35 ಲಕ್ಷ under economically weaker sections and with a budget of Rs.400 crores. What a tall plan! ಈ ಹೌಸಿಂಗ್ ಬೋರ್ಡ್‌ನ ವ್ಯವಸ್ಥೆ ಹೇಗೆ ಇದೆ, ಇದರ ಇನ್‌ಫ್ರಾಸ್ಟಕ್ಚರ್ ಎಷ್ಟು? ಈ ಇನ್‌ಫ್ರಾಸ್ಟಕ್ಚರ್ ಇಟ್ಟುಕೊಂಡು ಯಾವುದೇ ಕೇಡರ್, ಜೂನಿಯರ್ ಇಂಜಿನಿಯರ್, ಸೂಪರಿಂಟೆಂಡಿಂಗ್ ಇಂಜಿನಿಯರ್ ಇಲ್ಲ. ಇವರು ಕೇಳಿದಂಥ ಜನಗಳು ಇವರ ಹತ್ತಿರ ಬರಲಿಕ್ಕೆ ತಯಾರು ಇಲ್ಲ. ಪಾಪದ ಕೂಪದ ತಾಪವನ್ನು ತಮ್ಮ ತಲೆ ಮೇಲೆ ಹೊತ್ತುಕೊಳ್ಳುವುದಕ್ಕೆ ತಯಾರು ಆಗಿಲ್ಲ, ಅಥವಾ ಅದರಲ್ಲಿ ಏನೇನು ಲಾಭ ಬರಬೇಕು ಎಂದು ಇತ್ತೋ ಅದೆಲ್ಲಾ ಖಾಲಿಯಾಗಿದೆ ಎಂದು ಅವರಿಗೆ ಗೊತ್ತಿತ್ತು. ಅದಕ್ಕೆ ಅವರು ಒಬ್ಬರು ಇಂಜಿನಿಯರ್ ಪೋಸ್ಟಿಂಗ್ ಹಾಕಿದರು. ಹೌಸಿಂಗ್ ಬೋರ್ಡ್ ಪೋಸ್ಟಿಂಗ್ಸ್ ತೆಗೆದುಕೊಳ್ಳುವುದಕ್ಕೆ ಯಾರು ತಯಾರು ಆಗಿರಲಿಲ್ಲ. ಸ್ವಾಮಿ ಒಂದು 2.55 ಲಕ್ಷ ಇದರಲ್ಲಿ ಇವತ್ತು 10 ಸಾವಿರ ಮನೆಗಳು They are under various phases of construction.

12-15 P.M.

ಇದರಲ್ಲಿ ಒಂದು ಸಾವಿರ ಮನೆಗಳು ಕಂಪ್ಲೀಟಾಗಿವೆ. ಇದಕ್ಕಿಂತ ಹೆಚ್ಚಾಗಿ ಇವರು ಜೂನ್ ತಿಂಗಳೊಳಗೆ 1.6 ಲಕ್ಷ ಮನೆಗಳನ್ನು ಕಂಪ್ಲೀಟ್ ಮಾಡುತ್ತೇವೆಂದು ಹೇಳಿದ್ದಾರೆ. ಈಗ ಕಟ್ಟುತ್ತಿರುವ ಮನೆಗಳೇ 10 ಸಾವಿರ. 6–1–93ರಲ್ಲಿ ಗೌವರ್ನ್‌ಮೆಂಟ್ ಡಿಸಿಷನ್ ತೆಗೆದುಕೊಂಡು ಜೂನ್ ತಿಂಗಳೊಳಗೆ ಕಂಪ್ಲೀಟ್ ಮಾಡುತ್ತೇವೆಂದು ಹೇಳಿದೆ. It is nothing but a total fraud perpetuated on the gullible innocent, ignorant masses. ಈ ಕರ್ನಾಟಕದಲ್ಲಿ ನಾವು ಈ ಯೋಜನೆಯನ್ನು ಹೊಗಳಿದೆವು, ಈ ಸಭೆಯಲ್ಲಿಯೇ ಹೊಗಳಿದೆವು. ಈ 'ಆಶ್ರಯ' ಯೋಜನೆ ಚೆನ್ನಾಗಿದೆಯೆಂದು ಹೇಳಿದೆವು. ವಿಶ್ವ ಯೋಜನೆ ಬಗ್ಗೆ ಸ್ವಲ್ಪ ಡೌಟ್ ಎಕ್ಸ್‌ಪ್ರೆಸ್ ಮಾಡಿದರೂ ಕೂಡ 'ಆಶ್ರಯ' ಯೋಜನೆ ಬಗ್ಗೆ ಡೌಟ್ ಎಕ್ಸ್‌ಪ್ರೆಸ್ ಮಾಡಲಿಲ್ಲ. ನೀವು ಒಳ್ಳೆಯ ಕೆಲಸ ಆರಂಭ ಮಾಡಿದ್ದೀರಿ ಎಂದು ಹೇಳಿದ್ದೇವೆ. ಆದರೆ ನೀವು ಏನು ಮಾಡಿದಿರಿ. ಆಶ್ರಯ ಸ್ಕೀಮ್‌ನಲ್ಲೂ ಕೂಡ ನಿಮ್ಮನ್ನು Taluk level Ashraya Committee Chairmen ಎಂದು ಮಾಡಿದ್ದಾರೆ. ಏಕೆ ಮಾಡಿದರೊ ಗೊತ್ತಿಲ್ಲ. ಒಂದು ಬೆನಿಫಿಷರಿಗೂ ಮನೆ ಕೊಡಲಿಕ್ಕೆ ಆಗಿಲ್ಲ. ಗೌವರ್ನಮೆಂಟ್ ಫಾರೆಸ್ಟ್ ಲ್ಯಾಂಡ್ಸ್, ಕೆರೆಗಳು, most precious tanks ಅವುಗಳನ್ನು ನಿಮ್ಮ ನಿಮ್ಮ ಏಜೆಂಟ್‌ಗಳು, ಮಿಡಲ್‌ಮನ್, ದಳ್ಳಾಳಿಗಳು, ಕಾರ್ಪೊರೇಟರ್‌ಗಳನ್ನು ಉಪಯೋಗಿಸಿ ದರೋಡೆ ಹೊಡೆಯುತ್ತಿದ್ದೀರಿ, ಶಾಸಕರನ್ನು ಉಪಯೋಗಿಸಿ ದರೋಡೆ ಹೊಡೆಯುತ್ತಿದ್ದೀರಿ, ಮೋಸ ಆಗುತ್ತಿದೆ, ಅನ್ಯಾಯ ಆಗುತ್ತಿದೆ, ಬೆಂಗಳೂರಿನ ಸೌಂದರ್ಯಕ್ಕೆ ಧಕ್ಕೆ ಬರುತ್ತಿದೆ. ಯಾವ ಬೆಂಗಳೂರಿನ ಕೆರೆಗಳ ಬಗ್ಗೆ ನಾವು ಹೆಮ್ಮೆ ಪಡುತ್ತಿದ್ದೆವೊ ಆ ಕೆರೆಗಳು ಒಂದೊಂದು ದರೋಡೆ ಆಗುತ್ತಿದೆ. ಒಳ್ಳೆಯ ಫಾರಸ್ಟ್ ಲ್ಯಾಂಡ್ ಹೋಗುತ್ತಿದೆ. ಇದು Against all environmental. ಕೇಂದ್ರ ಸರ್ಕಾರಕ್ಕೆ, Minister for Environmentಗೆ ಕೆಚ್ಚು ಇದ್ದರೆ, he must sue you, Housing Board Chairman ಅನ್ನು ಸ್ಯೂ ಮಾಡಬೇಕು, ಎಚ್.ಯು.ಡಿ. ಮಿನಿಸ್ಟರನ್ನು ಸ್ಯೂ

ಮಾಡಬೇಕು. ಕರ್ನಾಟಕ ಸರ್ಕಾರವನ್ನು ಸ್ಕ್ರೂ ಮಾಡಬೇಕು. ಇವತ್ತು ನಿಮ್ಮ ಈ ವ್ಯವಹಾರ ಏನಿದೆ, ಈ ಸ್ಕೀಮ್‌ನಲ್ಲಿ 750 ರೂಪಾಯಿಗಳು ಒಂದು ಸೈಟ್‌ಗಾದರೆ, ಈ ಬೆನಿಫಿಷಿಯರೀಸ್‌ನಿಂದ ಬೇರೆ ತೆಗೆದುಕೊಂಡಿದ್ದಾರೆ; ಇದೂ ತಮಗೆ ಗೊತ್ತಿದೆ. ತಾವು ಆತ್ಮಾವಲೋಕನ ಮಾಡಿಕೊಳ್ಳಿ. ಇದನ್ನು ನಾನು Exaggerated ಆಗಿ politically exploit ಮಾಡಬೇಕು ಅಥವಾ ಸಭೆಯ ಕಾಲವನ್ನು ಉಪಯೋಗಿಸಬೇಕೆಂದು ಹೇಳುತ್ತಿಲ್ಲ. ದಳ್ಳಾಳಿಗಳು ಇದ್ದಾರೆ, ಮಿಡಲ್‌ಮನ್‌ಗಳು ಇದ್ದಾರೆ, ಏಜೆಂಟ್‌ಗಳು ಇದ್ದಾರೆ, ಒಂದೊಂದು ಸೈಟಿಗೆ ಹತ್ತತ್ತು ಸಾವಿರ ರೂಪಾಯಿಗಳನ್ನು ತೆಗೆದುಕೊಂಡಿದ್ದಾರೆ. ನಾವು ಏನೋ ಬಂದು ಆಸೆಯಿಂದ ಜಾಸ್ತಿ ಹಣವನ್ನು ಖರ್ಚು ಮಾಡುತ್ತಿದ್ದೇವೆ. 25 ವರ್ಷದ ಕರ್ನಾಟಕ ರಾಜ್ಯೋತ್ಸವವನ್ನು ಏರ್ಪಾಡು ಮಾಡಬೇಕೆಂದು ಹೇಳಿ, ನಾನು ನಮ್ಮ ಸರ್ಕಾರದ ಪರವಾಗಿ 6 ಸಾವಿರ ಸೈಟ್ಸ್ ಇರಬಹುದು, ನನಗೆ ಸರಿಯಾಗಿ ನೆನಪಿಲ್ಲ, ಅಷ್ಟು ಬೆನಿಫಿಷಿಯರೀಸ್, ಅವರಿಗೆಲ್ಲಾ ನಾವು ಕೊಟ್ಟೆವು. ಒಂದು ಪಾಂಪ್ಲೆಟ್ಸ್ ಪ್ರಿಂಟ್ ಮಾಡಿ, ಸಭೆ ಮಾಡಿ ಕೊಡಬೇಕು ಎಂದು ಆರ್ಗನೈಸ್ ಮಾಡಿ, places were earmarked, land was found, sites were allotted. ಇವತ್ತು ಆ ಜನರಿಗೆ, ನಮ್ಮ ಸರ್ಕಾರ ರೆಕಗ್ನೈಸ್ ಮಾಡಿದಂತಹ ಬೆನಿಫಿಷಿಯರೀಸ್‌ಗೆ ಒಂದು ಸೈಟನ್ನೂ ನೀವು ಕೊಟ್ಟಿಲ್ಲ. ಅವರು ಹಕ್ಕುಪತ್ರ ತೆಗೆದುಕೊಂಡು ಅಲ್ಲಿಗೆ ಹೋದರೆ ಅವರನ್ನು ಓಡಿಸುತ್ತಿದ್ದೀರಿ, ಇದು ಯಾವ ನ್ಯಾಯ? ಯಾರೆ ಬಡವರು ಇರಲಿ ಅವರಿಗೆ ಸೈಟು ಕೊಡಬೇಕು. ನಾವು ಜನತಾದಳ ಎಂದು ತೆಗೆದುಕೊಂಡು ಹೋಗಿಲ್ಲ. A random survey was done, about 6,000 to 12,000 beneficiaries were identified and the Government allotted the sites. ಕನ್ನಡ ರಾಜ್ಯ ನಿರ್ಮಾಣವಾಗಿ 25 ವರ್ಷಗಳಾಗಿದೆ, 25ನೇ ಕನ್ನಡ ರಾಜ್ಯೋತ್ಸವದ ನೆನಪಿಗಾಗಿ ಬಡಬಗ್ಗರಿಗೆ ಕೊಡಲಿ ಎಂದು ಕೊಟ್ಟರೆ, ಅವರು ಆಶ್ರಯ ಯೋಜನೆಯ ಕೆಳಗೆ ಬರುವುದಿಲ್ಲವೇ, ಅವರು ಏನು ಪಾಪ ಮಾಡಿದ್ದಾರೆ? ಬೆಂಗಳೂರು ನಗರದ ಅತ್ಯಂತ ಕಟ್ಟಕಡೆಯ ದಟ್ಟದರಿದ್ರರಿಗೆ, ಬಡಜನರಿಗೆ ಕೊಟ್ಟರೆ ಅದರ ಬಗ್ಗೆ ನಿಮಗೆ ಚಿಂತನೆ ಇಲ್ಲ. Government is a continuing body. ಈ obligationಗೆ they were indebted. ಯಾವುದೋ ದೊಡ್ಡ ದೊಡ್ಡ ಬಿಸಿನೆಸ್ ಹೌಸಸ್‌ಗೆ, ಸೈಟ್ ಕೊಟ್ಟಿದ್ದಾಗಲಿ ಅಥವಾ ಇದು ಕೆಮಿಕಲ್ ಯೂನಿಟ್‌ಗಾಗಲಿ ಡಿಸ್ಟಿಲರಿ ಯೂನಿಟ್‌ಗಾಗಲಿ ಅಲ್ಲ, ಇವು ಸಾಮಾನ್ಯ ಜನರಿಗೆ ಕೊಡುವಂತಹ ನಿವೇಶನಗಳು. ಅದರ ಬಗ್ಗೆ ನಿಮಗೆ ಅನುಕಂಪ ಇಲ್ಲ. With all humility at my command, I am pained, when I say this. I accuse of a clear nexus between the Government, the people at the helm of affairs and the bureaucracy. Some of them have been silent spectators, dumb spectators and some of them were hand in glove. ಮೊಬಿಲೈಸೇಷನ್ ಆಫ್ ಫಂಡ್ಸ್ ಏನೋ ಮಾಡುತ್ತೇನೆ ಎಂದು ಜಾರ್ಜ್‌ರವರು ಹೇಳಿದರು. ನಾವು ಸಮಾವೇಶ ಮಾಡಿದ್ದೇವೆ. ಜನಗಳನ್ನು ಕರೆತಂದಿದ್ದೇವೆ, ಹಣ ಖರ್ಚು ಮಾಡಿದ್ದೇವೆ. ಆದರೆ ಅತ್ಯಂತ ವಿಶ್ವಾಸಪೂರ್ವಕವಾಗಿ ಸಭಾಧ್ಯಕ್ಷರಿಗೆ ಹೇಳುತ್ತಿದ್ದೇನೆ. We have not bartered the State interests. With all conscience I say there was no nexus between politicians and the bureaucracy. Top echelons of bureaucracy was exploited, abused to collect funds, senior scale IAS Officers were made to collect funds. I would corroborate, you exploited them; used them and now you have asked them to go on leave.

ಶ್ರೀ ಕೆ.ಜೆ. ಜಾರ್ಜ್:- ನಾನು ಪಾಯಿಂಟ್ ಆಫ್ ಆರ್ಡರ್ ಎತ್ತುತ್ತಿದ್ದೇನೆ. ಸನ್ಮಾನ್ಯ ಜೀವರಾಜ್ ಆಳ್ವರವರು ಅಧಿಕಾರದಲ್ಲಿದ್ದರು, ಮಂತ್ರಿಗಳು ಆಗಿದ್ದರು ಅವರು ಎರಡು ವಿಚಾರಗಳನ್ನು ಹೇಳಿದ್ದಾರೆ. ಒಂದು ಬೆಂಗಳೂರು ನಗರ ವಿಚಾರದಲ್ಲಿ ಒಂದೊಂದು ಕ್ಷೇತ್ರದಲ್ಲಿ ಸೈಟ್‌ಗಳಿಗೆ 10 ಸಾವಿರ ರೂಪಾಯಿ ತೆಗೆದುಕೊಂಡಿದ್ದಾರೆಂದು ಹೇಳಿದ್ದಾರೆ. ಬಹುಶಃ ಅವರು

ರೆಸ್ಪಾನ್ಸಿಬಲ್ ಮೆಂಬರ್ ಪ್ರತಿಯೊಂದು ಕ್ಷೇತ್ರದಲ್ಲೂ ನಾವು ಮಾಡಿರುವ ಸಮಿತಿಯ ಅಧ್ಯಕ್ಷರಾಗಿ ಎಂ.ಎಲ್.ಎ.ಗಳೇ ಇದ್ದಾರೆ. ಈಗ ಇಲ್ಲಿ ಮಾನ್ಯ ಸಚಿವರು ಇದ್ದಾರೆ. ಅವರು ಆ ರೀತಿ ಹೇಳಿದರೆ, ಪ್ರತಿಯೊಬ್ಬರ ಮೇಲೆ ಬರುತ್ತದೆ.

ಶ್ರೀ ಎ.ಕೆ. ಅನಂತಕೃಷ್ಣ:- ನನ್ನ ಕಾನ್ಸಿಟಿಟ್ಯೂಯನ್ಸಿಯನ್ನು ಬಿಟ್ಟು....

ಶ್ರೀ ಕೆ.ಜೆ. ಜಾರ್ಜ್:- ಹೌದು ನಿಮ್ಮ ಕಾನ್ಸಿಟ್ಯೂಯೆನ್ಸಿ ಬಿಟ್ಟು ನಿಮಗೆ ಸೈಟ್ ಕೊಡಲಿಲ್ಲ. ಯಾರ್‍ಯಾರು ಸೈಟ್ ಕೊಟ್ಟಿದ್ದಾರೆ ಅವರ ಬಗ್ಗೆ ನಾನು ಹೇಳಿದ್ದುದು. ಅವರ ಹತ್ತಿರ ಪ್ರೂಫ್ ಇದ್ದರೆ ಮಾನ್ಯ ಸದಸ್ಯರು ಕೊಡಲಿ. ಆಧಾರಗಳು ಏನಾದರೂ ಇದ್ದರೆ ಅವುಗಳನ್ನು ಒದಗಿಸಿ ಕೊಟ್ಟರೆ ನಾವು ಎನ್‌ಕ್ವೈರಿ ಮಾಡಿಸುತ್ತೇವೆ. ಮಾನ್ಯ ಸಚಿವರು ಈ ಸದನದಲ್ಲಿ ಈಗಾಗಲೇ ಹೇಳಿದ್ದಾರೆ. ಇವರ ಕಾಲದಲ್ಲಿ ಸಮಾವೇಶ ಮಾಡಿದ್ದಾರೆ ನಾವು ಬ್ಯೂರೋ ಕ್ರ್ಯಾಟ್ಸ್‌ಗಳನ್ನು ಇಟ್ಟುಕೊಂದು ಫಂಡ್ಸ್ ಕಲೆಕ್ಟ್ ಮಾಡಿಲ್ಲ. ಬಹುಶಃ ಈ ವಿಚಾರದಲ್ಲಿ ಅವರಿಗೆ ಎಷ್ಟು ಕಾನ್ಸಿಯನ್ಸ್ ಇದೆಯೋ ಅಷ್ಟೆ ನಾನೂ ಸಚಿವನಾಗಿ ಕೆಲಸ ಮಾಡಿದ್ದೇನೆ. ಯಾವುದೇ ವಿಚಾರದಲ್ಲಾದರೂ ಬ್ಯುರೋಕ್ರಾಸಿ ಇಟ್ಟುಕೊಂಡು ಫಂಡ್ಸ್ ಕಲೆಕ್ಟ್ ಮಾಡಿದ್ದೇವೆ ಎಂಬುದಕ್ಕೆ ಆಧಾರ ಇದೆಯೇ? ನಾವು ಆ ರೀತಿ ಮಾಡಿಲ್ಲ. ರೂಲ್ಸ್ ಬಿಟ್ಟು ಮಾಡಿ ಎಂದು ಹೇಳಿಲ್ಲ. ಇದಕ್ಕೆ ಒಂದು ನಿದರ್ಶನವನ್ನು ಇವತ್ತು ಕೊಡುತ್ತೇನೆ. ನಾನು ಹೌಸಿಂಗ್ ಬೋರ್ಡ್ ಮಂತ್ರಿಯಾಗಿದ್ದಾಗ ಒಬ್ಬನಿಗೆ ಟೆಂಪರರಿಯಾಗಿ ಡ್ರೈವರ್ ಅಪಾಯಿಂಟ್‌ಮೆಂಟ್ ಕೊಡಿ ಎಂದು ಒಂದು ಲೆಟರ್ ಕೊಟ್ಟೆ. ಆ ಲೆಟರ್ ನನಗೆ ವಾಪಸ್ಸು ಬಂತು. ಡಿ.ಪಿ.ಆರ್.ನಿಂದ ಟೆಂಪರರಿಯಾಗಿ ಯಾರನ್ನು ತೆಗೆದುಕೊಳ್ಳಬಾರದು ಎಂದು. ಈಗಾಗಲೇ ಸರ್ಕ್ಯುಲರ್ ಇದೆ. ಅದು ರೆಕಾರ್ಡಿನಲ್ಲಿ ಇದೆ. ನನ್ನ ಡ್ರೈವರ್ ವಿಚಾರದಲ್ಲಿ ಈ ತರಹ ಮಾಡಿದ್ದಾರೆ. ಆದ್ದರಿಂದ ಯಾವುದೇ ವಿಚಾರದಲ್ಲಿ ಕೂಡ ಬ್ಯುರೋಕ್ರಸಿ ರೂಲ್ಸ್ ಬಿಟ್ಟು ಏನನ್ನು ಮಾಡಿಲ್ಲ. ಒಳ್ಳೆಯ ಆಫೀಸರ್ಸ್ ಯಾರು ಇದ್ದಾರೆ ಅವರ ಬಗ್ಗೆ ಇಲ್ಲಿ ಹೇಳಬೇಕಾಗಿದೆ. ಹೌಸಿಂಗ್ ಬೋರ್ಡ್‌ನಲ್ಲಿ ಶ್ರೀಮತಿ ಶಾಂತಕುಮಾರಿಯವರು ಕಮೀಷನರ್ ಆಗಿದ್ದರು ನಾನು ಅವರಿಗೆ ಅಭಿನಂದನೆಯನ್ನು ಸಲ್ಲಿಸಬೇಕಾಗಿದೆ. ಅವರು ಬಂದ ಮೇಲೆ ಸಾಕಷ್ಟು ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಇಡೀ ಸ್ಟೇಟ್‌ನ್ನು ಟೂರ್ ಮಾಡಿ ಕೆಲಸ ಮಾಡಿದ್ದಾರೆ. ಆದ್ದರಿಂದ ಹೌಸಿಂಗ್ ಬೋರ್ಡ್ ವಿಚಾರದಲ್ಲಾಗಲೀ ಅಥವ ಬೇರೆ ಸಂಸ್ಥೆಗಳ ವಿಚಾರದಲ್ಲಾಗಲೀ ಹೇಳುವಾಗ ಯಾರು ಆಫೀಸರ್ಸ್ ತಪ್ಪು ಮಾಡಿದ್ದಾರೆ, ಪೊಲೀಟಿಷಿಯನ್ಸ್ ತಪ್ಪು ಮಾಡಿದ್ದಾರೆ ಅವರ ವಿಚಾರ ಹೇಳಬೇಕೇ ಹೊರತು ಇಡೀ ಸಂಸ್ಥೆಯನ್ನು ಜನರಲೈಸ್ ಮಾಡುತ್ತಾ ಹೋದರೆ, ನಾಳೆ ಯಾರೇ ಅಧಿಕಾರಕ್ಕೆ ಬಂದರೂ ಯಾವುದೇ ಡಿಸಿಷನ್ ಮಾಡಲು ಸಾಧ್ಯವಾಗುವುದಿಲ್ಲ, ಯಾರು ಬಂದರೂ ಸರ್ಕಾರ ನಡೆಸಲು ಸಾಧ್ಯವಾಗುವುದಿಲ್ಲ ಎಂಬ ಮಾತನ್ನು ಡಾ|| ಜೀವರಾಜ್ ಆಳ್ವರವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಆರ್.ವಿ. ದೇಶಪಾಂಡೆ:- ನನ್ನ ಆತ್ಮೀಯ ಮಿತ್ರರು ತಪ್ಪು ತಿಳಿಯಬಾರದು. ಇಲ್ಲಿ ಸಚಿವರು ಇದ್ದಾರೆ. ತಾವು ಪದೇ ಪದೇ ಹೆಜ್ಜೆ ಹೆಜ್ಜೆಗೂ ಎಕ್ಸ್‌ಪ್ಲೆನೇಷನ್ ಕೊಡುತ್ತಾ ಹೋದರೆ I do not think it is a proper practice. Otherwise the Minister should say...

SRI K.J.GEORGE: I have got every right to raise point of order. Regarding allegations against a Member, I have got the right to point out. Because he said sites have been distributed.. I am also responsible as a legislator. I have got right to raise objection.

SRI R.V.DESHPANDE:- Why are you getting up often? There is needle of suspicion. Why? What is the necessity?

(ಗೊಂದಲ)

Why the other Hon.Members are not standing up? Why you alone to stand up and say.

SRI K.J.GEORGE:- As a Member I have got right to say....

SRI A.K. ANATHA KRISHNA:- He has got right to say something. ನೀವು ಹೇಳುವುದನ್ನೆಲ್ಲಾ ಕೇಳಿಕೊಂಡು ಇಲ್ಲಿ ನಾವು ಸುಮ್ಮನೇ ಕುಳಿತುಕೊಂಡಿರುವುದಕ್ಕೆ ಸಾಧ್ಯವಿಲ್ಲ.

ಡಾ|| ಜೀವರಾಜ್ ಆಳ್ವ:- ಮಿತ್ರರಾದ ಜಾರ್ಜ್‌ರವರನ್ನು ನಾನು ಬಹಳ ದಿವಸಗಳಿಂದ ಬಲ್ಲೆ. ಕಳೆದ ನಾಲ್ಕು ಸಾರಿ ವಿಧಾನ ಸಭೆಯಲ್ಲಿ ಶಾಸಕನಾಗಿ ಬಹಳ ಕಡಿಮೆ ಸಾರಿ ನಾನು ಮಾತನಾಡಿದ್ದೇನೆ. ಅತ್ಯಂತ ಜವಾಬ್ದಾರಿಯಿಂದ ಮಾತನಾಡಿದ್ದೇನೆ. ಯಾರ ಮೇಲಾದರೂ ಆಪಾದನೆ ಮಾಡಬೇಕಾದರೆ, ಆಳ ತಿಳಿದುಕೊಂಡು ಮಾತನಾಡಿದ್ದೇನೆ. ನನ್ನ ಅಂತರಾತ್ಮವನ್ನು ಕೇಳಿ ನೊಂದು ಮಾತನಾಡಿದ್ದೇನೆ. ಬ್ಯುರಾಕ್ರಸಿ ಬಗ್ಗೆ ಹೇಳುವುದಾದರೆ, ನನಗೂ ಸಾಕಷ್ಟು 25 ವರ್ಷಗಳ ರಾಜಕೀಯ ಜೀವನ ಇದೆ. ಆ ಜೀವನದಲ್ಲಿ ಐ ನೀಡ್ ಬ್ಯೂರ್‍ಯಾಕ್ರಸಿ, I need their support. ನೀವು ಯಾರಾದರೂ ಒಬ್ಬರಾದರೂ ಈ ಕಾಂಗ್ರೆಸ್ ಪಕ್ಷದಲ್ಲಿ ಅತ್ಯಂತ... one of the greatest onslaughts on bureaucracy was done by this Government, the credibility and erosion of the confidence of the bureaucracy was shattered and it was I who went to ther rescue. I said, Karnataka bureaucracy is known for unquestionable integrity, known for its performance; I am proud of it. ಆದರೂ ಇವತ್ತು ನನಗೂ ನೋವು ಸ್ವಾಮಿ; ಅಧಿಕಾರದ ಆಳ್ವಿಕೆಯಲ್ಲಿ 7 ವರ್ಷಗಳ ಕೆಲಸ ಮಾಡಿ ಏನೇನು ಆಗುತ್ತಿದೆ, ಎಲ್ಲೆಲ್ಲಿ ಬ್ಯಾಗ್‌ಗಳು ಹೋಗುತ್ತವೆ, ಎಲ್ಲೆಲ್ಲಿ ಹೋಗುವುದಿಲ್ಲ, ಎನ್ನುವುದು ನನಗೂ ಗೊತ್ತಿದೆ. ಆದರೆ ನನಗೆ ನೋವು ಏನು ಎಂದು ಹೇಳಿದರೆ, ಏನು ಕರ್ನಾಟಕದ ಚರಿತ್ರೆಯಲ್ಲಿ ಆಗಿಲ್ಲ ಸ್ವಾಮಿ ಈಗ ಆಗಿದೆ. The officers were utilised. That is why I am demanding to CBI enquiry. Why that particular official has asked to go on leave. He was abused, a person of certain degree of responsibility, he was exploited his vulnerability to have a pivotal post was exploited and after abusing and exploiting he was dumped. ಎಷ್ಟು ಅಧಿಕಾರಿಗಳನ್ನು ಹಾಳು ಮಾಡಿದಿರಿ, ಎಷ್ಟು ನೋವನ್ನು ಕೊಟ್ಟಿರಿ, ಕರ್ನಾಟಕದ ಸರ್ಕಾರದ ಅಧಿಕಾರಿಗಳು ಮಾನ್ಯ ಜಾರ್ಜ್‌ರವರೇ, ಕರ್ನಾಟಕ ಕೇಡರ್ ಎಂಬುದಕ್ಕೆ ನಾಚಿಕೆ ಪಡುತ್ತಿದ್ದಾರೆ. ಅದರ ಅರಿವು ನಿಮಗೆ ಇದೆಯೇ? See we are to be there. We are to rule. You have to be a politician. I have to be a politician.

SRI K.J.GEORGE:- That may be your version.

DR. JEEVARAJ ALVA:- For heaven sake, it is not with exaggeration or arrogance I say-yes-I have an insight into the functioning of your Governments; successive Governments. What happens, when it happens and how it happens. ನಾನು ಇದೇ ಮಾತನ್ನು ಮಾನ್ಯ ಮುಖ್ಯಮಂತ್ರಿಗಳಾದ ಬಂಗಾರಪ್ಪನವರಿಗೂ ಹೇಳಿದ್ದೆ. ಈ ಫೋನ್ ಟ್ಯಾಪಿಂಗ್ ಪ್ರಸಂಗ ಬಂದಾಗ ನನ್ನನ್ನೂ ಕೇಳಿದರೂ. ನನಗೆ ಗೊತ್ತಿದೆ ಎಂದು ಹೇಳಿದೆ. ಏಕೆಂದರೆ ನಾವೆಲ್ಲಾ ಈ ವ್ಯವಸ್ಥೆಗೆ ಪಾಲುದಾರರು. ಅತ್ಯಂತ ಅಸಂಬದ್ಧವಾದ ಫೋನ್‌ಟ್ಯಾಪ್ ಕೆಲಸ ಮಾಡಿ, ನಾವು ಆ ನೋವು ಅನುಭವಿಸಿದ್ದೇವೆ. ನಾವು ಮೊರಲಿ ರೈಟ್ ಅಂತ ಹೇಳಿದ್ದರೆ ನಾನು ನಂಬಲಿಕ್ಕೆ ತಯಾರು ಇಲ್ಲ. We know how it is done. Unfortunately, we cannot express it.

ಶ್ರೀ ಕೆ.ಜೆ. ಜಾರ್ಜ್:- ಆಳ್ವರವರೇ ಒಂದು ನಿಮಿಷ ಇದೆ ಸ್ಪಿರೀಟ್, ಈ ಮಾತು ಹಿಂದೆ ಎಲ್ಲಿ ಹೋಗಿತ್ತು? ಯಲಹಂಕದಲ್ಲಿ ಸುಮಾರು 40 ಕೋಟಿ ರೂಪಾಯಿ ಮನೆಗಳನ್ನು ಕಟ್ಟಿ ಇವತ್ತು ಮಣ್ಣು ಪಾಲಾಗಿದೆ. ನಿಮ್ಮ ಕಾಲದಲ್ಲಿ ಆಗಿರುವುದು ಯಾವ ಯಾವ ಸ್ಕ್ಯಾಂಡಲ್‌ಗಳು ನಡೆದಿವೆ. ಆ ವಿಚಾರದಲ್ಲಿ ನಿಮಗೆ ಇದು ಆಗಿದ್ದಿಲ್ಲ. ಪ್ರತಿಯೊಂದು ವಿಚಾರದಲ್ಲಿ....

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೇ ನಮ್ಮ ಕಾಲದಲ್ಲಿ ಯಲಹಂಕದಲ್ಲಿ ಕಟ್ಟಿರುವ ಮನೆಗಳು ಬಿದ್ದು ಹೋಗಿವೆ ಎಂದು ಆಪಾದನೆ ಮಾಡಿದ್ದಾರೆ. ಈಗ ನಿಮ್ಮ ಕೈಯಲ್ಲಿದೆ ಅಧಿಕಾರ, ನಿಮ್ಮ ಕೈಯಲ್ಲಿ ಅಧಿಕಾರ ಕೊಟ್ಟರೂ ಇದಕ್ಕೆ ಯಾರು ಜವಾಬ್ದಾರರು? ಅವರನ್ನು ಹ್ಯಾಂಗ್ ಮಾಡಿರಿ. ಈಗ ನಾವು ಏನು ಹೇಳುತ್ತಿದ್ದೇವೆ....

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:- ಏನಾದರೂ ತಪ್ಪಾಗಿದ್ದರೆ ಅವರನ್ನು ಹ್ಯಾಂಗ್ ಮಾಡಿ ಎಂದು ಹೇಳುತ್ತಾರೆ.

ಡಾ|| ಜೀವರಾಜ್ ಆಳ್ವ:- ಸನ್ಮಾನ್ಯ ಅಧ್ಯಕ್ಷರೇ, ಪ್ರತಿವರ್ಷ ಸರ್ಕಾರದ ವ್ಯವಸ್ಥೆಯ ಬಗ್ಗೆ ಟೀಕೆ, ನ್ಯೂನತೆ, ಲೋಪದೋಷಗಳನ್ನೂ ಹೇಳಿದಾಗ, ನೀವೂ ಮಾಡಿದಿರಲ್ಲ ಎಂದು ಬಹಳ ಸುಲಭವಾಗಿ ಚರ್ಚೆ ಮಾಡುತ್ತೀರಿ, ಏನು ಇದು? Are they that irresponsible? ನಿಮಗೆ ಏನು ಬೆನ್ನಲುಬು ಇಲ್ಲವೆ, ನಿಮಗೆ ಏನು ಮನುಷ್ಯತ್ವ ಇಲ್ಲವೇ? ಪ್ರತಿ ಸಾರಿ ಯಾವುದೇ ಲೋಪದೋಷಗಳನ್ನು, ನ್ಯೂನತೆಗಳನ್ನು... should you allow this apathy, total callousness on the part of the Government? ಪ್ರತಿ ಸಾರಿ ಏನು ಇದು? ನಮ್ಮ ಸರ್ಕಾರದಲ್ಲಿ ಏನಾದರೂ ಇದ್ದರೆ... you are in the seat of the Government. If you have courage, conviction, order an enquiry and hang us. We are prepared to take the challenge. ನಮ್ಮ ಮಾನ್ಯ ಮುಖ್ಯಮಂತ್ರಿಗಳನ್ನು ನಾನು ಇವತ್ತು ಕೇಳುತ್ತಾ ಇರುವುದು, ಮಾನ್ಯ ಮುಖ್ಯಮಂತ್ರಿಗಳು ಕ್ಲಾಸಿಕ್ ಕಂಪ್ಯೂಟರ್ ಬಗ್ಗೆ ಸಿಬಿಐನವರು ಎನ್‌ಕ್ವೈರಿ ಮಾಡುತ್ತಾರೆಂದರೆ ಇಲ್ಲಿ ಇನ್ನೂ ಅತ್ಯಂತ ದೊಡ್ಡ ಗಹನವಾದ ವಿಚಾರ ನಡೆದಿದೆ. ಒಂದು ಕಡೆ ಇದು ಕರ್ನಾಟಕದ ಅತ್ಯಂತ ಬಡವರಿಗೆ ನಡೆದಂಥ ಮೋಸ. ಏನೋ ಆಶ್ರಯ ಯೋಜನೆಯಲ್ಲಿ ಈ ಕಾಂಗ್ರೆಸ್ ಸರ್ಕಾರ ನಮಗೆ ಮನೆಗಳನ್ನು ಕೊಡುತ್ತದೆ, ಸೈಟುಗಳನ್ನೂ ಕೊಡುತ್ತದೆ ಎಂದು ಸೈಟುಗಳನ್ನು ಕೊಡುವಾಗಲೂ ಮೋಸ. ಎಕ್ಸಾಗರೇಟೆಡ್ ಫಿಗರ್ಸ್ ಬೆನಿಫಿಷಿಯರೀಸ್ ಲಕ್ಷಾಂತರಗಟ್ಟಲೆ ಸೇರಿಸುವುದು. Let there be a total CBI enquiry into the entire scheme and the functioning of HUD Department. I would go a step further. ಇದಕ್ಕೆ ನಿಮಗೆ ಧೈರ್ಯ ಇದೆಯೇ? ಈಗ ನಮ್ಮ ಬಗ್ಗೆ ಹೇಳುತ್ತೀರಿ. ನಮ್ಮ ಸರ್ಕಾರ ಮುಗಿದು ಆರೂವರೆ ವರ್ಷ ಕಾಲ ಆಗಿದೆ. ಅರ್ಬನ್ ಡೆವಲಪ್‌ಮೆಂಟ್ ಇದೆ, ಹೌಸಿಂಗ್ ಇದೆ, ಇಲ್ಲ ನಾವು ಲ್ಯಾಂಡ್ ಎಕ್ಸಂಪ್‌ಷನ್ ಕೊಟ್ಟಿದ್ದೇವೆಯೋ, ನೋಟಿಫಿಕೇಷನ್ ಮಾಡಿದ್ದೇವೋ ಲ್ಯಾಂಡ್ ಯೂಸ್ ಇದರ ಬಗ್ಗೆ ನಾನು ಇವತ್ತು ಗಂಭೀರವಾಗಿ ಆಪಾದನೆ ಮಾಡುತ್ತಾ ಇದ್ದೇನೆ. We have certain values, which we have cultivated. We are proud of the bureaucracy that we have; we are also proud of the Government. ಜಾರ್ಜ್‌ರವರೆ ಒಂದು ಮಾತು, ನಾವೆಲ್ಲಾ ಶಾಸಕರು, ಚರಿತ್ರೆ ನಮ್ಮನ್ನು ತಪ್ಪುಗಾರರಾಗಿ ಭಾವಿಸುತ್ತದೆ. ನಾವು ತಪ್ಪು ಮಾಡಿದ್ದರೆ ಹೌದು ಏನೋ ತಪ್ಪು ಮಾಡಿದ್ದೇವೆ. ಆದರೆ ನೀವು ಅದನ್ನೆ ಅನುಸರಿಸಬೇಡಿ. We have collected funds. We have generated funds. We have generated funds from the people

of the Karnataka State, probably to keep the national opposition parties alive. ನಿಮ್ಮ ಕಾಶ್ಮೀರದ ಫರೂಕ್ ಅಬ್ದುಲ್ಲಾ ಅವರನ್ನು ಕೊನೆಯ ನಮ್ಮ ಕನ್ಯಾಕುಮಾರಿವರೆಗೂ ಅಪೋಸಿಷನ್ ಪಾರ್ಟೀಸ್ ಈ ಕಾಂಗ್ರೆಸ್ಸಿನ ವಿರುದ್ಧ ಶಕ್ತಿಯಾಗಿ ಏರ್ಪಾಟು ಮಾಡಲಿಕ್ಕೆ ಹಣಾನೂ ಕಲೆಕ್ಟ್ ಮಾಡಿದ್ದೇವೆ, ಹಣಾನೂ ಡಿಸ್ಟ್ರಿಬ್ಯೂಟ್ ಮಾಡಿದ್ದೇವೆ. But we have never bartered State interests. ನಮಗೂ ನಿಮಗೂ ಏಕೆ ಕಂಪೇರ್ ಮಾಡಿಕೊಳ್ಳುತ್ತೀರಿ? ತಪ್ಪು ಮಾಡಿದ್ದೀರಿ, ಪಾಪ ಮಾಡಿದ್ದೀರಿ, ಪಾಪದ ಫಲದಲ್ಲಿ ಸಿಕ್ಕಿ ಹಾಕ್ಕಿಕೊಂಡಿದ್ದೀರಿ? ಆದಕ್ಕೆ ಈಗ ಕಂಪೇರ್ ಮಾಡಬೇಡಿ. Don't try to balance. There is a difference. ಸಿಬಿಐ ಎನ್‌ಕ್ವೈರಿ ಮಾಡಿ. ಅಷ್ಟು ಮಾರಲ್ ಇಂಟಿಗ್ರಿಟಿ ನಿಮಗೆ ಇದ್ದರೆ, ಅಷ್ಟು ನೀವು ಚೆನ್ನಾಗಿದ್ದೀರಾ, ಕ್ಲೀನ್ ಆಗಿದ್ದೀರಾ ಎಂದು ಹೇಳುವುದು ಇದ್ದರೆ ಏಕೆ ಈ ಸಂಕುಚಿತತನ ಬಂತು. ನಿನ್ನೆ ನಾನು ಹೇಳಿದೆ. Moral integrity, ಎಂದು ಹೇಳಿ. ಈ unholy alliance ಹೇಗೆ ಆಯಿತು? ಎರಡು ಡೈವರ್ಜೆಂಟ್ ಕಾಂಟ್ರಡಿಕ್ಟರಿ ಪೊಲಿಟಿಕಲ್ ಫೋರ್ಸಸ್ ಬಂತಲ್ಲ, ಸೇರಿಕೊಳ್ಳತಲ್ಲ; ಒಬ್ಬರಿಗೊಬ್ಬರು ಎಲ್ಲಾ ನೋವುಗಳನ್ನು ಮರೆತುಕೊಂಡು ಹೇಗೆ ಸೇರಿಕೊಂಡರು? ಅದರ ಲಾಭಗಳು ಏನು? ಅದರ ಆಳ ಏನು? ನೀವು ಅರ್ಥ ಮಾಡಿಕೊಳ್ಳಿ, ನಾವು ಮಾಡಿಕೊಳ್ಳೋಣ. ಆದರಿಂದ ನನ್ನ ಭಾವನೆಗಳು ಇಷ್ಟೆ. ನಾನು ಅತ್ಯಂತ with all humility ನಮಗೆ ನಾಡಿದ್ದು ಅಧಿಕಾರವರ್ಗ ಬಂದು ಹೇಳುತ್ತಾರೆ. ಎಂಗಸ್ಟರ್ಸ್ ಬಂದು ಹೇಳುತ್ತಾರೆ, ಸ್ವಾಮಿ there was an exodus of bureaucracy to Delhi. There was demand ಇಲ್ಲಿಂದ disengage ಮಾಡಿ, ನಾವು ಕರ್ನಾಟಕದಲ್ಲಿ ಸರ್ವ್ ಮಾಡಿಕೊಳ್ಳುವುದಿಲ್ಲ ಎಂದು ಈಗ ಏಕೆ ಬರುತ್ತಿದ್ದಾರೆ? ಸ್ವಲ್ಪ ಅರ್ಥ ಮಾಡಿಕೊಳ್ಳಿ. It is a very wild allegation that I am levelling. When I say, even if the morale of the bureaucracy is to be improved, the guilty will have to be punished. ನನಗೆ ಕೆಲವು ಸಲ ಅನಿಸುತ್ತದೆ. ಏನಪ್ಪಾ ಈ ವ್ಯಕ್ತಿ ಹೇಗೆ? ಏಕೆಂದರೆ ಹೆಸರುಗಳನ್ನು ಹೇಳಲಿಕ್ಕೆ ಹೋಗುವುದಿಲ್ಲ ಅಧ್ಯಕ್ಷರೆ. ಅಂತಹ ಪ್ರಸಂಗ ಬಂದರೆ, ಸಿಬಿಐ ಎನ್‌ಕ್ವೈರಿ ಬಂದರೆ ಯಾವ ಅಧಿಕಾರಿ ಯಾವ ಟೈಮ್‌ನಲ್ಲಿ ಎಷ್ಟು ತೆಗೆದುಕೊಂಡ, ಯಾವ ವ್ಯಕ್ತಿಯಿಂದ ಎಂದು ಹೇಳುತ್ತೇನೆ ನಾನು. You order for a CBI enquiry; your own bureaucracy, how much, at what time of the hour, at whose house. ಅಧಿಕಾರಿಗಳ ಮನೆಯಲ್ಲಿ ತೆಗೆದುಕೊಳ್ಳುತ್ತಾರೆ ಸ್ವಾಮಿ. ಇಂತಹ ಒಂದು ಲೋಯೆಸ್ಟ್ ಹಂತಕ್ಕೆ ಹೋಗಿದ್ದೇವೆ. ಇದಕ್ಕೆ ನಾವು ನೀವು ಪೂರ್ಣ ವಿರಾಮ ಹಾಕಬೇಕು.

SRI A.K.ANANTHA KRISHNA:- Sweeping allegations are being made. The Hon.Member is repeatedly demanding constituting the CBI enquiry for going through allegations that he has been making. At the same time, he is not convincing this House as to why CBI enquiry should be constituted. With certain specific issues and officers who are responsible for the misuse, misappropriation or abuse of authority - in fact the resolution now moved speak of absolute authority, misuse of funds; all these factors. On this score, the hon.member has got to specifically say. "I will not mention who is the officer, I will not mention by name who is the Minister, I will not mention by name who is the Member, I will not mention by name who is the contractor." How will I be convinced. I am not interrupting. I am only requesting to help me by convincing me to vote with you for demanding the CBI enquiry. That is all.

ಡಾ।। ಜೀವರಾಜ್ ಆಳ್ವ:- ಅಧ್ಯಕ್ಷರೆ, ಮಾನ್ಯ ಅನಂತಕೃಷ್ಣ ಅವರು ದೇಶಪಾಂಡೆ ಅವರು ಮಾತನಾಡಿದಾಗ ಇಲ್ಲ ಎಂದು ಕಾಣುತ್ತದೆ. If the Chair permits me to speak, I will

start again. I am with all humility I said I own the responsibility. All that I demand is a CBI enquiry. Prima facie, it has been established and it is part of Mr.Anantha Krishna's demand. This Ashraya Scandal to my information is the demand of 99 or 100 MLAs. They have signed the whole irregularities committed in the name of Ashraya is probably the demand, one of the major demands forwarded to the Central Observers also.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೆ, ನವೆಂಬರ್ ತಿಂಗಳಲ್ಲಿ ನ್ಯೂಸ್‌ಟ್ರ್ಯಾಕ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು "This Ashraya is the scandal of the Century" ಎಂದು ಹೇಳಿದ್ದಾರೆ. ಇದನ್ನು ಮಾನ್ಯ ಅನಂತಕೃಷ್ಣರವರು ನೋಡಿದ್ದಾರೆಂದು ನನಗೆ ಗೊತ್ತಿಲ್ಲ. ನಾನು ಹೇಳಿದ್ದುದು 45 ಕೋಟಿ ಎಂದು, 80 ಕೋಟಿ ರೂಪಾಯಿ ಆಶ್ರಯ ಸ್ಕೀಮ್‌ನಲ್ಲಿ recognised contractors ಕೊಟ್ಟಿಲ್ಲ. ಯಾರಿಗೆ ಅನುಭವ ಇಲ್ಲ ಅಂತಹವರಿಗೆ ಕೊಟ್ಟಿದ್ದಾರೆ ಎಂದು ತಮ್ಮ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಕಂಪ್ಯೂಟರ್ ವಿಚಾರದಲ್ಲಿ ಸಿ.ಬಿ.ಐ.ನವರು ಎನ್‌ಕ್ವೈರಿ ಮಾಡುತ್ತಿದ್ದಾರೆ. ನಾನು ಅದನ್ನು ಸ್ವಾಗತ ಮಾಡುತ್ತೇನೆ. ಅಲ್ಲಿಯ ವ್ಯವಹಾರ 5.5 ಕೋಟಿ ರೂಪಾಯಿದ್ದು, 1 ಕೋಟಿ 58 ಲಕ್ಷ ರೂಪಾಯಿಯನ್ನು ಅಷ್ಟೆ ಅಡ್ವಾನ್ಸ್ ಕೊಟ್ಟಿದ್ದರು. ಇಲ್ಲಿ ನಾನು 45 ಕೋಟಿ ರಿಲೀಸ್ ಆಗಿದೆ ಎಂದು ಹೇಳಿದೆ. ಇಲ್ಲೀಗಲ್ ಆಗಿ 185 ಕೋಟಿ ರೂಪಾಯಿಗಳ ಕಂಟ್ರಾಕ್ಟ್ ಕೊಟ್ಟಿದ್ದಾರೆಂದು ಹೇಳಿದ್ದಾರೆ. ಕಂಟ್ರಾಕ್ಟರ್‌ದಾರರು ಮಹಾರಾಷ್ಟ್ರ ಮತ್ತು ಆಂಧ್ರದಲ್ಲಿದ್ದಾರೆಂದು ಹೇಳಿದ್ದಾರೆ. ಎನ್‌ಕ್ವೈರಿ ಮಾಡಬೇಕಾದರೆ ಸಿ.ಓ.ಡಿ.ಯಿಂದ ಆಗುವುದಿಲ್ಲ. ಸಿ.ಬಿ.ಐ. ಬೇಕೆಂದು ಅದಕ್ಕೆ ಹೇಳಿದೆ. ನಿಮ್ಮ ಮುಖ್ಯಮಂತ್ರಿಗಳು, I rely on the statement made by the Hon.Chief Minister itself. Government can take a decision on that itself.

ಡಾ|| ಜೀವರಾಜ್ ಆಳ್ವ:- ನಮ್ಮ ಎಲ್ಲಾ political culture, ethos, credibility, primarily the credibility of the bureaucracy and political fraternity, ಉಳಿಯಬೇಕಾದರೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಸಂಬಂಧಪಟ್ಟ ಸಚಿವರು ಇದರ ಬಗ್ಗೆ ಸಿ.ಬಿ.ಐ. ಎನ್‌ಕ್ವೈರಿ ಮಾಡಬೇಕೆಂದು ತಮ್ಮ ಮೂಲಕ ಒತ್ತಾಯ ಪೂರ್ವಕವಾಗಿ ಅವರನ್ನು ಮನವಿ ಮಾಡಿಕೊಳ್ಳುತ್ತೇನೆ.

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ):- ಮಾನ್ಯ ಅಧ್ಯಕ್ಷರೆ, ಗೃಹಮಂಡಳಿಯ ಕಾರ್ಯವೈಖರಿಯ ಹಿನ್ನೆಲೆಯಲ್ಲಿ ಚರ್ಚೆ ನಡೆದಿದೆ. ಅನೇಕ ಶಬ್ದಗಳಿಂದ, ಅನೇಕ ಪದಗಳಿಂದ, ವಿರೋಧ ಪಕ್ಷದ ನಾಯಕರು, ಮತ್ತು ಮಾನ್ಯ ವಿರೋಧ ಪಕ್ಷದ ಮಿತ್ರರು ಟೀಕೆ ಮಾಡಿದ್ದಾರೆ. ವಿರೋಧ ಪಕ್ಷದಲ್ಲಿ ಕುಳಿತು ಮಾತನಾಡುವಾಗ ಸರ್ಕಾರವನ್ನು ಟೀಕೆ ಮಾಡತಕ್ಕದ್ದು ಸ್ವಾಭಾವಿಕವಾಗಿದೆ. ಆದರೆ ಅವರು ಟೀಕೆ ಮಾಡುವಾಗ ರಾಗದ್ವೇಷದಿಂದ ಹೊರತಾಗಿ ಅವರ ಹಿಂದೆ ರಾಜಕೀಯ ದ್ವೇಷ ಮತ್ತು ರಾಜಕೀಯ ಉದ್ದೇಶವೇ ಅವರ ಟೀಕೆಯ ಹಿನ್ನೆಲೆಯಲ್ಲಿ ಇರತಕ್ಕಂಥದ್ದು. ಅದನ್ನು ಬಿಟ್ಟು ತೆರೆದ ಕಣ್ಣಿನಿಂದ ತೆರೆದ ಮನಸ್ಸಿನಿಂದ ಚರ್ಚೆ ಮಾಡಿದ್ದರೆ ಒಳ್ಳೆಯದಾಗುತ್ತಿತ್ತು ಎನ್ನತಕ್ಕ ಭಾವನೆ ನನ್ನದಾಗಿದೆ. ಏಕೆಂದರೆ ನಾನೊಬ್ಬ ಶಾಸಕನೂ ಹೌದು ಗೃಹಮಂಡಳಿಯ ಅಧ್ಯಕ್ಷನಾಗಿ ಕೆಲಸ ಮಾಡಿದ್ದರಿಂದ ಸರ್ಕಾರದ ಪರವಾಗಿ ಮಂತ್ರಿಗಳೇ ಉತ್ತರ ಕೊಡಬೇಕು. ವಾಸ್ತವಿಕವಾಗಿ ನಾನು ಮಾತನಾಡಬಾರದು. ಒಬ್ಬ ಶಾಸಕನಾಗಿ ಇರುವುದರಿಂದ ಅದರಲ್ಲಿಯೂ ವಿರೋಧ ಪಕ್ಷದ ನಾಯಕರಾದಂತಹ ಮಾನ್ಯ ದೇಶಪಾಂಡೆಯವರು ಮೊನ್ನೆ ಮಾತನಾಡತಕ್ಕಂಥ ಕಾಲದಲ್ಲಿ ನನ್ನ ಹೆಸರನ್ನು ಪ್ರಸ್ತಾಪ ಮಾಡಿದ್ದಾರೆ. ಅಲ್ಲದೆ ಸಾರ್ವಜನಿಕವಾಗಿ ಕ್ಷಮೆಯನ್ನು ಕೇಳಬೇಕು, ಅವರು ತಪ್ಪಿನಿಂದ ತಪ್ಪಿಸಿಕೊಳ್ಳುವುದಕ್ಕೆ ಆಗುವುದಿಲ್ಲ ಎನ್ನತಕ್ಕಂಥ

ಅತ್ಯಂತ ಬಿರುನುಡಿಗಳ ಭಾಷೆಯ ಬಲದಿಂದ ತಮ್ಮ ಬಲೆಯನ್ನು ಬಿಚ್ಚಿ ಚರ್ಚೆಗೆ ದೊಡ್ಡ ಶಕ್ತಿಯನ್ನು ತಂದುಕೊಡುವಂತಹ ಪ್ರಯತ್ನವನ್ನು ಮಾಡಿದ್ದಾರೆ. ಇದಕ್ಕೆ ನಾನು ಸಣ್ಣ ಉತ್ತರವನ್ನು ಕೊಡಬೇಕೆಂದು ಬಂದಿದ್ದೇನೆ. ವಾಸ್ತವಿಕವಾಗಿ ನಾನು ಬರಬೇಕಾದಂತಹ ಸ್ಥಿತಿಯಲ್ಲಿರಲಿಲ್ಲ. ಆದರೆ ಹೇಡಿಯಾಗಿ ಓಡಿಹೋಗುವುದಕ್ಕೆ ನಾನು ಸಿದ್ಧನಿಲ್ಲ. ರಾಜಕೀಯವಾಗಿ ಇಂಥಾದ್ದನ್ನು ನಾನು ಎದುರಿಸಲೇಬೇಕು, ಉತ್ತರವನ್ನು ಕೊಡಲೇಬೇಕು. ತಪ್ಪು ಅರ್ಥ ಬಂದಿತು ಎನ್ನುವ ಕಾರಣಕ್ಕಾಗಿ ನಾನು ಬಂದಿದ್ದೇನೆ.

12.45 ಪಿ.ಎಂ

ಎರಡು ಪ್ರಮುಖವಾದಂಥ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಒಂದು 'ಆಶ್ರಯ' ಯೋಜನೆಯ ಬಗ್ಗೆ ಮತ್ತೊಂದು ಗೃಹಮಂಡಳಿಯಿಂದ 3 ಭಾಗಗಳಲ್ಲಿ ಮೈಸೂರು, ಕೆಂಗೇರಿ, ಯಲಹಂಕದಲ್ಲಿ ಕಟ್ಟಿರುವ ಮನೆ ಯೋಜನೆಯ ವಿಚಾರದಲ್ಲಿ. ಇವೆರಡನ್ನೇ ಆಧಾರವಾಗಿಟ್ಟುಕೊಂಡು ಚರ್ಚೆ ಮಾಡಿದ್ದಾರೆ. ಮೊದಲು ಆಶ್ರಯ ಯೋಜನೆಯ ಬಗ್ಗೆ ಹೇಳುತ್ತೇನೆ. ಇಡೀ ಭಾರತ ದೇಶದಲ್ಲಿಯೇ ಮೊದಲನೆಯ ಬಾರಿಗೆ ಒಂದು ರಾಜ್ಯದಲ್ಲಿ ಮೂರು ಲಕ್ಷ ಮನೆಗಳನ್ನು ಒಂದು ವರ್ಷದಲ್ಲಿ pre-fabricated technologyಯನ್ನು ಉಪಯೋಗಿಸಿಕೊಂಡು ಕಟ್ಟಬೇಕು ಎನ್ನತಕ್ಕ ತೀರ್ಮಾನವನ್ನು ಮಾಡಿರತಕ್ಕದ್ದು ನಮ್ಮ ಕರ್ನಾಟಕ ರಾಜ್ಯ. ಈ ತಾಂತ್ರಿಕತೆಯಿಂದ ಮನೆಗಳನ್ನು ಕಟ್ಟುವುದು ಬಹಳ ಉತ್ತಮ, ಬಹಳ ಬೇಗ ಮನೆಯನ್ನು ಕಟ್ಟಲು ಸಾಧ್ಯವಾಗುತ್ತದೆ, ಬಡವರಿಗೆ ಕಟ್ಟತಕ್ಕ ಮನೆಗಳಿಗೂ ಕೂಡ ಸಿಮೆಂಟ್‌ನ್ನು ಬಳಸಬಹುದು ಮತ್ತು ಬಹಳ ಕಾಲ ಬಾಳಿಕೆ ಬರುತ್ತದೆ ಎನ್ನತಕ್ಕ ಉದ್ದೇಶದಿಂದ ಮಾಡಿದ್ದೇ ಹೊರತು ಬೇರೆ ಏನಿಲ್ಲ. ಹಿಂದೆ ರೂರಲ್ ಹೌಸಿಂಗ್‌ನವರು ಮನೆಗಳನ್ನು ಕಟ್ಟಿದರಲ್ಲ, ಅಥವಾ ಸ್ಥಳೀಯವಾಗಿ ಸಿಗತಕ್ಕ ವಸ್ತುಗಳನ್ನು ಬಳಸಿಕೊಂಡು ಸಾಂಪ್ರದಾಯಿಕ ಪದ್ಧತಿಯೆಂದು ಮನೆಗಳನ್ನು ಕಟ್ಟಿದ್ದರಲ್ಲಾ ಆ ರೀತಿ ಮಾಡಿದ್ದರೆ ನಿಮ್ಮಿಂದ ಈ ರೀತಿ ಹೇಳಿಸಿಕೊಳ್ಳಬೇಕಾದಂಥ ಅಗತ್ಯವಿರಲಿಲ್ಲ. 6 ತಿಂಗಳಲ್ಲಿ ಒಂದು ವರ್ಷದಲ್ಲಿ ಮನೆಯನ್ನು ಕಟ್ಟಿ ತೋರಿಸಿದ್ದರೆ ಆಗ ನಾನು ಹೇಳುತ್ತಿದ್ದೆ. ಈಗ ಸರ್ಕಾರ 40 ಸಾವಿರ ಮನೆಗಳನ್ನು ಗೃಹಮಂಡಳಿಗಳಿಂದ ಮತ್ತು 60 ಸಾವಿರ ಮನೆಗಳನ್ನು ಜಿಲ್ಲಾಧಿಕಾರಿಗಳ ಮುಖಾಂತರ ಕಟ್ಟಿಸುತ್ತೇವೆಂದು ಎನ್ನುವ ತೀರ್ಮಾನ ಮಾಡಿದೆ. ಜಿಲ್ಲಾಧಿಕಾರಿಗಳ ಮುಖಾಂತರ ಕಟ್ಟತಕ್ಕ ಮನೆಗಳು ಏನಿವೆ ಅವುಗಳು pre-fabricated technologyಯಿಂದ ಕಟ್ಟತಕ್ಕ ಮನೆಗಳು. ಅಲ್ಲಿ ಸಾಂಪ್ರದಾಯಿಕ ಪದ್ಧತಿಯ ಪ್ರಕಾರ ಅದೇ ರೀತಿಯಲ್ಲಿ ಮನೆಗಳನ್ನು ಕಟ್ಟಿ ಎಂದು ಗೃಹಮಂಡಳಿಗೆ ಹೇಳಿದ್ರೆ ಅವರು ಜೂನ್‌ನೊಳಗೆ 1 ಲಕ್ಷ ಮನೆಗಳನ್ನು ಕಟ್ಟಲು ಶಕ್ತಿ ಇದೆ. ಸಾಂಪ್ರದಾಯಿಕ ಪದ್ಧತಿಯ ಪ್ರಕಾರ, ಕನ್‌ವೆನ್‌ಷನ್ ಟೈಪ್ ಪ್ರಕಾರ ಸ್ಥಳೀಯ ಪದ್ಧತಿಯನ್ನು ಉಪಯೋಗ ಮಾಡಿಕೊಂಡು ಮನೆಗಳನ್ನು ಕಟ್ಟಲು ಆಗುವುದಿಲ್ಲವೆಂದು ಯಾರು ಹೇಳಿದ್ದರು? ಒಂದು ಕಮಿಟೆಡ್ ಪ್ರೋಗ್ರಾಂ Pre-fabricated technology ಉಪಯೋಗಿಸಿಕೊಂಡು ಮನೆಗಳನ್ನು ಕಟ್ಟಬೇಕು ಎಂಬುದರಿಂದ ಸ್ವಲ್ಪ ವಿಳಂಬವಾಯಿತು. ಕಾರಣವೇನೆಂದರೆ ವಾಸ್ತವಿಕವಾಗಿ ತೀರ್ಮಾನ ಹೆಚ್ಚು ಕಡಿಮೆಯಾದರೂ ಕೂಡ ಈ ವರ್ಕ್ ಆರ್ಡರನ್ನು ಕೊಡತಕ್ಕದ್ದು, ಏಪ್ರಿಲ್, ಮೇ ತಿಂಗಳಿನಲ್ಲಿ ಎಲ್ಲೋ ಒಬ್ಬರಿಬ್ಬರು ಮುಂಚಿತವಾಗಿ ತೆಗೆದುಕೊಂಡರು ನಡೆಯಿತು. 5–6 ತಿಂಗಳ ಆರ್ಡರ್ ಇತ್ತು. ದಯಮಾಡಿ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಆಳ್ವರವರು ನಮ್ಮ ಹೊಸಕೋಟೆಯ ಕೆಲವು ಮಾದರಿ ಮನೆಗಳನ್ನು ನೋಡಬೇಕು, ಅಲ್ಲಿ ಕಟ್ಟಿರುವ ಮಾದರಿ ಮನೆಗಳ ರೂಫಿಂಗ್ ಸಿಸ್ಟಂ ಯಾವ ರೀತಿ ಇದೆ ಎಂಬುದನ್ನು ಹೋಗಿ ನೋಡಬೇಕು. ಅದರಲ್ಲಿ ಯಾವುದಾದರೊಂದನ್ನು ಅಳವಡಿಸಿಕೊಂಡು ಮಾಡುತ್ತೇವೆಂದು ನಾವು ಹೇಳಿದ್ದೇವೆ. ಅದರಲ್ಲಿ ಸಿಮೆಂಟ್ solid blocks, concrete wrappers with tiles, have been used. ನಾವು ಅದನ್ನು ನೋಡಿದಾಗ ಸುಮಾರು 50 ವರ್ಷ ಬಾಳಿಕೆ ಬರುತ್ತದೆ ಎಂದು ತಿಳಿಯಿತು. ಮೈಸೂರಿನಲ್ಲಿ ನಿತ್ಯಾನಂದ ಕನ್‌ಸ್ಟ್ರಕ್ಷನ್‌ನವರು

ಮನೆಗಳನ್ನು ಕಟ್ಟಿದ್ದಾರೆ. ಮೈಸೂರು ಸ್ನೇಹಿತರು ಯಾರಾದರೂ ಇದ್ದರೆ ಆ ಮನೆಗಳು ಚೆನ್ನಾಗಿದೆಯೋ ಅಥವಾ ಇಲ್ಲವೊ ಎಂಬುದನ್ನು ನೋಡಿಕೊಂಡು ಬರಬೇಕು. ಮಂಡ್ಯದಲ್ಲೂ ಅದೇ ರೀತಿಯಲ್ಲಿ ಸ್ವಲ್ಪ ಮನೆಗಳನ್ನು ಕಟ್ಟಿದ್ದಾರೆ. ಆ ತಾಂತ್ರಿಕತೆಯನ್ನು ದಯಮಾಡಿ ನೋಡಿ. ನಮ್ಮ ಭಾಗದ ಶಿವಮೊಗ್ಗ ಮತ್ತು ಭದ್ರಾವತಿಗಳಲ್ಲಿ 'ಮತ್ತು ಶ್ರೀಮಾನ್ ಕರಿಯಣ್ಣನವರ ಕ್ಷೇತ್ರದಲ್ಲಿ ಕೆಲವು ಮನೆಗಳನ್ನು ಇದೇ ರೀತಿಯಲ್ಲಿ ಕಟ್ಟಿರತಕ್ಕದ್ದು ಇದೆ, ಅದನ್ನು ನಾನೇ ನೋಡಿ ಬಂದಿದ್ದೇನೆ, ಅವರುಗಳು ಅದೇ ಬೇಕು ಎಂದು ಹೇಳುತ್ತಾರೆ. ಏಕೆಂದರೆ ಕ್ವಾಲಿಟಿ ಚೆನ್ನಾಗಿದೆ. ಒಂದು ಕಡೆ ವಸ್ತುಗಳನ್ನು ಒಟ್ಟುಗೂಡಿಸಿ, ಎಲ್ಲಾ ವಸ್ತುಗಳನ್ನು ನೂರಕ್ಕೆ ಎಪ್ಪತ್ತೈದು ಭಾಗದಷ್ಟನ್ನು ಸಿದ್ಧಪಡಿಸಿಕೊಂಡು ಹೋದರೆ, ಸ್ವಲ್ಪ ಮೇಲ್ವಿಚಾರಣೆ ಇದ್ದರೆ ಕ್ವಾಲಿಟಿ ಚೆನ್ನಾಗಿರುತ್ತದೆ. ಇವೆಲ್ಲಾ ಇರುವುದರಿಂದ ಹುಡ್ಕೊದವರು, ಬೇರೆ ರಾಜ್ಯದವರು ಮತ್ತು ಒರಿಸ್ಸಾ ರಾಜ್ಯದವರು ಬಂದು ಆ ಮನೆಗಳನ್ನು ನೋಡಿಕೊಂಡು ಹೋದರು. ಅವರೆಲ್ಲರೂ ಅದನ್ನು ಮೆಚ್ಚಿಕೊಂಡು ಹೋದರು. ಈಗ ನಾವು ಎಲ್ಲವನ್ನು ಗುತ್ತಿಗೆದಾರರಿಗೆ ಕೊಟ್ಟರೆ, ಯಾವುದೋ ಊರಿನಲ್ಲಿ ಒಂದು ಶಾಲಾಕಟ್ಟಡವನ್ನು ಕಟ್ಟುವುದಾದರೆ ಅದಕ್ಕೆ ವರ್ಕ್ ಆರ್ಡರನ್ನು ಕೊಟ್ಟ ಕೂಡಲೆ ಮುಂದಿನ ದಿನವೇ ಅಲ್ಲಿ ತಳಪಾಯವನ್ನು ತೆಗೆದುಬಿಡಬಹುದು, ದೊಡ್ಡ ಪ್ರಮಾಣದಲ್ಲಿ ಕೆಲಸವನ್ನು ವಹಿಸಿಕೊಂಡಮೇಲೆ ಅದಕ್ಕೆ ಒಂದು ಸಿದ್ಧತೆ ಬೇಡವೆ? ಇವತ್ತು ಒಂದು ಲಕ್ಷ ಮನೆಗಳಿಗೆ ಆಸ್‌ಬೆಸ್ಟಾಸ್ ಬೇಕೆಂದರೆ ಅದನ್ನು ಮಾಡಿಕೊಡತಕ್ಕ ಫ್ಯಾಕ್ಟರಿಗಳಿವೆ. ಹೆಂಚು, ಟೈಲ್ಸ್ ಬೇಕೆಂದರೆ ಮಾಡಿಕೊಡತಕ್ಕ ವ್ಯವಸ್ಥೆ ಇದೆ, ಒಂದು ಲಕ್ಷ ಮನೆಗಳಿಗೆ ಸಿಮೆಂಟ್ rafters ಬೇಕೆಂದರೆ ಅವುಗಳನ್ನು ಮಾಡಿಕೊಡುವುದಿಲ್ಲವೆ? ಏನು ರೂಫಿಂಗ್ ಮೆಟೀರಿಯಲ್ಸ್ ಮಾಡಿದ್ದೇವೆ ಅದರ ಪ್ರಕಾರ casting ಮಾಡಿದ್ದಾರೆ. ಹೊಸ ಹೊಸ ಸಿದ್ಧತೆಗಳನ್ನು ಮಾಡಬೇಕಾಗುತ್ತದೆ. ಅಂಥ ಯೂನಿಟ್‌ಗಳು ಬರಬೇಕಾಗಿದೆ, ಯಾರ್‍ಯಾರು ಗುತ್ತಿಗೆದಾರರು ಇದ್ದಾರೋ ಅವರು ಇವೆಲ್ಲವುಗಳನ್ನು ಇಟ್ಟುಕೊಂಡಿರುತ್ತಾರೆ. ಇದಲ್ಲದೆ ಪವರ್ ಸಪ್ಲೈಯನ್ನು ತೆಗೆದುಕೊಳ್ಳಲು ಮೂರು ತಿಂಗಳಾಯಿತು. ಅದಕ್ಕಾಗಿ ನಾನೇ ಕೆ.ಇ.ಬಿ.ಯವರ ಜೊತೆ ಓಡಾಡಿ, ಅವರು ಹೈಟೆನ್‌ಷನ್ ಕೊಡಲು ಆಗುವುದಿಲ್ಲವೆಂದು ಹೇಳಿದರು. ಎಲ್ಲಾ ಪವರನ್ನು ಡಿಸ್‌ಚಾರ್ಜ್ ಮಾಡಿದರು. ಆದುದರಿಂದ ಕೆ.ಇ.ಬಿ.ಯವರೊಡನೆ ಚರ್ಚೆ ಮಾಡಿಕೊಂಡು ಪವರನ್ನು ಕೊಟ್ಟಿದ್ದಾರೆ. ಹೀಗಾಗಿ ಈ ಸಿದ್ಧತೆಗಳನ್ನು ಮಾಡಿಕೊಂಡು ಕೆಲಸ ಮಾಡುವಂಥದ್ದಕ್ಕೆ ಸಮಯ ಬೇಕಾಗುತ್ತದೆ. ಇವತ್ತು ಆ ಸಿದ್ಧತೆಗಳು ಆಗಿದೆ. ಹೌಸಿಂಗ್ ಬೋರ್ಡ್‌ನವರೇನು ಜನವರಿ ತಿಂಗಳೊಳಗೆ 30 ಸಾವಿರ ಮನೆಗಳನ್ನು ಕಟ್ಟುತ್ತೇವೆಂದು ಹೇಳಿದ್ದಾರೆ ಅದನ್ನು ಜೂನ್‌ನೊಳಗೆ ಇನ್ನೊಂದು 20–30 ಸಾವಿರ ಮನೆಗಳನ್ನು ಕಟ್ಟಲು ಅವುಗಳಿಗೆ ಶಕ್ತಿ ಇದೆ. ಅಲ್ಲಿನ ಇನ್‌ಫ್ರಾಸ್ಟ್ರಕ್ಚರ್ ಬಿಲ್ಡ್ ಅಪ್ ಆಗಿದೆ. ಆದ್ದರಿಂದ ಆ ಶಕ್ತಿ ಅವುಗಳಿಗೆ ಬಂದಿದೆ. ಅದನ್ನೇ ನಾವು ಇಲ್ಲಿ ಹೇಳಿಕೊಂಡಿದ್ದೇವೆ. ಇನ್‌ಫ್ರಾಸ್ಟ್ರಕ್ಚರ್ ಇಲ್ಲದಿದ್ದರೆ ಏನೂ ಮಾಡುವುದಕ್ಕಾಗುವುದಿಲ್ಲ. ಈಗ 15 ಸಾವಿರ ಮನೆಗಳನ್ನು ಸಾಯಿಲ್‌ನಲ್ಲಿ ಕಟ್ಟುವುದಕ್ಕಾಗುವುದಿಲ್ಲವೆಂದು ಕೆಲವರು ಹೇಳುತ್ತಾರೆ. ಬಿಜಾಪುರದ ಜಿಲ್ಲೆಯಲ್ಲಿ ಅದೇ ಪ್ರಶ್ನೆ ಬಂದಿದೆ. ನಿಮ್ಮ ತಾಲ್ಲೂಕಿನಲ್ಲೂ ಕೂಡ ಅದೇ ಪ್ರಶ್ನೆ ಬಂದಿದೆ. ಏಕೆಂದರೆ black cotton soil ಇದೆ ಇದರಿಂದ ನಾವು ಏನು ಡಿಸೈನ್ ಮಾಡಿದ್ದೇವೆ ಅದನ್ನು ಉಪಯೋಗ ಮಾಡಿಕೊಂಡು ಮನೆಗಳನ್ನು ಕಟ್ಟುವುದಕ್ಕೆ ಆಗುವುದಿಲ್ಲ, ಅದಕ್ಕೆ ತೊಂದರೆಯಾಗಿದೆ. ಆದುದರಿಂದ ದುರುದ್ದೇಶಪೂರಕವಾಗಿ ಬಡವರಿಗೆ ಮನೆಗಳನ್ನು ಕಟ್ಟಿಕೊಡುವಲ್ಲಿ ನಿಧಾನವನ್ನು ಮಾಡಿಲ್ಲ, ಅದಕ್ಕಾಗಿ ಕೊಟ್ಟ ಹಣವನ್ನು ದುರುಪಯೋಗ ಮಾಡಲಿಲ್ಲ. ಏಕೆಂದರೆ ಬಡವರಿಗೆ ಅನ್ಯಾಯ ಮಾಡುವುದೂ ಒಂದೆ ನಾವು ರಾಜಕೀಯದಿಂದ ನಿವೃತ್ತರಾಗುವುದೂ ಒಂದೆ. ಬೆಂಗಳೂರಿನವರಾದ ಆಳ್ವಾರವರು ಇದ್ದಾರೆ. ಇವತ್ತು ಬೆಂಗಳೂರಿನಲ್ಲಿ 'ಆಶ್ರಯ' ಯೋಜನೆಯಡಿಯಲ್ಲಿ 30 ಸಾವಿರ ಮನೆಗಳನ್ನು ಕೊಳಗೇರಿ ನಿವಾಸಿಗಳಿಗೆ ಕಟ್ಟಬೇಕೆಂದು ಮಾಡಿದ್ದೆವಲ್ಲ ಅದಕ್ಕೇನಾಯಿತು? ನಾನು ಮದ್ರಾಸ್‌ಗೆ ಹೋಗಿ ಅಲ್ಲಿ ಅಣ್ಣಾದೊರೆಯವರ

ಕಾಲದಲ್ಲಿ ಅಲ್ಲಿನ ಕೊಳಗೇರಿ ಜನರಿಗೆ ಅಭಿವೃದ್ಧಿ ಪಡಿಸಲು ಮನೆಗಳನ್ನು ಕಟ್ಟಿಸಿಕೊಡತಕ್ಕಂಥ ಒಂದು ಯೋಜನೆಯನ್ನು ಮಾಡಿದ್ದರು, ಅದನ್ನು ನೋಡಿಕೊಂಡು ಬಂದು ಇಲ್ಲೂ ಅದೇ ರೀತಿ ಮಾಡಬೇಕೆಂದು ಮಾಡಿದೆವು. ಆದರೆ ಇವತ್ತು ಎಲ್ಲರ ಸಹಕಾರ ಇದಕ್ಕೆ ಇದ್ದರೆ ಬೆಂಗಳೂರಿನಲ್ಲಿ ಕೊಳಗೇರಿ ಜನರಿಗೆ 30 ಸಾವಿರ ಮನೆಗಳನ್ನು ಕಟ್ಟಿಸಲು ಸಾಧ್ಯವಾಗುತ್ತಿರಲಿಲ್ಲವೆ? ಏಕೆಂದರೆ ಕೊಳಚೆ ನಿವಾಸಿಗಳು ಅದನ್ನು ಬಿಟ್ಟು ಹೊರಗೆ ಬರುವುದಿಲ್ಲ, ಅದೇ ಕೊಳಗೇರಿಯಲ್ಲೇ ಇರುತ್ತಾರೆ, ಅವರಿಗೆ ಏನೇ ಪ್ರಾಮುಖ್ಯತೆಯನ್ನು ಕೊಟ್ಟರೂ ಕೂಡ ಅವರು ಬದಲಾವಣೆಯಾಗುವುದಿಲ್ಲ.

ಶ್ರೀ ಎಂ. ನಾರಾಯಣಸ್ವಾಮಿ:- ತಾವು ಸಹಕಾರ ಕೊಟ್ಟಿದ್ದರೆ ಮನೆಗಳನ್ನು ಕಟ್ಟುತ್ತಿದ್ದೇವೆಂದು ಹೇಳಿದರಲ್ಲಾ, ತಮಗೆ ಯಾರು ಸಹಕಾರ ಕೊಡಲಿಲ್ಲ? ಏಕೆ ಕೊಡಲಿಲ್ಲ?

ಶ್ರೀ ಕಾಗೋಡು ತಿಮ್ಮಪ್ಪ:- ನಾರಾಯಣ ಸ್ವಾಮಿಯವರೆ, ನನಗೆ ಉದ್ವೇಗ ಆದರೆ ಅದನ್ನು ತಡೆದುಕೊಳ್ಳಲಾಗುತ್ತಿಲ್ಲ. ಆದುದರಿಂದ ಇವತ್ತು ಆ ಒಂದು ಯೋಜನೆಯನ್ನು ಕರ್ನಾಟಕ ರಾಜ್ಯದಲ್ಲಿ ಒಂದು ಆಂಧೋಳನದ ರೀತಿಯಲ್ಲಿ ಪ್ರಾರಂಭ ಮಾಡಿದ್ದೇವೆ. ಎಲ್ಲಾ ಕೊಳಗೇರಿಗಳನ್ನು ಬದಲಾವಣೆ ಮಾಡತಕ್ಕ ಸುಮಾರು 30 ಸಾವಿರ ಮನೆಗಳನ್ನು ಸುಮಾರು 71 ಕೊಳಗೇರಿಗಳಲ್ಲಿ ಕಟ್ಟಬೇಕು ಎಂದು ಮಾಡಿದರೂ ಕೂಡ ಅನೇಕ ತೊಂದರೆಗಳಿಂದ ಮಾಡಲು ಆಗಲಿಲ್ಲ. ನಮ್ಮ ಮಲ್ಲಪ್ಪನವರು ನಮಗೆ ಸೈಟುಗಳೇ ಕೊಡಿ ಎಂದು ಹೇಳಿದರು. 10 × 8 ಮತ್ತು 10'' × 12'' ಸೈಟುಗಳನ್ನೇ ಕೊಡಿ ಎಂದು ಕೇಳಿದರು. ಏಕೆಂದರೆ ನಾವು ಮನೆಯನ್ನು ಕಟ್ಟಿದರೆ ಜನರನ್ನು ಮುಂದುವರೆಸಿಕೊಂಡು ಹೋಗಬಹುದು. ಕೆಲವು ಮನೆಗಳನ್ನು ಕಟ್ಟಿದ್ದೇವೆ ಅದನ್ನು ನೋಡಿಕೊಂಡು ಬನ್ನಿ. ಆ ರೀತಿ ಮಾಡುವುದಕ್ಕೆ ಯಾರೂ ಸ್ಪಂದನೆ ಕೊಡದೆ, ಆಶ್ರಯ ಯೋಜನೆಯಲ್ಲಿ ಕೆರೆಗಳನ್ನು ಮಾಡಿದ್ದಾರೆ, ಏನೇನೋ ಮಾಡಿದ್ದಾರೆಂದರೆ ಏನು; ಬೆಂಗಳೂರಿನ ಕೆಲವು ಭಾಗದಲ್ಲಿ ಕೆರೆಯನ್ನು ಇಟ್ಟುಕೊಂಡು ಪೂಜೆಯನ್ನು ಮಾಡುತ್ತಿದ್ದರಲ್ಲ ಅವು ಬಹಳ ಚೆನ್ನಾಗಿದೆಯೊ; ಆ ವಾತಾವರಣ, ನೈರ್ಮಲೀಕರಣ, ಎನ್‌ವೆರಾನ್‌ಮೆಂಟ್ ಏನಾಗಿದೆ....

ಡಾ|| ಜೀವರಾಜ್ ಆಳ್ವ:- ಬೆಂಗಳೂರಿನ ನಾಗರೀಕರಲ್ಲಿ ಒಂದು ಮಾತಿದೆ, ಬೆಂಗಳೂರಿನ ಕೆರೆಗಳನ್ನು ಮಾರಾಟ ಮಾಡಿದರು, ಇನ್ನು ವಿಧಾನಸೌಧವನ್ನು ಮಾರಾಟ ಮಾಡಲು ಹೊರಟಿದ್ದಾರೆಂದು.

ಶ್ರೀ ಕಾಗೋಡು ತಿಮ್ಮಪ್ಪ:- ಫುಟ್ ಬಾಲ್ ಸ್ಟೇಡಿಯಂ ಮಾರಾಟ ಆಗಲಿಲ್ಲವೇನು?

ಡಾ|| ಜೀವರಾಜ್ ಆಳ್ವ:- ಚರಿತ್ರೆ ಇದೆ, ಜನರಿದ್ದಾರೆ, ಫೈಲ್‌ಗಳಿವೆ ಎಲ್ಲವನ್ನೂ ನೋಡೋಣ ಗೊತ್ತಾಗುತ್ತದೆ. ಯಾವ ಫುಟ್‌ಬಾಲ್ ಸ್ಟೇಡಿಯಂನ್ನು ಮಾರಿದ್ದೀರೆಂದು.

ಶ್ರೀ ಕಾಗೋಡು ತಿಮ್ಮಪ್ಪ:- ಅದನ್ನೇ ನಾನು ಕೇಳುತ್ತಿರುವುದು?

ಡಾ|| ಜೀವರಾಜ್ ಆಳ್ವ:- ನೀವು ಏನು ಮಾಡಿದಿರಿ ಎಂತು ಮಾಡಿದಿರಿ ಎನ್ನುವುದಲ್ಲ, ಮುಖ್ಯವಾಗಿ ಬೋರ್ಡ್‌ನ ಅಧ್ಯಕ್ಷರ ಬಗ್ಗೆ, ಹೌಸಿಂಗ್ ಬೋರ್ಡ್‌ನ ಅಧ್ಯಕ್ಷರು ಅವರ ಅಧಿಕಾರದ ಅವಧಿಯಲ್ಲಿ ಅಧಿಕಾರಗಳನ್ನು ಉಪಯೋಗಿಸಿಕೊಂಡು ರಾಜ್ಯದ ಜನತೆಗೆ ವಂಚನೆ ಮಾಡಿದ್ದಾರೆ, ಭ್ರಷ್ಟತೆಯನ್ನು ತಂದಿದ್ದಾರೆ, ಲಂಚಕೋರತನವನ್ನು ಮಾಡಿದ್ದಾರೆ ಇದಕ್ಕೆ ಯಾವುದೇ ಸಿ.ಬಿ.ಐ. ತನಿಖೆಗೆ ಒಳಪಡಿಸಲು ನಾವು ತಯಾರಾಗಿದ್ದೇವೆ, ಏನಾದರು ಅದರಲ್ಲಿ ಅಪೂರ್ಣವಾಗಿದ್ದರೆ ನಾನು ಪ್ರಪ್ರಥಮವಾಗಿ ಚಾಲೆಂಜ್ ಮಾಡುತ್ತಿದ್ದೇನೆ ನಾನು ನನ್ನ ಶಾಸನ ಸಭೆಯ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಕೊಡುತ್ತೇನೆ. ಸಿ.ಬಿ.ಐ.ನಿಂದ ತನಿಖೆಯಾಗಲಿ. ನಮಗೇನು ಗೊತ್ತಿಲ್ಲದ ಕಾಗೋಡು ತಿಮ್ಮಪ್ಪ ಒಂದು ಕಾಲದಲ್ಲಿ ಸಮಾಜವಾದದ ಕಾಗೋಡು ತಿಮ್ಮಪ್ಪ ಎಂದು ಹೆಮ್ಮೆ

ಪಟ್ಟುಕೊಳ್ಳುತ್ತಿದ್ದೆವು, ಸ್ವಾತಂತ್ರ್ಯದ ನಂತರದ 15-20 ವರ್ಷಗಳಿಂದ ಡೀಜನರೇಷನ್‌ನನ್ನು ನೋಡಿದ್ದೇವೆ ಆದರೆ ಈ ಅವಸ್ಥೆಗೆ ಅವರು ಬಂದರಲ್ಲಾ ಎಂದು ನಮಗೆ ಅನುತಾಪ ಅಷ್ಟೇ. ಇವತ್ತಿಗೂ ಕೂಡ ನಿಮ್ಮ ಬಗ್ಗೆ ಪ್ರೀತಿ, ವಿಶ್ವಾಸವಿದೆ. ಕಾಗೋಡ್‌ರವರೆ ದಯವಿಟ್ಟು ಜೀವರಾಜ್ ಆಳ್ವ ಇಂಟೆಗ್ರಿಟಿ ಅದನ್ನು ಮಾತ್ರ ಪರಿಗಣಿಸಿ. ದಯಮಾಡಿ ನಿಮ್ಮಲ್ಲಿ ಆ ಮಿಂಚು, ಸ್ಫೂರ್ತಿ, ಸ್ಪಾರ್ಕ್ಸ್ ಬರಲಿ, ಆ ಸೆಳೆತ ಬರಲಿ, ಆ ಬೇಸಿಕ್ ಆನೆಸ್ಟಿ ಬರಲಿ, ಆ ಹಳೇ ಇಂಟೆಗ್ರಿಟಿ ಏನಿದೆ, ನಮ್ಮ ಕಾಗೋಡು ತಿಮ್ಮಪ್ಪ ಎನ್ನತಕ್ಕದ್ದು ಏನಿದೆ ಅದು ಬರಲಿ ಎಂಬುದನ್ನು ನಾವು ಕಾಯುತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ:- ಬೆಂಗಳೂರು ನಗರದಲ್ಲಿ ಆಶ್ರಯ ಯೋಜನೆಯನ್ನು ನಾವು ಏನು ಮಾಡಿದ್ದೇವೆ ಅದನ್ನು ಪ್ರಶಂಸೆ ಮಾಡಿದ್ದಾರೆ. ಮಾನ್ಯ ಮುನಿಸ್ವಾಮಿಯವರೂ ನಾವೂ ಹೋಗಿ ಒಂದು ಫೌಂಡೇಷನ್ ಹಾಕಿ ಬಂದಿದ್ದೇವೆ. ಇಂಟರೆಸ್ಟ್ ಆಗಿ ಕೆಲಸಮಾಡಿದ್ದೇವೆ. ಒಂದು ಆಂಧೋಳನದ ರೂಪದಲ್ಲಿ ಪ್ರತಿಯೊಬ್ಬರೂ ಅಂದರೆ ಬಿ.ಡಿ.ಎ.ನವರು, ಶಾಸಕರು, ಕಾರ್ಪೊರೇಷನ್‌ನವರು, ಹೀಗೆ ಎಲ್ಲರೂ ಸಹಕಾರವನ್ನು ನೀಡಿದರೆ ಬಹುಶಃ ಒಂದು ಇತಿಹಾಸವನ್ನು ಸೃಷ್ಟಿಸುವಂಥ ರೀತಿಯಲ್ಲಿ ಬೆಂಗಳೂರು ನಗರದ ಕೊಳಚೆ ಪ್ರದೇಶದಲ್ಲಿ ಮನೆಗಳನ್ನು ಕಟ್ಟುವ ಕೆಲಸವನ್ನು ಮಾಡಬಹುದು. ಈಗ 4-5 ಸಾವಿರ ಮನೆಗಳನ್ನು ಕಟ್ಟುವ ಕೆಲಸ ನಡೆಯುತ್ತಿದೆ. ಇವತ್ತು ಇದಕ್ಕೆ ನಾವು ಯೂನಿಟ್ ಕಾಸ್ಟ್‌ನ್ನು ಫಿಕ್ಸ್ ಮಾಡಿದ್ದೇವೆ. ಯಾರು ಈ ಟೆಕ್ನಾಲಜಿಯನ್ನು ಉಪಯೋಗ ಮಾಡಿಕೊಂಡು 15 ಸಾವಿರ ರೂ.ನಲ್ಲಿ ಮನೆಗಳನ್ನು ಕಟ್ಟುತ್ತೇವೆಂದು ಮುಂದೆ ಬರುತ್ತಾರೆ ಅವರೆಲ್ಲರಿಗೂ ನಾವು ಕೊಡುತ್ತೇವೆ. ಪ್ರೀ ಫ್ಯಾಬ್ರಿಕೇಟೆಡ್ ಟೆಕ್ನಾಲಜಿಯನ್ನು ಉಪಯೋಗ ಮಾಡಿಕೊಂಡು ಕಟ್ಟುತ್ತೇವೆಂದು ಯಾರೂ ಕೂಡ ಮುಂದೆ ಬರುವುದಿಲ್ಲ. ಆದರೆ ಅದೇ ಕನ್ವೆನ್‌ಷನಲ್ ಮೆಥೆಡ್‌ನಲ್ಲಿ ಕಟ್ಟಬಹುದೆಂದರೆ ಒಂದೊಂದು ಊರಿಗೆ 10-10 ಜನರು ಮುಂದೆ ಬರುವುದಕ್ಕೆ ತಯಾರಿದ್ದಾರೆ. ಇದರಲ್ಲಿ ಪರ್ಸೆಂಟೇಜ್‌ನ್ನು ಜಾಸ್ತಿ ಕೊಡುವುದಾಗಲಿ, ಇನ್ನೊಂದಾಗಲಿ ಇದ್ದಿದ್ದರೆ ತಾವು ಏನು ಬೇಕಾದರೂ ಹೇಳಬಹುದಿತ್ತು. ಅಂಥಾದ್ದು ಇದರಲ್ಲಿ ಏನೂ ಇಲ್ಲ. ಯೂನಿಟ್ ಕಾಸ್ಟ್ ಫಿಕ್ಸ್ ಆಗಿರುವುದರಿಂದ ಯಾರು ಪ್ರೀ ಫ್ಯಾಬ್ರಿಕೇಟೆಡ್ ಟೆಕ್ನಾಲಜಿಯನ್ನು ಉಪಯೋಗ ಮಾಡಿಕೊಂಡು ಮನೆಗಳನ್ನು ಕಟ್ಟುವುದಕ್ಕೆ ತಯಾರಿದ್ದಾರೋ ಅವರೆಲ್ಲರಿಗೂ ಮನೆಗಳನ್ನು ಕೊಡುವುದಕ್ಕೆ ಅವಕಾಶವಿದೆ. ಆದರೆ ಇದಕ್ಕೆ ಯಾರೂ ಕೂಡ ಮುಂದೆ ಬರುವುದಕ್ಕೆ ತಯಾರಿಲ್ಲ. ಯಾರು ಇದಕ್ಕೆ ತಯಾರಿದ್ದಾರೆ, ಅವರಿಗೆ ನಾವು ಇನ್ವೆಸ್ಟ್ ಮಾಡುತ್ತೇವೆ, ನಮಗೆ ಈ ತಾಂತ್ರಿಕತೆ ಗೊತ್ತಿದೆ ಎಂದು ಮುಂದೆ ಬರುತ್ತಾರೆ ಅಂಥವರನ್ನು ನೋಡಿ ಟೆಕ್ನಿಕಲ್ ಪೀಪಲ್ ಆದಂಥ ಅಧಿಕಾರಿಗಳೇ ಇವರನ್ನು ಸೆಲೆಕ್ಟ್ ಮಾಡಿ ಕೊಟ್ಟಿದ್ದಾರೆ. ಇದರಲ್ಲಿ ತಡವಾಗಿದೆ, ಮೋಸವಾಗಿದೆ, ಬಡವರಿಗೆ ಮನೆ ಕಟ್ಟುವುದರಲ್ಲಿ ಹಿಂದೆ ಬಿದ್ದಿದ್ದಾರೆಂದು ಹೇಳತಕ್ಕದ್ದು ಬೇಡ. ಆ ಟೆಕ್ನಾಲಜಿಯಲ್ಲಿ ನನಗೆ ವಿಶ್ವಾಸವಿದೆ. ಹಿಂದೆ ಒಂದು ಸಾರಿ ಮಾನ್ಯ ಖರ್ಗೆಯವರು ಇದರ ಬಗ್ಗೆ ಪ್ರಸ್ತಾಪ ಮಾಡಿ ಇದು ಬಹಳ ತಡವಾಗುವುದರಿಂದ ಊರಿನಲ್ಲಿ ಸ್ಥಳೀಯವಾಗಿ ಏನೇನು ಸಿಕ್ಕುತ್ತದೆಯೋ ಆ ಸಾಮಾನುಗಳನ್ನೇ ಉಪಯೋಗ ಮಾಡಿಕೊಂಡು ಕಟ್ಟಿಸೋಣ ಎಂದು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಹೇಳಿದರು. ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರು ತಡವಾದರೂ ಚಿಂತೆ ಇಲ್ಲ, ಅದನ್ನೇ ನಾವು ಮಾಡಬೇಕು ಎಂದು ಹೇಳಿದರು. ಹುಡ್ಕೋದಿಂದ ನಮಗೆ ಹಣ ಬರಲಿಲ್ಲ. 176 ಕೋಟಿ ರೂ. ನಾವು ಕೊಡುತ್ತೇವೆಂದು ಹೇಳಿದ್ದರೂ ನಮಗೆ ಹಣ ಬರಲಿಲ್ಲ. ಅಲ್ಲಿ ನಮಗೆ ಕೊಟ್ಟಂಥ ಹಣ ಕೂಡ ಬಹಳ ಕಡಿಮೆ. 400 ಕೋಟಿ ರೂ.ನಲ್ಲಿ ನಮಗೆ ಬಂದಿರತಕ್ಕದ್ದು 22-23 ಕೋಟಿ ರೂ. ನಮಗೆ ಹುಡ್ಕೋದಿಂದ ಇನ್ನೂ 40 ಕೋಟಿ ರೂ. ನಾರ್ಮಲ್ ಅಲೋಕೇಷನ್‌ನಲ್ಲಿ ಮಂಜೂರಾಗಿದೆ. ಅದನ್ನು ನಾವು ತರಿಸಿಕೊಂಡು ಉಪಯೋಗ ಮಾಡಿಕೊಂಡಿದ್ದೇವೆ. 1993-94ನೇ ಸಾಲಿನಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಬಡವರ ಮನೆಗಳನ್ನು ಕಟ್ಟಿಸುವುದಕ್ಕೆ ಎಷ್ಟು ಪ್ಲಾನ್ ಆಲೋಕೇಷನ್ ಆಗಿದೆ, ಏತಕ್ಕೆ ಆಗಿದೆ, ಎಂಬುದನ್ನು ನೋಡಬೇಕು. ಪ್ಲಾನ್ ಅಲೋಕೇಷನ್ ಮೊದಲನೆಯ ಸಾರಿ 200 ಕೋಟಿ

ಮಂಜೂರಾದ್ದರಿಂದ ಇವತ್ತು ಈ ಯೋಜನೆಯನ್ನು ಪ್ರಾರಂಭ ಮಾಡಿದ್ದೇವೆ. ನಾವೂ ನೀವೂ ಎಲ್ಲರೂ ಸೇರಿ ನಿಜವಾಗಿ ಬಡವರಿಗೆ ಕಟ್ಟತಕ್ಕ ಮನೆಯನ್ನು ಶಾಶ್ವತವಾಗಿ, ಸುಭದ್ರವಾಗಿ ಕಟ್ಟಬೇಕೆಂದಿದ್ದರೆ ಪ್ರೀ ಫ್ಯಾಬ್ರಿಕೇಟೆಡ್ ಟೆಕ್ನಾಲಜಿಯನ್ನು ಉಪಯೋಗ ಮಾಡಿಕೊಂಡು ಮಾಡಬೇಕು. ಪ್ರತಿಯೊಂದು ತಾಲ್ಲೂಕಿಗೂ ಒಂದೊಂದು ಬಿಲ್ಡಿಂಗ್ ಸೆಂಟರ್‌ನ್ನು ಮಾಡಬೇಕೆಂದು ಮಾಡಿದ್ದೇವೆ. ಸುಮಾರು 70–80 ಕ್ಯಾಸ್ಟಿಂಗ್ ಯಾರ್ಡ್ ಇವೆ. ಮೆಷಿನರೀಸ್ ಇವೆ. ನಾನು ಹೌಸಿಂಗ್ ಬೋರ್ಡ್‌ನ್ನು ಬಿಡುವುದಕ್ಕೆ ಮುಂಚಿತವಾಗಿ ಎಲ್ಲರಿಗೂ ಡೈರೆಕ್ಷನ್ ಕೊಟ್ಟಿದ್ದೇನೆ. ಕಂಟ್ರಾಕ್ಟರ್‌ಗಳು ಎಲ್ಲಾದರೂ ತಮ್ಮ ಈ ಕೆಲಸವನ್ನು ಮಾಡದಿದ್ದರೆ ಆ ಕ್ಯಾಸ್ಟಿಂಗ್ ಯಾರ್ಡ್ಸ್‌ನಲ್ಲಿ ಇಲಾಖೆಯ ಮುಖಾಂತರವೇ ಬ್ಲಾಕ್ ಮೇಕಿಂಗ್ ಕೆಲಸ ಮಾಡಬೇಕೆಂದು ಹೇಳಿದ್ದೇನೆ. ಇದು ತಡವಾಗುತ್ತದೆ, ಬೇಡ ಎಂದು ಹೇಳುವುದಾದರೆ ಬಿಡಬಹುದು. ನನಗೆ ಅದರಲ್ಲಿ ಆಸಕ್ತಿ ಇಲ್ಲ. ನಾವೆಲ್ಲಾ ಶಾಸಕರಾಗಿ ತಾಲ್ಲೂಕು ಬೋರ್ಡ್‌ನಲ್ಲಿ ಕೆಲಸ ಮಾಡಿದ್ದೇವೆ. ಇವತ್ತು ರೂರಲ್ ಹೌಸಿಂಗ್ ಯಾವರೀತಿ ಆಗಿದೆ ಎಂಬುದನ್ನು ನಾವು ನೋಡಿದ್ದೇವೆ. ಅದರ ಗುಣಮಟ್ಟವನ್ನು ನಾವು ಅಭಿವೃದ್ಧಿಪಡಿಸದಿದ್ದರೆ ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ಈಗ 60 ಸಾವಿರ ಮನೆಗಳನ್ನು ಕಟ್ಟಿಸಬೇಕೆಂದು ಸರ್ಕಾರದವರು ಉದ್ದೇಶಿಸಿದ್ದಾರೆ. ಒಂದು ಮನೆಗೆ 2 ಸಾವಿರ ರೂಪಾಯಿಗಳನ್ನು ಜಿಲ್ಲಾಧಿಕಾರಿಗಳು ಕೊಟ್ಟಿದ್ದಾರೆಂದು ಕೇಳಿದ್ದೇನೆ. ನೀವು ಕೊಟ್ಟಂಥ ಮನೆಗಳಿಗೆ ಯಾವ ರೀತಿಯ ಡಿಸೈನ್ ಇದೆ, ಫೌಂಡೇಷನ್ ಯಾವರೀತಿ ಹಾಕಬೇಕು, ಗೋಡೆಯನ್ನು ಹೇಗೆ ಕಟ್ಟಬೇಕು, ರೂಫಿಂಗ್ ಯಾವರೀತಿ ಇರಬೇಕು, ಜಂಗಲ್ ವುಡ್, ಆಲದ ಮರ, ಬೆಂಕಿ ಹತ್ತಿದ ಮರಗಳನ್ನು ಹಾಕುವುದಕ್ಕಿಂತ ಯಾವ ಜಾತಿಯ ಮರವನ್ನು ರೂಫಿಂಗ್‌ಗೆ ಹಾಕಬೇಕೆಂಬುದನ್ನು ತಾವು ದಯವಿಟ್ಟು ಬರೆದು ಕಳುಹಿಸಿದರೆ ಒಳ್ಳೆಯದು. ಈಗ ಜೆ.ಬಿ.ಯವರು ಹೆಚ್.ಯು.ಡಿ. ಕಾರ್ಯದರ್ಶಿಯಾಗಿದ್ದಾರೆ. ಅವರು ಬಹಳ ಚುರುಕಾಗಿ ಕೆಲಸ ಮಾಡುತ್ತಾರೆ. ಯಾವ ರೀತಿಯ ಮನೆಯನ್ನು ಕಟ್ಟಿಸಬೇಕೆಂದು ತಾವು ಈಗಲೇ ಬರೆದು ಕಳುಹಿಸಿದರೆ ಅನುಕೂಲವಾಗುತ್ತದೆ. ಮಾನ್ಯ ಕುಲಕರ್ಣಿಯವರು ಹೇಳಿದಂತೆ ಬ್ಲ್ಯಾಕ್ ಸಾಯಿಲ್‌ನಲ್ಲಿ ಯಾವರೀತಿ ಫೌಂಡೇಷನ್ ಇರಬೇಕು, ಬೇರೆಕಡೆ ಯಾವರೀತಿ ಫೌಂಡೇಷನ್ ಇರಬೇಕೆಂದು ಬರೆದು ಕಳುಹಿಸಿದರೆ ನಾಳೆಯ ದಿವಸ ಯಾವುದೇ ತಕರಾರು ಇರುವುದಿಲ್ಲ. ಇವೆಲ್ಲಾ ಬರೆದು ಕಳಿಸಿದರೆ ನಾಳೆ ತಕರಾರು ಬೇಡ ಆಲದ ಮರ ಹಾಕಿದ್ದಾರೆ ಅದನ್ನು ಹಾಕಿದರು ಇದನ್ನು ಹಾಕಿದರು ಎನ್ನುವುದೆಲ್ಲಾ ಬೇಡ. ದಯವಿಟ್ಟು ಅದನ್ನು ಮಾಡಿ ಕಳಿಸಿದರೆ ಒಳ್ಳೆಯದು ಆಗುತ್ತದೆ. ಅದರ ಜೊತೆಯಲ್ಲಿ ನಾನು ಈಗಲೂ ಒತ್ತಾಯ ಮಾಡುತ್ತಿದ್ದೇನೆ. ಪ್ರತಿ ತಾಲ್ಲೂಕಿಗೆ ಒಂದು ಸಾವಿರ ಮನೆ ಕಟ್ಟುವಂತಹ ಕೆಲಸದಿಂದ ಹಿಂದೆ ಹೋಗಬೇಡಿ, ತಡವಾದರೂ ಚಿಂತೆ ಇಲ್ಲ ಒಂದು ಸಾವಿರ ಮನೆ ಕಟ್ಟುವುದನ್ನು ಪಕ್ಷ, ಸರಕಾರ ವಾಗ್ದಾನ ಮಾಡಿದೆ, ಅದನ್ನು ಕಟ್ಟುವುದಕ್ಕೆ ಎಲ್ಲಾ ಪ್ರಯತ್ನ ಮಾಡೋಣ. ಆರು ತಿಂಗಳು ತಡವಾದರೂ ಚಿಂತೆ ಇಲ್ಲ. ಒಂದು ವರ್ಷದಲ್ಲಿ ಪ್ರತಿ ತಾಲ್ಲೂಕಿನಲ್ಲಿ ಒಂದು ಸಾವಿರ ಮನೆ ಕಟ್ಟುವಂತಹ ಕೆಲಸಕ್ಕೆ ಪ್ರಯತ್ನ ಮಾಡಬೇಕೆಂದು ಸರಕಾರವನ್ನು ಒತ್ತಾಯ ಮಾಡುತ್ತೇನೆ. ಮುಂಗಡ ಹಣ ಕೊಟ್ಟಿದುದರ ಬಗ್ಗೆ ಟೀಕೆ ಮಾಡಿದ್ದಾರೆ. ಬ್ಯಾಂಕ್ ಗಾರಂಟಿಯಿಂದ ಇನ್ನೊಂದು ಸೆಕ್ಯೂರ್ಡ್ ಅಡ್ವಾನ್ಸ್ ಎಂದು ಕೊಟ್ಟಿದ್ದಾರೆ. ಸೆಕ್ಯೂರ್ಡ್ ಎಗೆನಿಸ್ಟ್ ದಿ ಮೆಟೀರಿಯಲ್ಸ್ ಎಂದು ಕೊಟ್ಟಿದ್ದಾರೆ. ಕರ್ನಾಟಕ ಹೌಸಿಂಗ್ ಬೋರ್ಡ್‌ಗೆ ಬೈಬಲ್ ಯಾವುದು ಲೋಕೋಪಯೋಗಿ ಕೋಡ್, ಇದು ಅಲ್ಲದೆ ಬೇರೆ ಕಾಮಗಾರಿ ವಿಚಾರದಲ್ಲಿಯೂ ಇದನ್ನು ಫಾಲೋ ಮಾಡುತ್ತಾರೆ. ಅದರಲ್ಲಿ ಕಾಮಗಾರಿ ಕೆಲಸ ಮಾಡುವವರು ಇದನ್ನೇ ಫಾಲೋ ಮಾಡುತ್ತಾರೆ. Secured advance against the materials ಎಂದು ಲೋಕೋಪಯೋಗಿ ಇಲಾಖೆ ಕೋಡ್‌ನಲ್ಲಿ ಇದೆ. ವಾಲ್ಯೂಮ್ 1 ಅಂಡ್ 2, ಪ್ಯಾರ 220ರಲ್ಲಿ ಪುಟ 148 – 440ರಲ್ಲಿ ಇದೆ. ಎಲ್ಲಾ ಇಲಾಖೆಯಲ್ಲಿ ಮತ್ತು ಎಲ್ಲಾ ಕಾಮಗಾರಿ ಮಾಡತಕ್ಕಂತಹವರು ಈ ಪದ್ಧತಿಯನ್ನು ಅನುಸರಿಸುತ್ತಾರೆ. Against the materials advance ಕೊಡತಕ್ಕಂಥಾದ್ದು ಇವತ್ತೂ ಇದೆ. ಇದು ಸರಿಯಲ್ಲವೆಂದು ಹೇಳಿದರೆ..

ಶ್ರೀ ಆರ್.ವಿ. ದೇಶಪಾಂಡೆ:- ನಾನು ಮಾತನಾಡುವಾಗ ತಾವು ಇರಲಿಲ್ಲ. ಆಶ್ರಯ ಯೋಜನೆಯನ್ನು ಯಾರೂ ವಿರೋಧ ಮಾಡಲಿಲ್ಲ. ಆಶ್ರಯ ಯೋಜನೆಯ, ಲಾಭ, ಉಪಯೋಗ ಪ್ರೀ ಫ್ಯಾಬ್ರಿಕೇಟೆಡ್ ಟೆಕ್ನಾಲಜಿ ಬಗ್ಗೆ ವಿರೋಧ ಮಾಡಲಿಲ್ಲ. ವಿರೋಧ ಪಕ್ಷದಲ್ಲಿದ್ದು ಆಶ್ರಯ ಯೋಜನೆಯನ್ನು ಸ್ವಾಗತ ಮಾಡಿದ್ದೇವೆ ಬಡವರಿಗೆ ಒಳ್ಳೆಯ ಕೆಲಸವಾಗುತ್ತದೆ. ಒಂದು ತಾಲ್ಲೂಕಿನಲ್ಲಿ ಒಂದು ಸಾವಿರ ಮನೆ ಆಗುತ್ತದೆ ಎಂದು ಅದಕ್ಕೆ ವಿರೋಧವನ್ನು ಯಾರೂ ಮಾಡಲಿಲ್ಲ. ಸರ್ಕಾರದಿಂದ ಏನು ಹಣ ಬಿಡುಗಡೆ ಆಯಿತು. ಆಶ್ರಯ ಸ್ಕೀಮ್‌ನಲ್ಲಿ, ಅಂಬೇಡ್ಕರ್ ಸ್ಕೀಮಿನಲ್ಲಿ ಆ ಹಣ ಮಿಸ್ ಅಪ್ರಾಪ್ರಿಯೇಷನ್ ಮಿಸ್ ಯೂಸ್, ಮಿಸ್ ಅಪ್ಲಿಕೇಷನ್ ಆಯಿತು. ಇಷ್ಟೆ ಅಲ್ಲಿ ಬಂದಿದ್ದು. ಇನ್ನು ಲೋಕೋಪಯೋಗಿ ಇಲಾಖೆಯ ಕೋಡ್‌ನಲ್ಲಿ against the materials ಅಡ್ವಾನ್ಸ್ ಕೊಡಲಿಕ್ಕೆ ಪ್ರಾವಿಜನ್ ಇದೆ ಎಂದು ಹೇಳಿದಿರಿ ಅದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಮೆಟೀರಿಯಲ್ಸ್ ಇರಬೇಕಲ್ಲ. 5.13 ಲಕ್ಷ ಯಾರು ನಾಗರಾಜನ್ ಎನ್ನುವವರಿಗೆ ಮೆಟೀರಿಯಲ್ಸ್ ಕೊಟ್ಟಿರಲ್ಲಾ ಅದು ಯಾರದು ಮೆಟೀರಿಯಲ್ಸ್ ಇರಬೇಕಲ್ಲ Nagarajan himself was the material. ಅದೇ ಒಂದು ಅಸೆಟ್ಸ್. ಆದರೆ ಅದನ್ನೆ ಮೆಟೀರಿಯಲ್ ಎಂದು ತಿಳಿದುಕೊಳ್ಳಿ ಎಂದರೆ ತಿಳಿದುಕೊಳ್ಳುತ್ತೇನೆ. ಅದೇ ರೀತಿ ಬೇರೆ ಬೇರೆ ಕಂಟ್ರಾಕ್ಟರ್‌ಗೆ ಕೊಟ್ಟಿದ್ದೀರಲ್ಲ ಅವರು ಏನೇನು ಮೆಟೀರಿಯಲ್ಸ್ ಇಟ್ಟರು ಉಸುಗು ಇಟ್ಟಿಗೆ, ಕಲ್ಲು ಎಲ್ಲಾ ಬೇಕಲ್ಲ! ಅದು ಇರಲಿಲ್ಲ ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ:- ಮೆಟೀರಿಯಲ್ಸ್ ಇದೆಯೋ ಇಲ್ಲವೋ ಅದನ್ನು ನೋಡಿಕೊಳ್ಳುವವರು ಬೇರೆ ಇರುತ್ತಾರೆ. ಆ ಮೇಸ್ತ್ರಿ ಕೆಲಸ ನಾನು ಮಾಡುವುದಕ್ಕಾಗುವುದಿಲ್ಲ. ಪಾಲಿಸಿ ಬದ್ಧವಾಗಿ ಕೊಡುವಂಥದ್ದು ಕಾನೂನು ಬದ್ಧವಾಗಿ ನಿಯಮಬದ್ಧವಾಗಿ ಇದೆಯೋ ಇಲ್ಲವೋ ಎಂದು ವಿಚಾರ ಮಾಡಿ, ಬ್ಯಾಂಕ್ ಗ್ಯಾರಂಟಿ, ಸೆಕ್ಯೂರ್ಡ್ ಅಡ್ವಾನ್ಸ್ ಎಗೆನಿಸ್ಟ್ ಮೆಟೀರಿಯಲ್ಸ್ ಎಂದು ಕೊಡುವುದು ತಪ್ಪು ಎಂದು ಹೇಳುವುದಾದರೆ ಲೋಕೋಪಯೋಗಿ ಕೋಡ್ ಅನ್ನು ಅನುಸರಿಸುವುದು ಬೇಡ. ನಿಮ್ಮದೇ ಆದಂತಹ ನಿಯಮಗಳನ್ನು ಮಾಡಿ ಕಾನೂನು ತಿದ್ದುಪಡಿ ಮಾಡಿ. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇಲ್ಲ, ಆದರೂ ಚಿಂತೆ ಇಲ್ಲ ಮಾನ್ಯ ಮಂತ್ರಿಗಳ ಮುಖಾಂತರ ಲೋಕೋಪಯೋಗಿ ಕೋಡ್‌ನಲ್ಲಿರತಕ್ಕಂಥ ಸೆಕ್ಯೂರ್ಡ್ ಅಡ್ವಾನ್ಸ್ ಎಗೆನಿಸ್ಟ್ ಮೆಟೀರಿಯಲ್ಸ್ ಎಂದು ಏನು ಇದೆ ಅದನ್ನು ಡಿಲೀಟ್ ಮಾಡಿ ಮಂತ್ರಿಮಂಡಲದಲ್ಲಿ ತೀರ್ಮಾನ ಮಾಡಿ ಎಂದು ಜಿ.ಓ. ಹೊರಡಿಸಿದರೆ ಆಯಿತು. ಇನ್ನು ಮುಂದೆ ಲೋಕೋಪಯೋಗಿ ಇಲಾಖೆ ನೀರಾವರಿ ಇಲಾಖೆ ಬೇರೆ ಇಲಾಖೆಯಲ್ಲಿ ಕಾಮಗಾರಿ ಮಾಡತಕ್ಕಂತಹ ಸಂದರ್ಭದಲ್ಲಿ Secured advance against the materials ಕೊಡಬಾರದೆಂದು ಕಟ್ಟಾಜ್ಞೆಯನ್ನು ಮಾಡಿ. ಅದನ್ನು ಕೊಟ್ಟರೆ ಅದು ಇಲ್ಲೀಗಲ್, ಪನಿಷಬಲ್ ಅಂಡರ್ ಪೀನಲ್ ಕೋಡ್ ಎಂದು ಮಾಡಿ ಅದು ಆಗಿಯೇ ಹೋಗುತ್ತದೆ. ನೀವೂ ಲಾಯರ್ ಆಗಿದ್ದೀರಿ, ಮಿಸ್ ಅಪ್ರಾಪ್ರಿಯೇಷನ್ ಹೇಗಾಗುತ್ತದೆಯೋ ನನಗೆ ಗೊತ್ತಿಲ್ಲ. ಮಿಸ್ ಅಪ್ರೋಪ್ರಿಯೇಷನ್ನಿಗೆ ಡೆಫನೇಷನ್ ಗೊತ್ತಿಲ್ಲವೇ? ಮಿಸ್ ಅಪ್ಲಿಕೇಷನ್ ಎಂದು ಬೇಕಾದರೆ ಹೇಳಿ, ಮಿಸ್ ಅಪ್ರೋಪ್ರಿಯೇಷನ್ ಎನ್ನುವ ಪದವನ್ನು ದೇಶಪಾಂಡೆಯವರು ಬಳಸಿದ್ದಾರೆ ಅಂದರೆ ನನಗೆ ಆಶ್ಚರ್ಯ, ನಾವೆಲ್ಲಾ ಕೋರ್ಟಿನಲ್ಲಿ ಪ್ರಾಕ್ಟೀಸ್ ಮಾಡಿದ್ದೇವೆ. ಆದ್ದರಿಂದ ಮಿಸ್ ಅಪ್ರೋಪ್ರಿಯೇಷನ್ ಪದ ಬಳಸಬೇಡಿ. ಈ ರೀತಿ ವ್ಯಾಖ್ಯಾನ ಮಾಡುವುದರಿಂದ ಟೀಕೆ ಮಾಡುವುದರಿಂದ ಒಂದು ಪ್ರಾಮಾಣಿಕವಾಗಿ ಕೆಲಸ ಮಾಡತಕ್ಕಂತಹ ಸಂಸ್ಥೆಗೆ ಕೆಟ್ಟ ಹೆಸರು ಬರುತ್ತದೆ. ಕಳೆದ ಒಂದು ತಿಂಗಳಿಂದ ಎಲ್ಲಾ ಕೆಲಸ ನಿಂತಿದೆ. 10 ಸಾವಿರ ಮನೆಗಳು ಪೂರ್ತಿಯಾಗುತ್ತವೆ. ಈಗಲೂ 20 ಸಾವಿರ ಮನೆಗಳನ್ನು ಅಥವಾ 40 ಸಾವಿರ ಮನೆಗಳನ್ನು ಗೃಹ ಮಂಡಳಿಯವರು ಮಾಡಬೇಕೆಂದಿದ್ದಾರೆ. ಅದೆಲ್ಲಾ ಪೂರೈಸಬೇಕಾದರೆ ಅಲ್ಪಸ್ವಲ್ಪ ಸೆಕ್ಯೂರ್ಡ್ ಅಡ್ವಾನ್ಸ್ ಕೊಡದೆ ಆಗುವುದಿಲ್ಲ. ಗೃಹ ಮಂಡಳಿಯ ಎಲ್ಲಾ ಅಧಿಕಾರಿಗಳ ಜೊತೆಯಲ್ಲಿ ನಾನು ಚರ್ಚೆ ಮಾಡಿದ್ದೇನೆ. ಅದನ್ನು ಪೂರೈಸಬೇಕಾದರೆ ಅಲ್ಪಸ್ವಲ್ಪ ಸೆಕ್ಯೂರ್ಡ್

ಅಡ್ವಾನ್ಸ್ ಕೊಡದೇ ಪೂರೈಸಬೇಕೆಂದರೆ ಚೌಧರಿಯವರನ್ನೆ ಅಧ್ಯಕ್ಷರನ್ನಾಗಿ ಮಾಡಿ ಕೊಡಿಸಿಬಿಡಿ. ಅವರಾದರೆ ಮಾಡಬಹುದು, ಬೇರೆಯವರು ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ನಾವು ಕೊಟ್ಟಂಥ ಹಣ ವಾಪಸ್ ಬರುತ್ತದೆ. ಮನೆಗಳೂ ಕೂಡ ಆಗುತ್ತದೆ. ಇದು ಆಗಬೇಕಾದರೆ ಗೃಹಮಂಡಳಿಯವರು ಮಾಡಲೇಬೇಕು. ನೀವು ನಮಗೆ ಕೊಟ್ಟಿರುವ ಹಣವನ್ನೆಲ್ಲ ವಸೂಲು ಮಾಡಿ, ಮತ್ತೆ ನಿಮಗೆ ಕೊಟ್ಟಿರತಕ್ಕಂಥ ಜವಾಬ್ದಾರಿಯನ್ನು ನಿರ್ವಹಿಸಿ ಒಳ್ಳೆಯ ಮನೆಗಳನ್ನು ಪೂರೈಸಿ ಎಂದು ಅವತ್ತು ಮಾಡಿದ್ದುದು. ನನಗೆ ಒಂದು ಆಶ್ಚರ್ಯವೇನೆಂದರೆ ಕನಿಷ್ಠ ಒಂದೊಂದು ತಾಲ್ಲೂಕಿನಲ್ಲಿ ಒಂದು 50,000 ಮನೆಗಳನ್ನು ಆ ಟೆಕ್ನಾಲಜಿಯಲ್ಲಿ ಪೂರೈಸಿದರೆ ನೋಡುವುದಕ್ಕೆ ಅವಕಾಶವಾಗುತ್ತದೆ. ನಮ್ಮ ಮಾನ್ಯ ಯಡಿಯೂರಪ್ಪನವರು ಬಂದಿಲ್ಲ. ಅವರ ಕ್ಷೇತ್ರದಲ್ಲಿ ಮೊದಲು 15 ಮನೆಗಳನ್ನು ಮಾಡಿದ್ದೇವೆ. ರೂಫ್ ಲೆವಲ್‌ನಲ್ಲಿ ಹಾಕಿದ್ದಾರೆ. ಕೆಲವರು ಇದು ಏತಕ್ಕೆ ಮಾಡಿದ್ದೀರಿ ಎಂದು ಹೇಳಿದರು. ಕಡೆಗೆ ಅವರೇ ಹೋಗಿ ಮೆಚ್ಚುಗೆ ಸೂಚಿಸಿದ್ದಾರೆಂದು ನಮ್ಮ ಇಂಜಿನೀಯರುಗಳು ಹೇಳಿದರು. ಆದ್ದರಿಂದ ಇವತ್ತು ಆ ಒಂದು ಟೆಕ್ನಾಲಜಿಯನ್ನು ಉಪಯೋಗ ಮಾಡಿಕೊಂಡು ಪ್ರತಿಯೊಂದು ತಾಲ್ಲೂಕಿನಲ್ಲಿ 100–200 ಮನೆಗಳನ್ನು ಮಾಡಿದ್ದಾರೆ. ಅದನ್ನು ನೋಡಿಯಾದರೂ ಕೂಡ ನಾವು ಸ್ವಲ್ಪ ಸಮಾಧಾನಪಟ್ಟುಕೊಳ್ಳುವುದಕ್ಕಾಗುತ್ತದೆ. ಆದಕ್ಕೆ ಸರ್ಕಾರ ಇದನ್ನು ಮಾಡಬೇಕೆಂದು ನಾನಾದರೂ ಕೂಡ ಒತ್ತಾಯ ಮಾಡುತ್ತೇನೆ. ಮತ್ತು ಜೊತೆಗೆ ಇನ್ನು ಸಾವಿರಾರು ಮನೆಗಳನ್ನು ಕಟ್ಟುವಂಥ ಕೆಲಸವನ್ನು ಮಾಡಬೇಕು. ಗೃಹಮಂಡಲಿ ಅಧ್ಯಕ್ಷರ ಬಗ್ಗೆ ನಮ್ಮ ಅಳ್ವ ಸಾಹೇಬರು ಏನೇನೋ ಹೇಳಿದರು. ಬ್ಯೂರೋಕ್ರೆಸಿ ಎಂದು ಹೇಳಿದರು. ದಯವಿಟ್ಟು ಗೃಹಮಂಡಲಿ ಏನು ಇದೆ ಆ ಗೃಹಮಂಡಲಿಗೆ ಚೈತನ್ಯ ಕೊಡುವಂಥ ಕೆಲಸವನ್ನು ನಾವು ಮಾಡಿದ್ದೇವೆ. ಏತಕ್ಕೆಂದರೆ ಆಶ್ರಯ ಯೋಜನೆಯನ್ನು ನಾವಾಗಿಯೇ ಮಾಡಿದ್ದಲ್ಲ. ಸರ್ಕಾರ ನೀವು ಮಾಡಿರಿ ಎಂದು ಕೊಟ್ಟದ್ದು. ಆಶ್ರಯ ಯೋಜನೆಗೆ ಕಪ್ಪುಮಸಿ ಬಳಿಯುವುದು ಬೇಡ. ಏತಕ್ಕೆಂದರೆ ಇವತ್ತು ಅಲ್ಲಿರತಕ್ಕಂಥ ಇನ್‌ಫ್ರಾಸ್ಟ್ರಕ್ಚರ್ ನೋಡಿದರೆ ಇನ್ನು 10 ಸಾವಿರ ಮನೆಗಳನ್ನು ಕಟ್ಟುವುದಕ್ಕೆ ಸಾಧ್ಯವಾಗುತ್ತದೆ.

ಕೆಂಗೇರಿಯಲ್ಲಿ ಮನೆಗಳನ್ನು ಕಟ್ಟಿದ ವಿಚಾರದಲ್ಲಿ ಹೇಳಿದರು. ಕೆಂಗೇರಿಗೆ ಪೂನಾದಿಂದ ಸಿರಿಕೆ ಅಂಡ್ ಕಂಪೆನಿಯವರು ಬಂದಿದ್ದರು. ಮಾನ್ಯ ವೀರೇಂದ್ರ ಪಾಟೀಲ್‌ರವರೇ ಇದ್ದಂಥ ಕಾಲದಲ್ಲಿ ಅವರನ್ನು ಆಹ್ವಾನ ಮಾಡಿದ್ದರು. ನೀವು ಬನ್ನಿ, ಒಳ್ಳೆಯ ಮನೆಗಳನ್ನು ಕಟ್ಟಬೇಕಾದರೆ ನಿಮ್ಮ ಟೆಕ್ನಾಲಜಿ ಚೆನ್ನಾಗಿರುತ್ತದೆಂದು ಹೇಳಿದ್ದರು. ನೀವು ಬಂದು ಡಿಸ್‌ಕಸ್ ಮಾಡಿ ಎಂದು ಹೇಳಿ ಒಂದು ಕಾಗದವನ್ನು ಬರೆದಿದ್ದರು. ಆದನ್ನೇನು ನಾವು ಕಂಡವರಲ್ಲ ಉಂಡವರಲ್ಲ. ಅಂದು ಎನ್.ಪಿ.ಸಿಂಗ್‌ರವರು ಬಿ.ಡಿ.ಎ. ಛೇರ್‌ಮೆನ್ ಆಗಿದ್ದರು. ಜನವರಿ 31, 1990ರಲ್ಲಿ ಒಂದು ಕಾಗದವನ್ನು ಬರೆದಿದ್ದರು....

"Dear Mr. Shirke,

Sub:- Possibility of construction of pre-fabricated houses for various schemes - groups in Bangalore.

ಬರೆದು ಕೊನೆಗೆ ಅವರು ಏನು ಹೇಳಿದ್ದಾರೆಂದರೆ.

(INTERRUPTIONS)

I will read out the operative portion. This is the letter written by Sri N.P. Singh, Chairman, Bangalore Development Authority, Bangalore.

"I would appreciate if either you or any of your senior representative would find time to visit Bangalore and discuss the possibility of

introduction of prefabricated housing Scheme with the undersigned Commissioner and Engineer (Member) BDA and also with the Chairman, Karnataka Housing Board, Bangalore. You may kindly bring with you the comparative cost statement of the Prefabricated technique for the construction of houses with the conventional technique and also the comparison of the time required for the completion or the Housing by the adoption of the two techniques. You may kindly contact the undersigned Commissioner, BDA on the following telephones".

This is the operative portion. ಅದರ ಮೇಲೆ 10-3-90ರಲ್ಲಿ ಹೌಸಿಂಗ್ ಬೋರ್ಡ್‌ನಲ್ಲಿ ಅಲ್ಲಿಯ ಆಫೀಸರ್‌ರವರಿಗೆ ಮಾನ್ಯ ವೀರೇಂದ್ರ ಪಾಟೀಲ್‌ರವರೇ ಇಂಟರ್‌ವ್ಯೂ ಮಾಡಿದ್ದಾರೆ. ಆ ಎಲ್ಲಾ ಆಫೀಸರುಗಳ ಜೊತೆಯಲ್ಲಿ they have held meetings. Afterwards, on 13.3.1990 they have written a letter. The letter reads as follows:

"Kindly accept my most sincere and profound thanks for the interview granted by your honour to me at your residence 'KRISHNA' on Saturday, the 10.3.1990 at a very short notice though your honour is extremely busy.

I am very greatful to your honour for the same and the detailed discussion in such a short time on 10.3.1990 when your honour advised me to give the presentation and discuss the same with the concerned authorities. We will also discuss the same with your honour and submit the proposal for a pilot project". ಅಂಥ ಡೀಟೈಲ್ಸ್ ಎಲ್ಲಾ ಬರೆದಿದ್ದಾರೆ. ಇದಾದಮೇಲೆ ಅವರು ಒಂದು ಪೆಲಟ್ ಪ್ರಾಜೆಕ್ಟ್ ಕೊಟ್ಟು ....

ಶ್ರೀ ಬಿ.ಹೆಚ್. ಬನ್ನಿಕೋಡ್:- ಟೆಕ್ನಾಲಜಿ ಬಗ್ಗೆ ಯಾರೂ ಟೀಕೆ ಮಾಡಿಲಿಲ್ಲ. ಅಲ್ಲಿ ಆದಂತ ವ್ಯವಹಾರದ ಬಗ್ಗೆ, ಹಣಕಾಸಿನ ಬಗ್ಗೆ ಕೆಲಸದ ವಿಳಂಬದ ಬಗ್ಗೆ ಚರ್ಚೆ ನಡೆದಿದೆ. ಟೆಕ್ನಾಲಜಿ ಬಗ್ಗೆ ಪ್ರಶ್ನೆ ಮಾಡಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ:- ಹಾಗೆ ಮಾಡಿಲಿಲ್ಲವೆಂದರೆ ಬಿಡಿ. ನಮ್ಮ ಹೌಸಿಂಗ್ ಕಮಿಷನರ್‌ಗೆ, ಆಗಿದ್ದಂತ ಕಮಿಷನರ್ ಅಂಡ್ ಸೆಕ್ರೆಟರಿ ಟು ಗವರ್ನಮೆಂಟ್ ಅರ್ಬನ್ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟ್‌ನಿಂದ 16-5-1990ರಲ್ಲಿ ಒಂದು ಲೆಟರ್ ಬರೆದಿದ್ದಾರೆ. ಅದು ಈ ರೀತಿ ಇದೆ:

"I am desired to enclose herewith a copy of the letter No..., M/s B.G. Shirke together with the enclosure addressed to the Commissioner and Secretary to Government, Housing and Urban Development Department on the subject cited above and request you to examine the proposal of the above Company and furnish your remarks thereon urgently to Government...."

ಹೀಗೆ ಎಲ್ಲಾ ಪ್ರೊಸೆಸ್ ಆದ ಸಂದರ್ಭದಲ್ಲಿ ನಾನು ಅಲ್ಲಿ ಹೋದಾಗ ಕೆಂಗೇರಿ ಪ್ರಾಜೆಕ್ಟನ್ನು ಮುಂದುವರಿಸಲಾಯಿತು. ಇವತ್ತು ಕನ್‌ಸ್ಟ್ರಕ್ಷನ್ ನಡೆಯುತ್ತಿದೆ. ಹಾಗೆಯೇ ಕುಳಿತಿಲ್ಲ. ಟೆಂಡರ್

ಕರೆದಿದೆ, ಒಂದು ಸಾರಿ ಫ್ರೀ ಕ್ವಾಲಿಫೈಡ್ ಹಾಕಿ ಕರೆದಿದ್ದೆವು. ಕ್ವಾಲಿಫೈಡ್ ಯಾರಿದ್ದರು ಅವರದ್ದು ಮಾತ್ರ ಟೆಂಡರ್ ಓಪನ್ ಮಾಡಿದೆವು. ಸರಕಾರದವರು ಓಪನ್ ಮಾಡಿ ಎಂದು ಹೇಳಿದ ಮೇಲೆ ಎಲ್ಲವನ್ನು ಓಪನ್ ಮಾಡಿ ಲೋಯಸ್ಟ್ ಟೆಂಡರ್‌ದಾರರಿಗೆ ಕೊಡಲಾಯಿತು. ದಯವಿಟ್ಟು ಆಳ್ವರವರು ಮತ್ತು ದೇಶಪಾಂಡೆಯವರು ಕೆಂಗೇರಿಗೆ ಹೋಗಿ ನೋಡಬೇಕು. ಹಣವೆಲ್ಲ ಸರಿಯಾಗಿದ್ದು ಮಾಡುವುದು ಬಹಳ ಸುಲಭ. ಅದಕ್ಕೆ ಸಾಹಸಬೇಕಾಗಿಲ್ಲ. ಹಣ ತರಬೇಕು ಮಾಡಬೇಕು ಕೆಲಸ ಪೂರೈಸಬೇಕು ಅಂದರೆ ಅದರಲ್ಲೇ ಗಂಡಸ್ತನ, ಸಾಹಸ ಇರತಕ್ಕದ್ದು. ಆವತ್ತು ಕೆಂಗೇರಿಯಲ್ಲಿ 3 ಸಾವಿರ ಮನೆಗಳನ್ನು ಕಟ್ಟುವುದಕ್ಕೆ ಹೊರಟಾಗ ನಮಗೆ ಅರ್ಜಿ ಇದ್ದದ್ದು 900 ಮಾತ್ರ. ಇವತ್ತು ಕ್ಯೂ ನಿಂತಿದ್ದಾರೆ. ಆ ಕಟ್ಟಡದ ರೂಪ ಮತ್ತು ಗುಣಮಟ್ಟವನ್ನು ನೋಡಿ ಜನ ಮುಂದೆ ಬಂದಿದ್ದಾರೆ. ದಯವಿಟ್ಟು ತಾವು ಬನ್ನಿ ಹೋಗಿ ನೋಡಿ ಬರೋಣ. ಅದನ್ನು ನೋಡಿದರೆ ನನಗೆ ಸಂತೋಷ, ಸಮಾಧಾನವಾಗುತ್ತಿದೆ. ಈ ಒಂದು ಅವಧಿಯಲ್ಲಿ ಕರ್ನಾಟಕ ಗೃಹಮಂಡಳಿಯವರು ಕಟ್ಟುವ ಮನೆ ಅಂದರೆ ಅಧ್ವಾನ, ಏತಕ್ಕೂ ಬೇಡ, ಇವರು ಮೋಸ ಮಾಡುತ್ತಾರೆ ಎಂಬ ಅಪಖ್ಯಾತಿ ಬಂದಿತ್ತು. ಆ ಅಪಖ್ಯಾತಿ ದೂರ ಇರಬೇಕೆಂದರೆ ಈ ಪ್ರೀ ಫ್ಯಾಬ್ರಿಕೇಟೆಡ್ ಟೆಕ್ನಾಲಜಿಯನ್ನು ಉಪಯೋಗಿಸಿಕೊಂಡು ಮನೆ ಕಟ್ಟಿದರೆ ಅಪಖ್ಯಾತಿ ಹೋಗಿ ಗೌರವ ಸಂಪಾದನೆ ಮಾಡಬಹುದು. ಹಿಂದೆ ತಿಮ್ಮೇಗೌಡರ ಕಾಲದಲ್ಲಿ ಏನು ಒಳ್ಳೆಯ ಮನೆ ಕಟ್ಟಿ ಒಳ್ಳೆಯ ಹೆಸರು ಸಂಪಾದನೆ ಮಾಡಿದ್ದರು, ಖ್ಯಾತಿ ಹೊಂದಿದ್ದರು ಅಂಥ ಕಾಲ ಮತ್ತೆ ಬರಬೇಕೆಂಬ ಉದ್ದೇಶದಿಂದ ಕೆಂಗೇರಿಯಲ್ಲಿ ಕಟ್ಟಿದ ಒಳ್ಳೆಯ ಗುಣಮಟ್ಟವನ್ನು ಮತ್ತು ಒಂದು ಗೊತ್ತಾದ ಕಾಲಮಿತಿಯಲ್ಲಿ ಕಟ್ಟುವುದನ್ನು ನೋಡಿ ನನಗೆ ತುಂಬಾ ಮೆಚ್ಚುಗೆಯಾಯಿತು. ನಾನು ಅವರಿಗೆ ಕಾಂಪ್ಲಿಮೆಂಟ್ ಮಾಡಿದೆ. ನಾನು ಅದನ್ನು ನೋಡಿದ ಮೇಲೆ ಅಂಥವರು ಬಂದರೆ ಒಳ್ಳೆಯದು. ಎಲ್.ಟಿ.ಟಿ.ಯವರು ಬಂದರೆ ಒಳ್ಳೆಯದು ಏಕೆಂದರೆ ಈ ಫೀಲ್ಡ್‌ನಲ್ಲಿ ಅವರು ಬಹಳ ಎಕ್ಸ್‌ಪರ್ಟ್ಸ್ ಇದ್ದಾರೆ. ಇವತ್ತಿನ ದಿವಸ ಯಲಹಂಕದಲ್ಲಿ ಮನೆಗಳನ್ನು ಕಟ್ಟಿದ್ದಾರಲ್ಲ ಅಲ್ಲಿ ಹೇಗೆ ಕಟ್ಟಿದ್ದಾರೆಂದರೆ, ಯಲಹಂಕದಲ್ಲಿ 707 ಮನೆಗಳನ್ನು ಕಟ್ಟುವಂಥ ಸಂದರ್ಭದಲ್ಲಿ, ಸಾಯಿಲ್ ಸಿಮೆಂಟ್ ಬ್ಯಾಕ್ ಮಾಡಿ ಕಟ್ಟಬೇಕೆಂದು ಯೋಚನೆ ಮಾಡಿ ಕಟ್ಟಿ ಆಯಿತು. ಇವತ್ತು ಅದನ್ನು ನೋಡಿದರೆ ನಾಚಿಕೆ ಪಡಬೇಕು. ಯಾರಿಗೂ ಉತ್ತರ ಹೇಳುವ ಹಾಗೆ ಇಲ್ಲ. ಗುಣಮಟ್ಟ ಹೋಗಲಿ, ಬೆರಳು ಹಾಕಿದರೆ ಉದುರುತ್ತದೆ. ಏನು ಮಾಡಬೇಕು? ನಾನು ಅದನ್ನೆಲ್ಲ ಎತ್ತಿ ಎಣಿಸಲಿಕ್ಕೆ ಹೋಗಲಿಲ್ಲ. ಅವರ ಕಾಲದಲ್ಲಿ ಆಯಿತು, ಇವರ ಕಾಲದಲ್ಲಿ ಆಯಿತು ಎಂದು ಎತ್ತಿ ಎಣಿಸಲಿಕ್ಕೆ ಹೋಗಲಿಲ್ಲ. ಆಗಿದೆ, ಇದಕ್ಕೆ ಏನಾದರೂ ಪರಿಹಾರ ಮಾಡಬೇಕೆಂದು ರಿಪೇರಿ ಮಾಡುವುದಕ್ಕೆ ತೆಗೆದುಕೊಂಡೆ. ರಿಪೇರಿ ಆಗಲಿಲ್ಲ. ಕಡೆಗೆ ಯೋಚನೆ ಮಾಡಿದೆ, ಅದನ್ನು ಡೆಮಾಲಿಷ್ ಮಾಡಿ 1 × 2 ಮಾಡಿ ಕೆಳಗಿನ ಗ್ರೌಂಡ್ ಫ್ಲೋರನ್ನು ಒರಿಜಿನಲ್ ಅಲಾಟೀಸ್‌ಗೆ ಕೊಟ್ಟು ಮೇಲೆ ಏನಾದರೂ ಮಾಡಿದರೆ ದುಡ್ಡು ಬರುತ್ತದೆಂದು ಯೋಚನೆ ಮಾಡಿದೆ. ಅಲಾಟೀಸ್ ಪೈಕಿ ಸಬಾಯಿತ್ ಎಂಬ ಜರ್ನಲಿಸ್ಟ್‌ಗೆ ಮನೆ ಕೊಟ್ಟಿದ್ದಾರೆ, ಯಾವ ಸ್ಥಿತಿಯಲ್ಲಿದೆ ಆ ಸ್ಥಿತಿಯಲ್ಲಿ ತೆಗೆದುಕೊಳ್ಳುವುದಾದರೆ ಅಗ್ರಿಮೆಂಟ್ ಬರೆದುಕೊಡಿ, ನಾಳೆ ಹೆಚ್ಚು ಕಡಿಮೆಯಾದರೆ ನಾನು ಜವಾಬ್ದಾರಿ ಅಲ್ಲ, ಅನಫಿಟ್ ಫಾರ್ ಹ್ಯೂಮನ್ ರೆಸಿಡೆನ್ಸ್ ಅಂದರೆ ನಾನು ಜವಾಬ್ದಾರನಲ್ಲ, ಆ ರೀತಿ ತೆಗೆದುಕೊಳ್ಳುವುದಾದರೆ ತೆಗೆದುಕೊಳ್ಳಿ ಎಂದೆ. ಅದೇ ರೀತಿ ಅವರು ಬರೆದುಕೊಟ್ಟರು. ಇನ್ನೂ ಕೆಲವರು ಬರೆದುಕೊಟ್ಟು ತೆಗೆದುಕೊಳ್ಳುತ್ತಿದ್ದಾರೆ. ಏಕೆಂದರೆ ಸೈಟು ವ್ಯಾಲ್ಯು ಇದೆ ಎಂದು ತೆಗೆದುಕೊಳ್ಳುತ್ತಿದ್ದಾರೆ. ಅದು ಆ ರೀತಿಯಾಗಿ ಕುಳಿತಿದೆ. ಅದನ್ನು ನೋಡಿದರೆ ನನಗೆ ವ್ಯಥೆಯಾಗುತ್ತಿದೆ. ಸಾರ್ವಜನಿಕರಿಂದ ದುಡ್ಡು ತೆಗೆದುಕೊಂಡು ಈ ರೀತಿ ಮಾಡಿದೆ ಎಲ್ಲ ಎಂದು ನನಗೆ ವ್ಯಥೆಯಾಗುತ್ತಿದೆ. ಇವತ್ತು ಆ ಮನೆ ಸ್ಥಿತಿ ಆ ರೀತಿ ಆಗಿದೆ. ಅದೇ ರೀತಿಯಲ್ಲಿ ಶಿರ್ಕೆಯವರಿಗೆ 5ನೇ ಹಂತದಲ್ಲಿ ಕೊಟ್ಟಿದ್ದೇವೆ. ಒಳ್ಳೆಯ ಟೆಕ್ನಾಲಜಿಯಲ್ಲಿ ಮಾಡುವುದಕ್ಕೆ ಸ್ಯಾಂಕ್ಷನ್ ಮಾಡಿ, ಎಂಟ್ರಸ್ಟ್ ಮಾಡಿ ಕೆಲಸ ಪ್ರಾರಂಭವಾಗಿತ್ತು. ಫೌಂಡೇಷನ್ ಪ್ರಾರಂಭ

ಮಾಡಿದ್ದರು. ಇದನ್ನು ನೋಡಿ ಅಲ್ಲಿ ಹೋದವನು ಎಲ್ಲಾ ನಿಲ್ಲಿಸಿದ್ದಾನೆ. ಇದು ಒಂದು ದುರಂತ ಆದೀತು ಎಂದು ನಿಲ್ಲಿಸಿದೆ. ಏಕೆಂದರೆ ಆ ಟೆಕ್ನಾಲಜಿ ಯಾರು ಕೊಟ್ಟಿದ್ದರು, ಅವರದೇ ಒಂದು ಕಾಗದ ಇದೆ. ಇದು ಮಾಸ್ ಲೆವೆಲ್‌ಗೆ ಹೋಗುವ ಮಟ್ಟಿಗೆ ಟೆಕ್ನಾಲಜಿ ಬೆಳೆದಿಲ್ಲ, ಈಗಲೇ ಮಾಸ್ ಲೆವೆಲ್‌ಗೆ ಹೋಗಬೇಡಿ, ಪ್ರಾಯೋಗಿಕ ಹಂತದಲ್ಲಿರಲಿ ಎಂದು ಬರೆದು ಕೊಟ್ಟಿದ್ದರು. ಅದನ್ನು ಇಗ್ನೋರ್ ಮಾಡಿ ಇದನ್ನು ಮಾಡಿದರು ಆ ಕೆಲಸ ಪ್ರಾರಂಭ ಮಾಡಿದ್ದನ್ನು ನಿಲ್ಲಿಸಿ ಅವರನ್ನು ಕರೆಯಿಸಿ ಅವರಿಂದ ಕನ್‌ಸೆಂಟ್ ತೆಗೆದುಕೊಂಡು ಅವರಿಗೆ 250 ಫ್ಲಾಟ್ ಸಿಸ್ಟಮ್ ಮನೆ ಕಟ್ಟಿಸುವುದಕ್ಕೆ ಅಲ್ಲೇ ಒಂದು ಜಾಗ ಕೊಟ್ಟು, ಅವರಿಂದ ಕಾಂಪೆನ್‌ಸೇಷನ್ ಕೇಳಿದ ರೀತಿಯಲ್ಲಿ ಮಾಡಿ, ಅಲ್ಲೇ 3000 ಮನೆ ಕಟ್ಟುವ ಕೆಲಸವನ್ನು ನಾಗಾರ್ಜುನ ಮತ್ತು ಇವರಿಗೆ ಕೊಟ್ಟಿದ್ದೇವೆ. ಆ ಕೆಲಸ ನಡೆಯುತ್ತಿದೆ; ತಾವು ಹೋಗಿ ನೋಡಿ. ಅದು ಒಂದು ಒಳ್ಳೆಯ ಯೋಜನೆ. ಇವತ್ತು 700 ಮನೆ ಕಟ್ಟಿರುವ ವಿಧಾನ ಮತ್ತು ಸ್ಥಿತಿ ಇದೆಯಲ್ಲ ಅದನ್ನು ಕಟ್ಟಿದವರು ಹಿಂದೆ ಯಾರ ಕಾಲದಲ್ಲಿ ಆಯಿತು ಅವರು ತಲೆ ತಗ್ಗಿಸೋದು ಬೇಡವೇ? ರಾಜ್ಯದ ಜನತೆಗೆ ಕ್ಷಮಾಪಣೆ ಕೇಳುವುದು ಬೇಡವೇ? ನಾನು ಕೇಳಿದ್ದು ಆಯಿತಲ್ಲ, ಅದೇ 405 ಮನೆಗಳನ್ನು ಸೆಲ್ಫ್ ಫೈನಾನ್ಸಿಂಗ್ ಯೋಜನೆ ಅಡಿಯಲ್ಲಿ ಕೊಡಬೇಕಾಗಿತ್ತು. ಬೊಂಬಾಯಿಂದ ಕರೆದುಕೊಂಡು ಬಂದು ಯಾರಿಗೋ ಎಂಟ್ರಸ್ಟ್ ಮಾಡಿದಿರಿ. 4 ವರ್ಷ ಆಯಿತು. ಪರದೇಶಿಗಳು ದುಡ್ಡು ಕೊಟ್ಟು ಬಾಯಿ ಹೊಡೆದುಕೊಳ್ಳುತ್ತಿದ್ದಾರೆ, ಅದು 2 ವರ್ಷಗಳ ಹಿಂದೆ ಪೂರ್ಣವಾಗಬೇಕಾಗಿತ್ತು, ಇದುವರೆಗೆ ಆಗಿಲ್ಲ. ನಾನು ಏನೆಲ್ಲಾ ಪ್ರಯತ್ನ ಮಾಡಿದರೂ ತಪ್ಪಿಸಿಕೊಂಡು ಓಡಾಡುತ್ತಾನೆ, ಬರುವುದಿಲ್ಲ. ಪ್ರಾಫಿಟಬಲ್ ಪೋರ್ಷನ್ ವರ್ಕ್ ಎಲ್ಲಾ ಕಂಪ್ಲೀಟ್ ಆಗಿದೆ. ಈಗ ಫೈನಲ್ ಸ್ಟೇಜ್ ಎಂದರೆ ಅದು ಪ್ರಾಫಿಟಬಲ್ ಅಲ್ಲ. ಇವತ್ತು 80 ಮನೆಗಳ ಬಗ್ಗೆ ಟೈಮ್ ಟೇಬಲ್ ಹಾಕಿ ಇಷ್ಟು ದಿವಸದಲ್ಲಿ, ಇಷ್ಟನೇ ತಾರೀಖಿನಲ್ಲಿ ಇಂತಿಷ್ಟು ಮನೆ ಆಗಬೇಕೆಂದು, ಅವರಿಗೆ ಸ್ವಾಧೀನ ಮಾಡಬೇಕೆಂದು ಹೇಳಿದ್ದೇವೆ. 450 ಮನೆಗಳು 2 ವರ್ಷದಲ್ಲಿ ಆಗಬೇಕಾದದ್ದು 4 ವರ್ಷ ಆಗಿದೆ. ಅಲಾಟೀಸ್ ಹಣ ಕೊಟ್ಟು ಕಣ್ಣೀರು ಹಾಕುತ್ತಿದ್ದಾರೆ. ಸಾಲ ಮಾಡಿ ನಾವು ಹಣ ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. ಡಿಸೆಂಬರ್ ಒಳಗೆ ಮಾಡಬೇಕೆಂದರೆ ಆಗುವುದಿಲ್ಲ. ಇನ್ನೂ 6 ತಿಂಗಳು ಆದರೂ ಕೂಡ ಆಗುವುದಿಲ್ಲ. ಬೊಂಬಾಯಿಯಿಂದ ಕರೆದುಕೊಂಡು ಬಂದರು ಅದಕ್ಕೆ ಸರ್ಕಾರದ ಮಂಜೂರಾತಿ ಇಲ್ಲ. ಇಂತಹ ಕೆಲಸ ಎಂಟ್ರಸ್ಟ್ ಮಾಡಿ, ಇಂತಹ ಕೆಲಸ ಮಾಡಿದ್ದಾರಲ್ಲ, ಇಂಥ ಕೆಲಸ ಮಾಡಿದ್ದಕ್ಕೆ ದೇಶದ ಜನರಿಗೆ, ರಾಜ್ಯದ ಜನರಿಗೆ ಕ್ಷಮಾಪಣೆ ಕೇಳುವ ಅಗತ್ಯ ಇಲ್ಲವೇ? ನಾನು ಯಲಹಂಕದ ಮನೆಗಳ ಬಗ್ಗೆ ಹೇಳುತ್ತಿರುವುದು.

ಶ್ರೀ ಆರ್.ವಿ. ದೇಶಪಾಂಡೆ:- ಅದರ ಬಗ್ಗೆಯೂ ಎನ್‌ಕ್ವಯರಿ ಆಗಲಿ.

ಶ್ರೀ ವೈ.ಕೆ. ರಾಮಯ್ಯ:- ಇಲ್ಲಿ ಪರೋಕ್ಷವಾಗಿ ಚರ್ಚೆ ಸಾಗುತ್ತಿದೆ. ಒಂದು ವಿಚಾರ ಸದನದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಬಹಳ ಕಾಲ ನಾನು ಗೃಹಮಂಡಳಿಯ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ದಯಮಾಡಿ ಇವರು ಹೇಳುತ್ತಿರುವ ವಿಚಾರಗಳು ಯಾವ ಕಾಲದಲ್ಲಿ ಆಗಿದ್ದುದು ಎಂದು ಹೇಳಿದರೆ, ಅವರಿಗೆ ಉತ್ತರ ಕೊಡಲು ನನಗೆ ಒಂದು ನಿಮಿಷ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ:- ನಾವು ಬರುವುದಕ್ಕಿಂತ ಮುಂಚೆ ಇವೆಲ್ಲಾ ಆಗಿದೆ. ಯಾವ ತಾರೀಖು ಎಂದು ನನ್ನ ಹತ್ತಿರ ಇಲ್ಲ. ನಾನು ಬರುವುದಕ್ಕೆ ಮುಂಚೆ ಆಗಿದ್ದುದು. ನಾನು ಬಂದಮೇಲೆ ಏನಾದರೂ ಪರಿಹಾರ ಮಾಡಬೇಕೆಂದು ಪ್ರಯತ್ನ ಮಾಡಿದೆ. ನಾನು ಬರುವುದಕ್ಕಿಂತ ಮುಂಚೆ ಯಲಹಂಕದಲ್ಲಿ 205 ಮನೆಗಳನ್ನು ಅದು ನ್ಯಾಷನಲ್ ಇಂಡಿಯಾ ಎನ್ನುವವರಿಗೆ ಕೊಟ್ಟು ಕನ್‌ಸ್ಟ್ರಕ್ಟ್ ಮಾಡಿದ್ದಾರೆ. ಅದರ ಕ್ವಾಲಿಟಿ ನೋಡಿ ತೆಗೆದುಕೊಂಡವರು ಕಣ್ಣೀರು ಹಾಕುತ್ತಾರೆ. ಮತ್ತೆ ಖರ್ಚುಮಾಡಿ ರಿಪೇರಿ ಮಾಡಿಸುತ್ತಿದ್ದಾರೆ. ಅಂತಹ ಮನೆಗಳನ್ನು ಕಟ್ಟಿ ಇವತ್ತು

ಅಂತಹವರು ಕ್ಷಮಾಪಣೆ ಕೇಳುವುದು ಬೇಡವೇ? ಅದೆಲ್ಲಾ ಆಗಿದ್ದುದು ಅವರ ಅಧಿಕಾರದ ಪೀರಿಯಡ್‌ನಲ್ಲಿ. ಕಾರವಾರದ ವಿಚಾರದಲ್ಲಿ ಹೇಳುವುದಾದರೆ ನಮ್ಮ ರಾಣೆಯವರು ಇಲ್ಲಿಯೇ ಇದ್ದಾರೆ. ಮರಳು ಭೂಮಿಯಲ್ಲಿ ಮನೆ ಕಟ್ಟುವಾಗ ಯಾವ ರೀತಿ ಫೌಂಡೇಷನ್ ಬೇಕೆಂದು ನೋಡದೇ 9 ಇಂಚಿನ ಗೋಡೆ ಕಟ್ಟಿ ಅವೆಲ್ಲಾ ಬಿದ್ದಿವೆ. ಅಷ್ಟಕ್ಕೇ ನಿಲ್ಲಿಸಿ, ಯಾವುವು ಸದ್ಯಕ್ಕೆ ರೂಫಿಂಗ್ ಆಗಿತ್ತು ಅವನ್ನು ಕಂಪ್ಲೀಟ್ ಮಾಡಿ ಉಳಿದಿದ್ದು ಯಥಾಸ್ಥಿತಿಯಲ್ಲಿ ನಿಲ್ಲಿಸಿದ್ದಾರೆ. ಅಧ್ಯಕ್ಷರೇ, ಏಕೆ ಹೇಳುತ್ತಿದ್ದೇನೆಂದರೆ, ಕರ್ನಾಟಕ ರಾಜ್ಯದ ಗೃಹಮಂಡಲಿ ಕೆಲವು ಅವಧಿಯಲ್ಲಿ ಮನೆಗಳನ್ನು ಕಟ್ಟಿದ ರೀತಿ ನೀತಿ ನೋಡಿ, ಅಪಖ್ಯಾತಿ ಬರುವ ಸನ್ನಿವೇಶ ಕಂಡು ಅದಕ್ಕೆ ಒಂದು ಹೊಸ ಕಾಯಕಲ್ಪ ಕೊಟ್ಟು ಅದಕ್ಕೆ ಗೌರವ ಬರಬೇಕೆನ್ನುವ ದೃಷ್ಟಿಯಿಂದ ಪ್ರಾಮಾಣಿಕವಾಗಿ ಈ ಮೂರು ಯೋಜನೆಗಳನ್ನು ಮಾಡಿದ್ದೇವೆ. 5ನೇ ಸ್ಟೇಜ್ ಟೈಅಪ್ ಆಗಿದೆ ಎಂದು ಹೇಳುತ್ತಿದ್ದಾರೆ. ಅದು ಏಕೆ ನಿಮಗೆ ಬೇಕು? ಇವತ್ತು ಹುಡ್ಕೋದವರಿಗೆ ಕೊಟ್ಟರು, ಕಡೆಗೆ ನ್ಯಾಷನಲ್ ಹೌಸಿಂಗ್ ಬ್ಯಾಂಕ್‌ನವರು, ಥೇರ್ಮನ್ನರು ನಾವು ಎಲ್ಲರಿಗೂ ಹೋಗಿ, ಅವರು ಕೊಡುತ್ತೇವೆಂದು ಒಪ್ಪಿಕೊಂಡಮೇಲೆ ಆ ಸ್ಕೀಮ್ ಮಾಡಿದ್ದೇವೆ. ಈಗ ಟೆಕ್ನಿಕಲ್ ಕ್ಲಿಯರೆನ್ಸ್ ಆಗಿದೆ. ಸ್ಟಾನ್‌ಸರ್ಡ್ ಬ್ಯಾಂಕ್‌ನವರು ಮಂಜೂರಾತಿ ಮಾಡಿದ್ದಾರೆ. ಇದು ಕೊನೆಯ ಹಂತದಲ್ಲಿ ಇದೆ. ಅದು ಮಂಜೂರಾತಿ ಆಗಿದೆ.

1.15 ಪಿ.ಎಂ

ಶ್ರೀ ಸಿ. ಬೈರೇಗೌಡ:- ಬೆಂಗಳೂರು ನಗರದ ಇಂದಿರಾನಗರದಲ್ಲಿ ಹೌಸಿಂಗ್ ಬೋರ್ಡ್‌ನದು ಒಂದು ಗೆಸ್ಟ್ ಹೌಸ್ ಇತ್ತು. ಏತಕ್ಕೆ ಈ ವಿಚಾರ ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಈ ಸದನದಲ್ಲಿ ನಾನೇ ಹಿಂದೆ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ಇವತ್ತಿನ ದಿವಸ ಅದು ಸುಮಾರು 25 ಲಕ್ಷವಾದರೂ ಬೆಲೆ ಬಾಳುತ್ತದೆ. ಅದನ್ನು ಕೇವಲ ಎರಡು ಎರಡೂವರೆ ಲಕ್ಷಕ್ಕೆ ಯಾರಿಗೋ ದಾನ ಮಾಡಿದ್ದಾರೆ. ಅದು ಯಾರ ಕಾಲದಲ್ಲಾಯಿತು ಎನ್ನುವುದು ನನಗೆ ಗೊತ್ತಿಲ್ಲ. ಈವೊತ್ತು ಆ ಮನೆಯ ಬೆಲೆ ಸುಮಾರು 25 ಲಕ್ಷ ರೂಪಾಯಿ. ಇಂತಹ ಅಕೃತ್ಯ ಮಾಡಿರತಕ್ಕವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದನ್ನು ದಯವಿಟ್ಟು ಹೇಳಿ?

ಶ್ರೀ ಕಾಗೋಡು ತಿಮ್ಮಪ್ಪ:- ರಾಷ್ಟ್ರದಲ್ಲಿ ರಾಜಕೀಯ ರೀಅಲೈಮೆಂಟ್ ಆಗುತ್ತಾ ಇದೆ. ರಾಜಕೀಯ ಧೃಡೀಕರಣವಾಗುತ್ತಿದೆ.

ಶ್ರೀ ಸಿ. ಬೈರೇಗೌಡ:- ರಾಜಕೀಯ ಧೃಡೀಕರಣವಾಗುವುದಕ್ಕೂ ಸಾರ್ವಜನಿಕರ ಹಣ ತಿನ್ನುವುದಕ್ಕೂ ಸಂಬಂಧವಿಲ್ಲ. ದಯವಿಟ್ಟು ಏನಾಯಿತು? ಯಾರು ಮಾಡಿರತಕ್ಕವರು? ನೀವು ಹೌಸಿಂಗ್ ಬೋರ್ಡ್ ಅಧ್ಯಕ್ಷರಾಗಿ ಏನು ಕ್ರಮ ತೆಗೆದುಕೊಂಡಿದ್ದೀರಿ ದಯವಿಟ್ಟು ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ:- ಆಗಿರುವುದು ಪರಮ ಅನ್ಯಾಯ. 25 ಲಕ್ಷ ರೂಪಾಯಿ ಬೆಲೆ ಬಾಳತಕ್ಕ ಮನೆ. ಆ ಮನೆಯನ್ನು ಹುಡ್ಕೋದವರಿಗೆ ಗೃಹಮಂಡಳಿಯವರು ಬಾಡಿಗೆಗೆ ಕೊಟ್ಟರು. ಬಾಡಿಗೆ ಇದ್ದಂತಹವರು ಆ ಮನೆಯನ್ನು ಅಲಾಟ್ ಮಾಡಿಸಿಕೊಂಡು ಅವರು ರಿಜಿಸ್ಟರ್ ಸಹ ಮಾಡಿಸಿಕೊಂಡು ಪೊಸಿಷನ್ ಸರ್ಟಿಫಿಕೇಟ್ ತೆಗೆದುಕೊಂಡರು. ಆಮೇಲೆ ಸಿವಿಲ್ ಕೋರ್ಟ್‌ನಲ್ಲಿ ಇಂಜಕ್ಷನ್ ಆರ್ಡರ್ ತಂದು ಪೋಲೀಸ್‌ನವರ ಸಹಾಯದಿಂದ ಅವರನ್ನು ಅಂದರೆ ಹುಡ್ಕೋದವರನ್ನು ಒದ್ದು ಹೊರಗೆ ಹಾಕಿ ಸ್ವಾಧೀನಕ್ಕೆ ತೆಗೆದುಕೊಂಡರು.

ಶ್ರೀ ಸಿ. ಬೈರೇಗೌಡ:- ಇವರಿಗೆ ಏನಾಗಿದೆ? ಅಂಗಡಿಯಲ್ಲಿ ಬೇಳೆ ಇದೆಯೇ ಎಂದು ಕೇಳಿದರೆ ಉಪ್ಪು ಇದೆಯೆಂದು ಹೇಳಿದಹಾಗೆ ಹೇಳುತ್ತಿದ್ದಾರೆ. ಇಲ್ಲಿ ಉಪ್ಪು ಬೇಳೆ ಕಥೆ ಬೇಡ. ಏನು ವಾಸ್ತವಾಂಶ ನಡೆದಿದೆ, ಇದರಲ್ಲಿ ಯಾರ್‍ಯಾರ ಕೈವಾಡ ಇದೆ, ಎಷ್ಟೆಷ್ಟು ಹಣ ಲೂಟಿಯಾಗಿದೆ ಅದನ್ನು ಸ್ವಲ್ಪ ದಯವಿಟ್ಟು ಹೇಳಿ.

ಶ್ರೀ ವಾಟಾಳ್ ನಾಗರಾಜ್:- ಸುತ್ತಿ ಬಳಸಿ ಹೇಳುವುದು ಬೇಡ ಹೇಳುವುದನ್ನು ನೇರವಾಗಿ ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ:- ಏಕೆಂದರೆ ಆ ಫೈಲು ನನ್ನ ಕೈಯಲ್ಲಿ ಇಲ್ಲ. ನಾನು ಹೇಳುವುದು ಒಂದು ಅಲ್ಲಿರುವುದು ಒಂದು ಆಗಿ ವ್ಯತ್ಯಾಸವಾಗುವುದು ಬೇಡ. ಆ ಕಾಲದಲ್ಲಿ ಯಾರ್ಯಾರು ಹೌಸಿಂಗ್ ಮಿನಿಸ್ಟರ್ ಆಗಿದ್ದರು ಎನ್ನುವುದು ನನಗೆ ನೆನಪು ಇಲ್ಲ.

ಶ್ರೀ ವಾಟಾಳ್ ನಾಗರಾಜ್:- ಕಾಲ ಅಂದರೆ ಅದೇನು ದ್ವಾಪರಯುಗವೇ? ಯಾವ ಕಾಲವೆಂದು ಸ್ವಲ್ಪ ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ:- ಒಟ್ಟಿನಲ್ಲಿ ಜನತಾದಳದ ಕಾಲ. ಫೈಲು ನೋಡದೆ ಕರಾರುವಕ್ಕಾಗಿ ಹೇಳುವುದು ಸರಿಯಲ್ಲ.

ಶ್ರೀ ಸಿ. ಬೈರೇಗೌಡ:- ನಾನು ಈ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿದಾಗ ಮಾನ್ಯ ನರಸಿಂಹ ಮೂರ್ತಿಯವರು ಮಂತ್ರಿಗಳಾಗಿದ್ದರು. ಅವರು ದೊಡ್ಡ ದೊಡ್ಡ ಕೂಗಾಕಿ ಹೇಳಿದರು, ಯಾರೇ ತಪ್ಪು ಮಾಡಿರಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ ಎನ್ನುವ ಮಾತನ್ನು ಹೇಳಿದರು. ಇವತ್ತಿನವರೆಗೆ ಅದು ಏನಾಯಿತು ಎನ್ನುವುದು ನನಗೆ ಗೊತ್ತಿಲ್ಲ. ಏಕೆಂದರೆ ಕಣ್ಣೆದುರಿಗೆ ಲೂಟಿ ನಡೆಯುತ್ತಿದೆ. ಸುಮಾರು 25 ಲಕ್ಷ ಬೆಲೆ ಬಾಳತಕ್ಕ ಮನೆಯನ್ನು ಯಾರೋ ಒಬ್ಬರಿಗೆ ಎರಡು ಎರಡೂವರೆ ಲಕ್ಷ ರೂಪಾಯಿಗೆ ದಾನ ಮಾಡಿದ್ದಾರೆ. ಯಾರು ತೆಗೆದುಕೊಂಡಿದ್ದಾರೆಂದು ದಯವಿಟ್ಟು ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಕಾಗೋಡು ತಿಮ್ಮಪ್ಪನವರು ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ಮಾನ್ಯ ಬೈರೇಗೌಡ್ರು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಇದ್ದವರು ಮೂರು ಜನ ಕದ್ದವರು ಯಾರು ಎಂಬಂತೆ ಕದ್ದವರು ಯಾರು ದಯವಿಟ್ಟು ಹೇಳಿ?

ಶ್ರೀ ಕಾಗೋಡು ತಿಮ್ಮಪ್ಪ:- ಯಾರ್ಯಾರೆಂದು ಗೊತ್ತಿದೆ. ತಾರೀಖುವಾರು ಯಾರ್ಯಾರು ಇದ್ದರು ಎಂಬುದನ್ನು ಫೈಲು ಇಲ್ಲದೆ ಹೇಳುವುದಕ್ಕೆ ಹೋಗಬಾರದು. ಮಂತ್ರಿಗಳು ಇದ್ದಾರೆ ಫೈಲ್ ತರಿಸಿ ಹೇಳುತ್ತಾರೆ.

ಶ್ರೀ ಸಿ. ಬೈರೇಗೌಡ:- ನಾನು ಮಧ್ಯೆ ಮಧ್ಯೆ ಎರಡು ಮೂರು ಸಾರಿ ಎದ್ದಿದ್ದೇನೆ, ದಯವಿಟ್ಟು ಕ್ಷಮಿಸಬೇಕು.

ಶ್ರೀಮತಿ ದಮಯಂತಿ ಬೋರೇಗೌಡ:- ಈ ಪುರುಷ ಪ್ರಧಾನವಾದ ಸದನದಲ್ಲಿ ಮಾನ್ಯ ಸದಸ್ಯರಾದ ಕಾಗೋಡು ತಿಮ್ಮಪ್ಪನವರು ಮಾತನಾಡುವಾಗ ಗಂಡಸ್ತನವೆಂದು ಹೇಳಿದರು. ನೀವು ಅಧ್ಯಕ್ಷರಾಗಿದ್ದಾಗ ಅಲ್ಲಿ ಲೇಡಿ ಕಮೀಷನರ್ ಇದ್ದರು. ಈಗಲೂ ಇದ್ದಾರೆ, ಅದನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ:- ನನ್ನ ಮಾತಿನಿಂದ ತಮ್ಮ ಮನಸ್ಸಿಗೆ ನೋವಾಗಿದ್ದರೆ ನಾನು ವಾಪಸ್ಸು ತೆಗೆದುಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ನಾನು ಏನು ಪ್ರಸ್ತಾಪ ಮಾಡಿದ್ದೇನೆ ಅದಕ್ಕೆ ಉತ್ತರ ಸಿಕ್ಕಿಲ್ಲ. ಯಾರ ಕಾಲದಲ್ಲಿ ನಡೆದಿದೆ ಗೊತ್ತಿಲ್ಲ. ಸಾರ್ವಜನಿಕರ ಹಣ ಲೂಟಿಯಾಗಿರುವುದರಿಂದ ನಿಜವನ್ನು ಮಂತ್ರಿಗಳು ಹೇಳಬೇಕು. ಅದಕ್ಕೆ ಜವಾಬ್ದಾರರು ಮಂತ್ರಿಗಳು. ಈ ವಿಚಾರ ಯಾರ ಕಾಲದಲ್ಲಿ ಆಯಿತು? ಇಷ್ಟೊಂದು ಬೆಲೆ ಬಾಳತಕ್ಕ ಆಸ್ತಿ ಏತಕ್ಕೆ ಹೀಗಾಯಿತು? ಅವೊತ್ತು ಮಂತ್ರಿಗಳು ಕ್ರಮ ತೆಗೆದುಕೊಳ್ಳುತ್ತೇನೆಂದು ಆಶ್ವಾಸನೆಯನ್ನು

ಕೊಟ್ಟಿದ್ದಾರೆ. ನಾನು ಅದರ ಬಗ್ಗೆ ಒತ್ತಾಯ ಮಾಡಿದ್ದೇನೆ. ಇವತ್ತು ಪುನಃ ಅಧ್ಯಕ್ಷರ ಮೂಲಕ ಸರ್ಕಾರದಲ್ಲಿ ಒತ್ತಾಯ ಮಾಡುತ್ತೇನೆ ಇದಕ್ಕೆ ಸಂಪೂರ್ಣ ವಿವರ ಕೊಡಬೇಕು. ಯಾವ್ಯಾವ ಅಧಿಕಾರಿಗಳು ಸಂಬಂಧಪಟ್ಟವರು, ಏನೇನು ಕ್ರಮ ತೆಗೆದುಕೊಂಡಿದ್ದಾರೆಂಬುದನ್ನು ದಯವಿಟ್ಟು ತಿಳಿಸಬೇಕು?

ಶ್ರೀ ಕಾಗೋಡು ತಿಮ್ಮಪ್ಪ:- ಈಗ ದುಡ್ಡು ಇಲ್ಲ. ಇದು 60 ಕೋಟಿ ರೂಪಾಯಿಗಳ ಪ್ರಾಜೆಕ್ಟ್. ಈಗ ಎರಡು ಗ್ರೂಪ್‌ನ್ನು ಹುಡ್ಕೋದವರು ಕ್ಲಿಯರ್ ಮಾಡಿದ್ದಾರೆ. ಇನ್ನೊಂದು ಗ್ರೂಪ್‌ನ್ನು ಈ ತಿಂಗಳು ಅಥವಾ ಮುಂದಿನ ತಿಂಗಳು ಕ್ಲಿಯರ್ ಮಾಡುತ್ತೇವೆ ಎಂದು ಹೇಳಿದ್ದಾರೆ. ನಾನೇ ಸ್ವತಃ ಇದರ ಡ್ರಾಯಿಂಗ್ಸ್ ಎಲ್ಲಾ ಮಾಡಿದ್ದೇನೆ. ಇದನ್ನು ಕಾರ್ಯಗತ ಮಾಡತಕ್ಕಂಥ ಕೆಲಸ ಇದೆ. ಇದು ಬಂದರೆ ಮೈಸೂರಿನಲ್ಲಿ ಉತ್ತಮವಾದಂಥ ಬಡಾವಣೆ ಬರುತ್ತದೆ. ಅದಕ್ಕೆ ಯಾವ ಕೊರತೆಯೂ ಇಲ್ಲ. ಇದರಲ್ಲಿ ಏನು ಮೋಸವಾಗಿದೆಯೆಂದು ನನಗೆ ಗೊತ್ತಿಲ್ಲ. ಆದ್ದರಿಂದ ಈ ಮೂರು ಯೋಜನೆಗಳು, ಅದು ಕೆಂಗೇರಿ ಯೋಜನೆ ಇರಬಹುದು 5ನೇ ಹಂತದ ಯಲಹಂಕಾದ್ದು ಆಗಬಹುದು, ಮತ್ತು ಮೈಸೂರಿನದ್ದು ಆದರೆ, ಸುಮಾರು ಒಂಭತ್ತು ಸಾವಿರ ಮನೆಗಳಾಗುತ್ತವೆ. ಇವುಗಳು ಪೂರ್ಣಗೊಂಡರೆ ಕರ್ನಾಟಕ ಹೌಸಿಂಗ್ ಬೋರ್ಡ್‌ಗೆ ನಿವ್ವಳವಾಗಿ ಕನಿಷ್ಠ 20 ಕೋಟಿ ರೂಪಾಯಿಗಳು ಅದರಿಂದ ಉಳಿತಾಯವಾಗಿ ತನ್ನ ಬಂಡವಾಳಕ್ಕೆ ಸೇರಿಸಿಕೊಳ್ಳುವುದಕ್ಕೆ ಅವಕಾಶ ಇದೆ. ಆದರೆ ಇದಕ್ಕೆ ತಪ್ಪು ಕಲ್ಪನೆಯನ್ನು ನೀವು ಮಾಡಿ ಗೃಹಮಂಡಳಿಗೆ ಇರತಕ್ಕಂಥ ಗೌರವವನ್ನು ಕಳೆಯತಕ್ಕಂಥ ಪ್ರಯತ್ನವನ್ನು ದಯವಿಟ್ಟು ಮಾಡಬೇಡಿ. ಕಳೆದ ಐದಾರು ತಿಂಗಳಿಂದ ನಾನು ಅನಾವಶ್ಯಕವಾಗಿ ರಾಜಕೀಯಕ್ಕೆ ಪ್ರವೇಶ ಮಾಡಿ ನನ್ನ ಶ್ರಮವನ್ನು ಹಾಳುಮಾಡಿಕೊಂಡೆ, ಇಲ್ಲದೇ ಹೋಗಿದ್ದರೆ ನಾನು ಇವತ್ತು ಇನ್ನಷ್ಟು ಕಾಯಕಲ್ಪವನ್ನು ಗೃಹಮಂಡಳಿಗೆ ಕೊಡುತ್ತಿದ್ದೆ. ನಮ್ಮ ಬೈರೇಗೌಡರು ಸುಮಾರು 90–100 ಎಕರೆ ಜಮೀನನ್ನು ಕೊಡಿಸುವುದಕ್ಕೆ ಮುಂದೆ ಬಂದಿದ್ದಾರೆ. ಆದರೆ ಇನ್ನೂ ಖರೀದಿ ಮಾಡುವುದಕ್ಕೆ ಆಗಲಿಲ್ಲ. ಏಕೆ ಆಗಲಿಲ್ಲವೆಂದು ಕೇಳಿದರೆ ಡಿಮ್ಯಾಂಡ್ ಬೇಕು ಹೇಳಿದರು. ಆ ಜಮೀನು ಇವತ್ತು ಒಂದು ಎಕರೆಗೆ ಐದು ಲಕ್ಷ ಕೊಟ್ಟರೂ ಕೊಡುವುದಿಲ್ಲ. ಗೃಹಮಂಡಲಿಯಲ್ಲಿ ಹಿಂದೆಯೇ ನಾವು ಬರುವುದಕ್ಕೆ ಮುಂಚೆ ಭೂಮಿಯನ್ನು ಕೊಂಡಿದ್ದಾರೆ. ಈಗ ಭೂಸುಧಾರಣೆ ಕಾಯಿದೆ ಪ್ರಕಾರ ಕೊಳ್ಳುವುದಕ್ಕೆ ಬರುವುದಿಲ್ಲ. ಆ ಭೂಮಿಯನ್ನು ಕೊಂಡರೆ ನಮಗೆ ಖಾತೆ ಆಗಿಲ್ಲ. ಅವತ್ತು ರೈಟ್ ಬಂದಿರಲಿಲ್ಲ. ಆ ರೀತಿ ಕಾನೂನಿನಲ್ಲಿ ಅಧಿಕಾರ ಇಲ್ಲದಿದ್ದರೂ ಕೂಡ ಭೂಮಿಯ ಹಕ್ಕನ್ನು ನಡೆಯಲಿಕ್ಕೆ ಆಗದೇ ಇರತಕ್ಕಂಥ ಸಂದರ್ಭ ನಿರ್ಮಾಣ ಮಾಡಿಹೋಗಿದ್ದಾರಲ್ಲ, ಇದರ ಬಗ್ಗ ಯಾರೂ ಕ್ಷಮಾಪಣೆಯನ್ನು ರಾಜ್ಯದ ಜನತೆಗೆ ಕೇಳಲಿಲ್ಲ. ಭೂಸುಧಾರಣೆ ಕಾಯಿದೆಗೆ ತಿದ್ದುಪಡಿಯನ್ನು ತಂದು ಗೃಹಮಂಡಳಿಗೆ ಭೂಮಿಯನ್ನು ಖರೀದಿ ಮಾಡುವುದಕ್ಕೆ ಅವಕಾಶ ಮಾಡಿದ್ದೇವೆ. ಎಲ್ಲಾ ಶಾಸಕರಿಗೂ ನನ್ನ ಪ್ರಶ್ನೆ ಏನೆಂದರೆ, ಜಿಲ್ಲಾಧಿಕಾರಿಗಳು ಅಧ್ಯಕ್ಷರು, ನೀವು ಸದಸ್ಯರು. ಪ್ರತಿ ತಾಲ್ಲೂಕಿನಲ್ಲಿ ಮನೆಮಾಡೋಣ ಎಂದರೆ ಎಷ್ಟು ಜನ ಮಾಡಿದ್ದೀರಿ? ಆದ್ದರಿಂದ ಇವತ್ತು ಕಾಯಕಲ್ಪ ಕೊಡುವ ಕೆಲಸ ಮಾಡಿದ್ದೇವೆ. ಆದ್ದರಿಂದ ಮಾಡಿದ ಶ್ರಮಕ್ಕೆ ನಿಮ್ಮಿಂದ ಹೊಗಳಿಕೆ ಬೇಕು ಎಂದು ಕೇಳಿಲ್ಲ. ಆದರೆ ಕೆಲವು ಭಾಷೆ ಬಳಸಿದ್ದೀರಲ್ಲ, ಈ ಶತಮಾನದಲ್ಲಿ ಆಗದೇ ಇರತಕ್ಕಂಥ ಹಗರಣ, ಈ ಒಂದು ಅವಧಿಯಲ್ಲಿ ಕಾಗೋಡು ತಿಮ್ಮಪ್ಪನವರು ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಮಾಡಿಹೋಗಿಬಿಟ್ಟಿದ್ದಾರೆ.

ಡಾ|| ಜೀವರಾಜ್ ಆಳ್ವ:- ತಮ್ಮ ಮುಖ್ಯಮಂತ್ರಿಗಳು ಹೇಳಿರುವುದು....

ಶ್ರೀ ಆರ್.ವಿ. ದೇಶಪಾಂಡೆ:- ಸ್ಕ್ಯಾಂಡಲ್ ಆಫ್ ಸೆಂಚುರಿ ಎಂದು ನಿಮ್ಮ ಮುಖ್ಯಮಂತ್ರಿಗಳು ದೂರದರ್ಶನಕ್ಕೆ ಇಂಟರ್‌ವ್ಯೂ ಕೊಡುವಾಗ ಹೇಳಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ:- ಯಾರಾದರೂ ಇರಲಿ. ಆದರೆ ನೀವು ಹೇಳಿದ್ದುದು ಪತ್ರಿಕೆಯಲ್ಲಿ ಬಂದಿದೆ. ಆದ್ದರಿಂದ ನಾನು ಹೇಳುತ್ತಿದ್ದೇನೆ, ನೀವು ಅಧಿಕಾರದಲ್ಲಿದ್ದರಲ್ಲ,

ಅಧಿಕಾರದಲ್ಲಿದ್ದಂಥ ಸಂದರ್ಭದಲ್ಲಿ ನಡೆದಂಥ ಭ್ರಷ್ಟಾಚಾರಗಳು, ಅವ್ಯವಹಾರಗಳು, ಸ್ವಜನಪಕ್ಷಪಾತಗಳು, ಈ ಶತಮಾನದಲ್ಲಿ ಯಾವುದೇ ಸರ್ಕಾರ ಮಾಡದಿರುವಷ್ಟನ್ನು ಮಾಡಿದ ಪಾಪದ ಕೂಪವನ್ನು ಹೊತ್ತುಕೊಂಡು ಮೆರೆಯತಕ್ಕಂಥ ನಿಮಗೆ ನಮ್ಮನ್ನು ಟೀಕೆ ಮಾಡತಕ್ಕಂಥ ನೈತಿಕ ಹಕ್ಕು ಎಲ್ಲಿಂದ ಬಂದಿದೆ? ಹೆಸರುಘಟ್ಟ ಯೋಜನೆಯನ್ನು ಸುಮ್ಮನೆ ಹೊತ್ತುಕೊಂಡರು. ಯಾರೋ ಮಾಡಿದ ಪಾಪವನ್ನು ನಮ್ಮ ತಲೆಯ ಮೇಲೆ ಹಾಕಿದಿರಿ. ಎಂಥಾದ್ದೋ ಡಿ.ಎಲ್.ಎಫ್. ಎಂದು....

ಡಾ।। ಜೀವರಾಜ್ ಆಳ್ವ:- ಕರೆಕ್ಟ್ ಆಗಿ ಡಿ.ಎಲ್.ಎಫ್ ಎಂದು ತಮಗೆ ಗೊತ್ತಿದೆ.

ಶ್ರೀ ಕಾಗೋಡು ತಿಮ್ಮಪ್ಪ:- ಅದಕ್ಕೋಸ್ಕರ ರಾಮಯ್ಯನ ಭೂಮಿಯನ್ನು ಡಿನೋಟಿಫೈ ಮಾಡಿದ್ದಾರೆ ಎಂದು ಹೋಗಿದ್ದಾಗ ನಮ್ಮ ಸರ್ಕಾರ ಹೋಗಿತ್ತೇನು ನೋಡುವುದಕ್ಕೆ? ಒಟ್ಟಾರೆ ನಿಮ್ಮ ಅಧಿಕಾರಾವಧಿಯಲ್ಲಿ ಮಾಡಿದಂಥ ಲೋಪದೋಷಗಳು, ಅನ್ಯಾಯಗಳು, ಅಪಚಾರಗಳು, ಅವ್ಯವಹಾರಗಳು ಒಂದೆರಡಲ್ಲ. ಇಂಥಾ ಪಾಪದಹೊರೆ ನಿಮ್ಮ ತಲೆಮೇಲೆ ಇರಬೇಕಾದರೆ....

ಶ್ರೀ ಆರ್.ವಿ. ದೇಶಪಾಂಡೆ:- 1989ನೇ ಏಪ್ರಿಲ್‌ನಲ್ಲಿ ನಮ್ಮ ಅಧಿಕಾರ ಹೋಯಿತು. ನೀವು ಅಧಿಕಾರಕ್ಕೆ ಬಂದು ಮೂರು ವರ್ಷ 2 ತಿಂಗಳು ಆಯಿತು. ನಮ್ಮ ಕಾಲದಲ್ಲಿ ಭ್ರಷ್ಟಾಚಾರ ಆಯಿತು, ಲೋಪದೋಷಗಳಾಯಿತು ಎಂದು ಹೇಳುತ್ತಿದ್ದೀರಿ. ಇದನ್ನು ತಾವು ಹೇಳಬೇಕಾದರೆ, ಹೌಸಿಂಗ್ ಬೋರ್ಡ್‌ನಲ್ಲಿ ಏನಾಗಿದೆ ಎಂಬುದು ತಮ್ಮ ಗಮನಕ್ಕೆ ಬಂದಿರಬಹುದು. ಹೌಸಿಂಗ್ ಮಿನಿಸ್ಟರ್ ಆಗಿ ನಾನೂ ಇದ್ದೆ, ನನಗಿಂತ ಮುಂಚೆ, ಲಕ್ಷ್ಮೀಸಾಗರ್ ಇದ್ದರು ಮತ್ತೆ ಯಾರೋ ಇದ್ದರು, ಇದು ತಮ್ಮ ಗಮನಕ್ಕೆ ಬಂದಿರಬೇಕು. ಇಷ್ಟೆಲ್ಲಾ ಕೆಲಸ ಮಾಡಿರುವುದು ತಮ್ಮ ಗಮನಕ್ಕೆ ಬಂದರೂ ಸಹ ವಿಚಾರಣೆ ಮಾಡಿಲ್ಲವೆಂದು ಹೇಳಿದರೆ ಏನಾಗುತ್ತದೆ. ತಾವು ರಾಜ್ಯದ ಜನತೆಗೆ ದ್ರೋಹ ಮಾಡಿದಂತಾಗುತ್ತದೆ. ತಾವು ಏನು ಹೇಳುತ್ತೀರಿ, ನಮ್ಮ ಅಧಿಕಾರಾವಧಿಯಲ್ಲಿ, ಲೋಪದೋಷಗಳಾಗಿವೆ ಎಂದು ಹೇಳುತ್ತೀರಿ; ಭ್ರಷ್ಟಾಚಾರ ಆಗಿದೆ ಎಂದು ಹೇಳುತ್ತೀರಿ. ಇದನ್ನು ಹೇಳಬೇಕಾದರೆ, ಯಾವುದಾದರೂ ಬೇಸಿಸ್ ಇರಬೇಕು. ಈ ಬೇಸಿಸ್ ಇರಬೇಕಾದರೆ, ತಾವು ಅಧಿಕಾರದಲ್ಲಿದ್ದೀರಿ. ಅವು ಯಾವುವು, ಯಾವ ಪ್ರಕಾರದವು ಎಂಬುದನ್ನು ಪತ್ತೆ ಮಾಡಿ, ಅದರ ಮೇಲೆ ತಾವು ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಯಾವಾಗ ನೀವು ಕ್ರಮ ತೆಗೆದುಕೊಳ್ಳಲಿಲ್ಲ, ಅದರ ಅರ್ಥ ಏನಾಗುತ್ತದೆಂದರೆ, ಅಲ್ಲಿ ಯಾವುದೂ ಲೋಪದೋಷ ಇದ್ದಿಲ್ಲ, ಅಲ್ಲಿ ಯಾವುದೂ ಭ್ರಷ್ಟಾಚಾರ ಇಲ್ಲ ಎಂದು ಗೊತ್ತಾಗುತ್ತದೆ. ಈಗ ನೀವು, ಬೇಕಾದ್ದು ಮಾತನಾಡಬಹುದು, ಸ್ವಲ್ಪ ಜವಾಬ್ದಾರಿಯಿಂದ ಮಾತನಾಡಿ. ತಾವು ಏನಾದರೂ ಹೇಳಬೇಕಾದರೆ, ಮೂರು ವರ್ಷ ನಿಮ್ಮ ಕೈಯಲ್ಲಿ ಅಧಿಕಾರ ಇದೆ, ಏತಕ್ಕಾಗಿ ನಮ್ಮ ಲೋಪಗಳ ಬಗ್ಗೆ ವಿಚಾರಣೆ ಮಾಡಲಿಲ್ಲ? ಮಾಡಬೇಕಾಗಿತ್ತು, ಕ್ರಮ ತೆಗೆದುಕೊಳ್ಳಬೇಕಾಗಿತ್ತು.

ಶ್ರೀ ಕಾಗೋಡು ತಿಮ್ಮಪ್ಪ:- ತಪ್ಪು ಮಾಡಿರುವುದಕ್ಕೆ ಏನೂ ಮಾಡಲಿಲ್ಲವೆಂದು ತಾವು ಹೇಳುತ್ತಿದ್ದೀರಿ. ಮುರಾರ್ಜಿ ದೇಸಾಯಿಯವರು ಪ್ರಧಾನ ಮಂತ್ರಿಯಾಗಿ ಬಂದಾಗ ಇಂದಿರಾಗಾಂಧಿಯವರು ಮಾಡಿದ್ದೆಲ್ಲಾ ಹುಡುಕುವುದಕ್ಕೆ ಹೋಗಿ ಎರಡುವರೆ ವರ್ಷದಲ್ಲಿ ಅಧಿಕಾರ ಕಳೆದುಕೊಂಡರು.

ಡಾ।। ಜೀವರಾಜ್ ಆಳ್ವ:- ಈಗಿನ ಮುಖ್ಯಮಂತ್ರಿಗಳಿಗೆ ಇಂದಿನ ಸರ್ಕಾರಕ್ಕೆ ಸೂಚ್ಯವಾಗಿ ಹೆದರಿಕೆ ಮುಟ್ಟಿಸುತ್ತಿದ್ದಾರೆ. ಏನಾದರೂ ಮಾಡಲಿಕ್ಕೆ ಹೋದರೆ, ನಿಮ್ಮ ಸರ್ಕಾರ ಹೋಗುತ್ತದೆ ಎಂದು, ಕಾಗೋಡು ತಿಮ್ಮಪ್ಪನವರು ಹೇಳುತ್ತಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ:- ನಮ್ಮ ಸರ್ಕಾರಕ್ಕೆ ಹೇಳುತ್ತೇವೆ. ನೀವು ಸಿಬಿಐ ಎನ್‌ಕ್ವೈರಿ ಮಾಡಿ ಎಂದು ಹೇಳಿದ್ದೀರಿ, ಅದು ಎಲ್ಲಿಂದ ಮಾಡಬೇಕೆಂದು ಹೇಳಿದರೆ, ರಾಮಕೃಷ್ಣ

ಹೆಗಡೆಯವರು ಅಧಿಕಾರವನ್ನು ವಹಿಸಿಕೊಂಡ ತಾರೀಖಿನಿಂದ, ಈ ತಾರೀಖಿನವರೆಗೆ ಮಾಡಲಿ.

ಶ್ರೀ ಆರ್.ವಿ. ದೇಶಪಾಂಡೆ:- ಗುಂಡೂರಾಯರ ಕಾಲದಲ್ಲಿ ನೀವು ಮಂತ್ರಿಗಳಾಗಿದ್ದೀರಿ. ಅದನ್ನೂ ಮಾಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ:- ಅದನ್ನೂ ಸೇರಿಸಿಕೊಳ್ಳಿ.

ಶ್ರೀ ಆರ್.ವಿ. ದೇಶಪಾಂಡೆ:- ಯಾವಾಗ ಕೈಯಲ್ಲಿ ಅಧಿಕಾರ ಇದೆ, ಆಗ ಅಧಿಕಾರ ಚಲಾಯಿಸುವುದಿಲ್ಲ, ಯಾವಾಗ ವಿರೋಧ ಪಕ್ಷದವರು, ಮಾಡಿದ ತಪ್ಪುಗಳನ್ನು ಸರ್ಕಾರದವರ ಗಮನಕ್ಕೆ ತರುತ್ತಾರೆ, ಆಗ ಹೆಗಡೆಯವರ ಕಾಲದಿಂದ ಎನ್‌ಕ್ವೈರಿ ಮಾಡಿ, ದೇವರಾಜ ಅರಸರ ಕಾಲದಿಂದ ಮಾಡಿ ಎಂದು ಹೇಳಿದರೆ, ಆ ಮಾತನ್ನು ಯಾರೂ ನಂಬುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ:- ಅಲ್ಲಿಂದ ಹಿಡಿದುಕೊಂಡು, ಎಲ್ಲಾ ತನಿಖೆ ಮಾಡಿ, ಏಕೆಂದರೆ, ಗ್ರೋವರ್ ಕಮೀಷನ್ ಮಾಡಿ ವರದಿ ಬಂತಲ್ಲ. ನೀವು ಎಷ್ಟು ಜನರನ್ನು ಹ್ಯಾಂಗ್ ಮಾಡಿದಿರಿ. ಎಷ್ಟು ಜನರನ್ನು ಏಕೆ ನೇಣು ಹಾಕಿದಿರಿ. ಅದಕ್ಕೆ, ನಾವು ಮಾಡಿದ ಒಳ್ಳೆಯ ಕೆಲಸವನ್ನು ಕೆದಕಿ ಎಂದು ಹೇಳುವುದಕ್ಕಿಂತ, ಇವತ್ತು, ಅವರು ಮಾಡುವುದಕ್ಕಾಗದೇ ಹೋದರೆ, ಇವತ್ತು 10 ಕೆಲಸ ಮಾಡಿ ಒಳ್ಳೆಯದನ್ನು ತೋರಿಸೋಣ. ಒಳ್ಳೆಯ ವಾತಾವರಣ ನಿರ್ಮಾಣ ಮಾಡೋಣ. ನೀವು ಟೀಕೆ ಮಾಡಿದಿರಿ, ನೀವು ಎತ್ತಿ ಎಣಿಸಿದಿರಿ. ಅದರಲ್ಲಿ ಲೋಪದೋಷ ಇದ್ದರೆ, ತಿದ್ದಿಕೊಳ್ಳುವುದಕ್ಕೆ ಸಹಾಯವಾಗುತ್ತದೆ. ನಾವೇನು ಹರಿಶ್ಚಂದ್ರನ ಮೊಮ್ಮಕ್ಕಳು ಎಂದು ಹೇಳುವುದಿಲ್ಲ. ಆದರೆ ನೀವು ಟೀಕೆ ಮಾಡುವಾಗ, ವಸ್ತುಸ್ಥಿತಿಯನ್ನು ತಿಳಿದುಕೊಂಡು ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್:- ನೀವು ಮಾಡಿದ್ದೀರಿ, ನಾವು ಮಾಡಿದ್ದೇವೆ ಎಂದಾಗುತ್ತದೆ. ತಮ್ಮ ವಾದ ಆ ರೀತಿಯಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ:- ಈಗ ನಿಮ್ಮ ಖಾಸಗಿ ನಿರ್ಣಯ ಇದೆ, ಗ್ರಾನೈಟ್ ವಿಚಾರದಲ್ಲಿ ನೀವು ಗ್ರಾನೈಟ್ ಲೈಸೆನ್ಸ್ ಬಗ್ಗೆ ತಿದ್ದುಪಡಿ ತಂದಾಗ, ಆಗ ಬಾಯಿ ಹೊಡೆದುಕೊಂಡಿರಿ. ಆ ತಿದ್ದುಪಡಿ ತರುವಾಗ ಏನು ನಡೆಯಿತು ಎಂಬುದು ಗೊತ್ತಿಲ್ಲವೇನು?

ಶ್ರೀ ವಾಟಾಳ್ ನಾಗರಾಜ್:- ಗೊತ್ತಿದೆ, ಅದನ್ನೂ ನಾನು ಹೇಳುತ್ತೇನೆ. ಗ್ರಾನೈಟ್‌ದೂ ಹೇಳುತ್ತೇನೆ, ಬಾಟ್ಲಿಂಗ್‌ದೂ ಹೇಳುತ್ತೇವೆ, ಪ್ರತಿಯೊಂದೂ ಹೇಳುತ್ತೇವೆ.

(ಗೊಂದಲ)

ಶ್ರೀ ಸಿ. ಬೈರೇಗೌಡ:- ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳತಕ್ಕಂಥ ವಾದ ನೋಡಿದರೆ, ಇದು ''ಕಳ್ಳರು, ಕಳ್ಳರು ಸೇರಿ ಸಂತೆಗೆ ಹೋದರು'' ಎಂಬ ಭಾವನೆ ಬರುತ್ತಾ ಇದೆ. ಆದರಿಂದ, ಅವರು ಯಾರೇ ಆಗಿರಲಿ, ತಿಮ್ಮಪ್ಪನವರೇ ಇರಬಹುದು ಅಥವಾ ನಾನೇ ಇರಬಹುದು. ನಾನು ಮಾಡಿದರೂ ತಪ್ಪೇ, ತಿಮ್ಮಪ್ಪನವರು ಮಾಡಿದರೂ ತಪ್ಪೇ. ನೀವು ಹೀಗೆ, ಹಾಗೆ ಮಾಡಿದಿರಿ ಎಂದು ಹಳೆಯದನ್ನೆಲ್ಲಾ ಹೇಳಿ, ನಾನು ಈಗ ಮಾಡಿದ್ದೇನೆ ಎಂಬ ವಾದವನ್ನು ಮಂಡಿಸುವುದು ಸರಿಯಲ್ಲ. ಯಾರು ಮಾಡಿದ್ದರೂ ಕೂಡ ತಪ್ಪು. ಗ್ರಾನೈಟ್‌ನಲ್ಲಿ ತಿದ್ದುಪಡಿಯಾಗಬೇಕಾದರೆ, ಯಾರು ಕಾರಣರು. ನೀವು ಆ ವಿಚಾರವನ್ನು ಪ್ರಸ್ತಾಪ ಮಾಡಿರುವುದರಿಂದ, ತಮಗೆ ಗೊತ್ತಿದೆ ಯಾರು ಎನ್ನುವುದನ್ನು ಹೇಳಿ. ರಾಜ್ಯದ ಜನಕ್ಕೆ ಗೊತ್ತಾಗಲಿ.

ಶ್ರೀ ಕಾಗೋಡು ತಿಮ್ಮಪ್ಪ:- ಹಾವನ್ನು ತುಳಿದರೆ ಅದು ಮರಳಿ ಕಚ್ಚುತ್ತದೆ.

ಶ್ರೀ ಹೆಚ್. ಏಕಾಂತಯ್ಯ:- ಯಾರಿಗೆ ಹೇಳುತ್ತಿದ್ದೀರಿ.

ಶ್ರೀ ಕಾಗೋಡು ತಿಮ್ಮಪ್ಪ:- ಯಾರಿಗೋ ಹೇಳುತ್ತಿದ್ದೇನೆ, ನನ್ನ ಭಾಷೆಯಲ್ಲಿ.

ಶ್ರೀ ಸಿ. ಬೈರೇಗೌಡ:- ಯಾರಿಗೆ....

ಶ್ರೀ ವಾಟಾಳ್ ನಾಗರಾಜ್:- ಯಾರಿಗೆ ಹೇಳುತ್ತಿದ್ದೀರಿ ಕೋಪಬೇಡ, ಗಂಭೀರವಾಗಿ ಹೇಳಿರಿ.

ಶ್ರೀ ಹೆಚ್. ಏಕಾಂತಯ್ಯ:- ಸನ್ಮಾನ್ಯ ಅಧ್ಯಕ್ಷರೇ, ಈಗ ಕಾಗೋಡು ತಿಮ್ಮಪ್ಪನವರು ನಾನು ನಿಂತ ತಕ್ಷಣ ಈ ಒಂದು ಮಾತನ್ನು ಹೇಳಿರುವುದರಿಂದ ಏನು ಅರ್ಥವಾಗುತ್ತದೆ; ಎಂದರೆ ಈ ಮನೆಯಲ್ಲಿ ಸ್ವಲ್ಪ ಈ ಚರ್ಚೆಯನ್ನು ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲಿ ಹಲವಾರು ಪಕ್ಷದ ಸರಕಾರಗಳು ನಮ್ಮ ರಾಜ್ಯದಲ್ಲಿ ಬಂದಿವೆ, ಆ ಸರಕಾರಗಳು ಇದ್ದಾಗ ಅನೇಕ ಹಗರಣಗಳು ನಡೆದಿರಬಹುದು, ಆದರೆ ನಮ್ಮೆಲ್ಲರ ಉದ್ದೇಶ ಈ ಹಗರಣಗಳಲ್ಲಿ ಯಾರು ಅಧಿಕಾರವನ್ನು ಹೊಂದಿದ್ದರು, ಜನತೆಯ ಪ್ರತಿನಿಧಿಯಾಗಿ ಅವರು ತಪ್ಪು ಮಾಡಿದರೆ ಅವರ ಮೇಲೆ ಹೊಣೆಗಾರಿಕೆಯನ್ನು ನಾವು ಗುರುತು ಮಾಡಬೇಕು. ಮತ್ತು ಅವರ ಮೇಲೆ ಕ್ರಮ ತೆಗೆದುಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾಗಬೇಕೆನ್ನುವುದು ಎಲ್ಲಾ ಪಕ್ಷದ, ಆದರಲ್ಲೂ ಯಾರು ದಕ್ಷ ಭ್ರಷ್ಟಾಚಾರ ರಹಿತ ಸರಕಾರ ಕೊಡಬೇಕೆಂದು ಮನಸ್ಸು ಮಾಡಿದ್ದಾರೆ ಅವರ ಗುರಿ. ಇಲ್ಲಿ ನಾವೆಲ್ಲರೂ ಪರಸ್ಪರ ಆರೋಪಗಳನ್ನು ಮಾಡುವುದರಿಂದ ಇದು ಬಗೆಹರಿಯುವುದಿಲ್ಲ. ಏನು ಕಾಗೋಡು ತಿಮ್ಮಪ್ಪನವರು ಹೇಳುತ್ತಿದ್ದಾರೆ, 83ನೇ ಇಸವಿಯಲ್ಲಿ ರಾಮಕೃಷ್ಣ ಹೆಗಡೆಯವರ ಸರಕಾರ ಇತ್ತು, ಆಗಲೂ ಹಗರಣಗಳು ಆಗಿವೆ ಎಂದು ಹೇಳಿದರು. 1947ನೇ ಇಸವಿಯಿಂದ ಸ್ವಾತಂತ್ರ್ಯ ಬಂದಮೇಲೆ ಅಥವಾ ಇತ್ತೀಚಿನ ದಿನಗಳಲ್ಲಿ ಹೆಚ್ಚುಹೆಚ್ಚು ಹಗರಣಗಳು ಆಗಿರಬಹುದು, ಇದರ ಅರ್ಥ ನಾವು ಹಗರಣಗಳನ್ನು ಒಪ್ಪಿಕೊಂಡಿರಬೇಕೆಂದು ಅಲ್ಲ. ನಮ್ಮ ವ್ಯವಸ್ಥೆಯಲ್ಲಿ ಏನಿದೆ ಕೇವಲ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡುವ ಪ್ರವೃತ್ತಿ ಬೆಳೆದು ಬಂದಿದೆ, ಆದರೆ ತಮಗೆ ಗೊತ್ತಿರುವ ಹಾಗೆ wherever there is a misconduct of a Minister I would like to know whether he is accountable. ಸನ್ಮಾನ್ಯ ಅಧ್ಯಕ್ಷರೇ ತಮಗೆ ಗೊತ್ತಿರುವ ಹಾಗೆ ನಮ್ಮ ರಾಜಕೀಯ ಮತ್ತು ಆಡಳಿತ ವ್ಯವಸ್ಥೆಯಲ್ಲಿ ಯಾರು ಜನತೆಯ ಪ್ರತಿನಿಧಿಯಾಗಿ ಒಂದು ಪ್ರಾಧಿಕಾರವನ್ನು, ಒಂದು ಅಧಿಕಾರವನ್ನು ಹೊಂದಿರುತ್ತಾರೆ ಅವರನ್ನು ಶಿಕ್ಷೆ ಮಾಡುವಂತಹ ಅವಶ್ಯಕತೆ ಇದ್ದರೂ ಸಹ ಎಲ್ಲಿಯೂ ಸಹ ಅಂತಹ ಕಾನೂನನ್ನು ನಮ್ಮ ರಾಜ್ಯದಲ್ಲಿ ನಮ್ಮ ರಾಷ್ಟ್ರದಲ್ಲಿ ಜಾರಿ ಮಾಡಿಲ್ಲ. ನಮ್ಮೆಲ್ಲರ ಹೊಣೆಗಾರಿಕೆ ಏನಿದೆ, ನಾನು ಇವತ್ತಿನ ದಿವಸ ಮಂತ್ರಿಯಾಗಿ ಒಂದು ಕೆಟ್ಟ ಕೆಲಸ ಮಾಡಿದ್ದರೆ ಭ್ರಷ್ಟಾಚಾರದ ಆರೋಪ ನನ್ನ ಮೇಲೆ ಮಾಡಿದ್ದರೆ, ಸಾಮಾನ್ಯ ನಾಗರಿಕರಿಗೆ what is the locastandi to go against me ತಾವು ಪುನಃ ಹೋಗಬೇಕಾಗುತ್ತದೆ, ಯಾರ ಹತ್ತಿರ ಹೋಗಬೇಕು, ಯಾರ ಸರಕಾರ ಇದೆ, ಈ ಸರಕಾರವನ್ನು ಮೊರೆ ಹೋಗಬೇಕಾಗುತ್ತದೆ, ಸರಕಾರದಲ್ಲಿರುವಂತಹ ಜನ ಏನಿದ್ದಾರೆ ನಾನು ತಪ್ಪು ಮಾಡಿದ್ದರೆ ನಾನು ಮುಂದೆ ರಾಜಕಾರಣ ಮಾಡಬೇಕೆಂಬ ಆಸೆ ಇದ್ದರೆ, ಇವತ್ತಿನ ದಿವಸ ಅಧಿಕಾರಕ್ಕೆ ಬಂದರೆ ಯಾವ ಅಧಿಕಾರೇತರರು ಯಾವುದೇ ಪಕ್ಷದವರಾಗಿದ್ದರೂ ಸಹ ಅವರ ಮೇಲೆ ಕ್ರಮ ತೆಗೆದುಕೊಳ್ಳುವ ಪ್ರವೃತ್ತಿ ನಡೆದು ಬಂದಿಲ್ಲ. ಇಂತಹ ಒಂದು ಪ್ರವೃತ್ತಿಯನ್ನು ಮುಂದುವರಿಸಿಕೊಂಡು ಹೋಗಬೇಕೇ ಇಲ್ಲವೇ ಎಂಬುದರ ಬಗ್ಗೆ ಚರ್ಚೆ ಆಗಬೇಕಾಗಿದೆ. ಅದಕ್ಕೋಸ್ಕರ ನಾನು ತಮ್ಮನ್ನು ಕೇಳುತ್ತಿದ್ದೇನೆ, ನಾವು ಆರೋಪ ಪ್ರತ್ಯಾರೋಪಗಳನ್ನು ಮಾಡುವ ಮುಖಾಂತರ ಕೇವಲ ರಾಜಕೀಯವಾಗಿ, ಸಾರ್ವಜನಿಕವಾಗಿ ಹೊರಗೆ ಎಳೆಯುವುದರ ಮುಖಾಂತರ ಶಿಕ್ಷೆ ಕೊಡುವುದಕ್ಕೆ ಸಾಧ್ಯ ಇದೆಯೇ ಹೊರತು ಕಾನೂನು ಪ್ರಕಾರ ಶಿಕ್ಷೆ ಕೊಡುವ ಅವಕಾಶ ಈ ಆಡಳಿತ ವ್ಯವಸ್ಥೆ ನಮ್ಮಲ್ಲಿ ಇಲ್ಲದಿರುವುದರಿಂದ ಇವತ್ತಿನ ದಿವಸ ನಾವು ಏನು ಬೇಕಾದರೂ ಆರೋಪ ಮಾಡಬಹುದಾಗಿದೆ ಮಾಡಿ ಅದನ್ನು ದಕ್ಕಿಸಿಕೊಳ್ಳಬಹುದಾಗಿದೆ. ಕಾಗೋಡು

ತಿಮ್ಮಪ್ಪನವರು ಏನು ಹೇಳುತ್ತಿದ್ದಾರೆ, ಹೌದು, ನಮ್ಮ ಕಾಲದಲ್ಲೂ ಹಗರಣ ಆಗಿದೆ ಎಂದು ಹೇಳುವುದಾದರೆ ಆ ಹಗರಣಗಳನ್ನು ರಾಜಕೀಯವಾಗಿ ಪತ್ರಿಕೆಗಳಿಗೆ ಹೇಳುವುದರ ಮುಖಾಂತರ ಇಲ್ಲಿ ಚರ್ಚೆ ಮಾಡುವುದರ ಮುಖಾಂತರ ನೀವು ನಮ್ಮನ್ನು ಹೊಣೆಗಾರರನ್ನಾಗಿ ಮಾಡುವುದಕ್ಕೆ ಸಾಧ್ಯ ಇಲ್ಲ, ಅದಕ್ಕೆ ಬದಲು ಇಂತಹ ಆರೋಪಗಳಿಗೆ, ಹಗರಣಗಳಿಗೆ ಕಾರಣರಾದವರ ಮೇಲೆ ಉಗ್ರವಾದ ಶಿಕ್ಷೆ ಕೊಡುವ ಪ್ರವೃತ್ತಿ ಅವಕಾಶ ಕಲ್ಪಿಸಿಕೊಡುವ ರೀತಿ ಚರ್ಚೆ ಆಗಬೇಕಾಗಿದೆ. ಅದನ್ನು ಹೊರತುಪಡಿಸಿ ಇಲ್ಲ, ಇಲ್ಲ, ನೀವು ಹೇಳಿಬಿಟ್ಟರೆ ನಾನೂ ಹೇಳುತ್ತೇನೆ ಎನ್ನುವುದಾದರೆ ಅದು ನಾವೂ ನೀವೂ ಜನತಂತ್ರ ವ್ಯವಸ್ಥೆಗೆ ಮಾಡುವ ದೊಡ್ಡ ಮೋಸವಾಗುತ್ತದೆ. ಇವತ್ತಿನ ದಿವಸ ಕೇವಲ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡುವುದರ ಮುಖಾಂತರ ಅಧಿಕಾರೇತರರಾದಂಥ ನಾವು ನೀವು ಹಗರಣಗಳಿಗೆ ಕಾರಣಕರ್ತರಾಗಿದ್ದೇವೆ, ಭ್ರಷ್ಟಾಚಾರದಿಂದ ಏನು ಮುಳುಗಿ ಹೋಗಿದ್ದೇವೆ ಅದನ್ನು ಬಯಲು ಮಾಡುವುದರಿಂದ ಮಾತ್ರ ಇವತ್ತಿನ ದಿವಸ ಈ ದೇಶದ ಜನರಿಗೆ ಉಪಕಾರ ಮಾಡಿದಂತಾಗುವುದಿಲ್ಲ, ಅದಕ್ಕೆ ಬದಲು ತಾವು ಇವತ್ತಿನ ದಿವಸ ಹೇಳಬೇಕಾಗಿದೆ, ನಿರ್ದಿಷ್ಟ ಆರೋಪ ಏನಾದರೂ ಮಾಡಿದ್ದರೆ ಅಧಿಕಾರದಲ್ಲಿ ಇರುವಂತಹ ಜನ ಅವರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಅದನ್ನು ಮಾಡದೇ ಇರುವುದರ ಮುಖಾಂತರ, ತಾವು ಏನು ಮಾಡಿದ್ದೀರಿ, ನಮ್ಮಂತಹವರು ತಪ್ಪಿಸಿಕೊಳ್ಳುವುದಕ್ಕೆ ಸಹಾಯ ಮಾಡಿದ್ದೀರಿ, ನಮ್ಮಂತಹವರು ಈಗಿರುವವರಿಗೆ ಸಹಾಯ ಮಾಡಿದ್ದಾರೆ, ಮುಂದೆ ಬರುವವರು ಈಗಿರುವವರಿಗೆ ಸಹಾಯ ಮಾಡುವ ಪ್ರವೃತ್ತಿ ಬೆಳೆದು ಬರುತ್ತಿದೆ. ಆದುದರಿಂದ ನಾವೂ ನೀವೂ ಪ್ರಾಮಾಣಿಕವಾಗಿ ಚರ್ಚೆ ಮಾಡಬೇಕಾದುದು ಏನು ಎಂದರೆ ರಾಜಕೀಯ ಪ್ರತಿನಿಧಿಯಾಗಿ ರಾಜಕೀಯ ಪಕ್ಷದ ಸರಕಾರ ಇದ್ದಾಗ ಏನು ಪ್ರತಿನಿಧಿಗಳು, ಮಂತ್ರಿಗಳು ಇದ್ದಾರೆ ಅವರು ಮಾಡಿದ ಮಿಸ್‌ಕಾಂಡಕ್ಟ್ It may be a Minister's misconduct or it is a misconduct of any Legislator ಅದಕ್ಕೆ ಶಿಕ್ಷೆ ಕೊಡುವಂತಹ ರೀತಿಯಲ್ಲಿ ತಮ್ಮದೇನಾದರೂ ಸಲಹೆ ಇದೆಯೇ ಅದನ್ನು ಹೊರತುಪಡಿಸಿ ಕೇವಲ ಚರ್ಚೆ ಮಾಡುವುದರ ಮುಖಾಂತರ ನೀವು ನನ್ನನ್ನು ಬೈಯುವುದು, ನಾವು ನಿನ್ನನ್ನು ಬೈಯುವುದು ಒಳಗಡೆ ಹೋಗಿ ನಾವಿಬ್ಬರೂ ಶಾಮೀಲಾಗಿ ಇರುವುದು ಇದು ಜನರಿಗೆ ಮಾಡುವಂತಹ ವಂಚನೆಯಾಗುತ್ತದೆಯೇ ಹೊರತು ಮತ್ತೇನೂ ಆಗುವುದಿಲ್ಲ.

ಶ್ರೀ ವೈ.ಕೆ. ರಾಮಯ್ಯ:- ಮಾನ್ಯ ಅಧ್ಯಕ್ಷರೇ ಒಂದು ಸೆಕೆಂಡ್ ನನಗೆ ಅವಕಾಶ ಕೊಡಬೇಕು. ದಯಮಾಡಿ ಈ ಅರ್ಥದಲ್ಲಿ.

ಶ್ರೀ ಕಾಗೋಡು ತಿಮ್ಮಪ್ಪ:- ನಾನು ಮುಗಿಸಿಬಿಡುತ್ತೇನೆ. ಮಾನ್ಯ ಅಧ್ಯಕ್ಷರೇ ಮಾನ್ಯ ಏಕಾಂತಯ್ಯನವರ ಏಕಾಭಿಪ್ರಾಯದ ಬಗ್ಗೆ ಭಿನ್ನಾಭಿಪ್ರಾಯ ಇಲ್ಲ. ಈ ವ್ಯವಸ್ಥೆ ಬರಬೇಕು. ಸಂಬಂಧಪಟ್ಟ ಎಲ್ಲರೂ ಅಧಿಕಾರಿಗಳಾಗಲಿ ಅಧಿಕಾರೇತರರು ಆಗಲಿ ಜವಾಬ್ದಾರಿ ಹೊರುವಂತಹ ವ್ಯವಸ್ಥೆ ಬರಬೇಕು. ಅದು ಪಕ್ಷಾತೀತವಾಗಿ ಚರ್ಚೆಯಾಗಿ ತೀರ್ಮಾನವಾದರೆ ನಾನು ಒಪ್ಪುತ್ತೇನೆ. ಇಲ್ಲವೆಂದು ಹೇಳುವುದಿಲ್ಲ. ಅದನ್ನೇ ಇವತ್ತು ವಿಶೇಷವಾಗಿ ಪ್ರಸ್ತಾಪ ಮಾಡಿ ಶತಮಾನದಲ್ಲಿ ನಡೆಯದೇ ಇರತಕ್ಕಂಥ ಘಟನೆ ಎಂಬ ಒಂದು ದೊಡ್ಡ ಶಬ್ದವನ್ನು ಬಳಸಿ ಇವತ್ತು ಪತ್ರಿಕೆಗಳಲ್ಲಿ ಬರುವ ರೀತಿಯಲ್ಲಿ ಪ್ರಚಾರ ಪಡೆಯುವುದಕ್ಕೆ ನಮ್ಮ ಮಾನ್ಯ ವಿರೋಧಪಕ್ಷದ ನಾಯಕರು....

ಶ್ರೀ ಹೆಚ್. ಏಕಾಂತಯ್ಯ:- ಅದಕ್ಕೆ ತಾವು ಅಷ್ಟು ಮಹತ್ವ ಕೊಡಬೇಕಾಗಿಲ್ಲ. ತಾವು ಸಹ ಕುಲದೀಪ್‌ಸಿಂಗ್ ಆಯೋಗದ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಪಡಿಸಿದಿರಿ. ನೀವು ನಮ್ಮ ಮೇಲೆ ಹೇಳುತ್ತೀರಿ ನಾವು ನಿಮ್ಮ ಮೇಲೆ ಹೇಳುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ:- ಆದ್ದರಿಂದ ಇದಕ್ಕೆ ಉತ್ತರವಾಗಿ ನಾನು ಹೇಳಿದೆ. ಅದಕ್ಕೋಸ್ಕರ ನಾನು ವಿರೋಧಪಕ್ಷದ ನಾಯಕರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನೀವು ಏನು ಚರ್ಚೆ ಮಾಡಿದ್ದೀರಿ ಅದರಲ್ಲಿ ಬಂದಂತಹ ಕೆಲವು ಏನಾದರೂ ತಪ್ಪುಗಳು ಇದ್ದರೆ ನೋಡಿ

ತಿದ್ದಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಮತ್ತೆ ಗೃಹಮಂಡಲಿಯ ಮೇಲೆ ಅನಾವಶ್ಯಕವಾಗಿ ಅಗೌರವ ಬರುವ ಹಾಗೆ ಮತ್ತೆ ಅದರ ಒಂದು ಘನತೆ ಗೌರವಕ್ಕೆ ಧಕ್ಕೆ ಬರುವ ಹಾಗೆ ಮಾಡಿ ಅದರ ಘನತೆಯನ್ನು ಇಳಿಸುವುದಕ್ಕೆ ಪ್ರಯತ್ನ ಮಾಡಬೇಡಿ. ಪ್ರಾಮಾಣಿಕವಾಗಿ ಕೆಲಸ ಮಾಡಿದ್ದಾರೆ. ಅವರು ಕೈಗೊಂಡಿರತಕ್ಕ ಕಾಮಗಾರಿಗಳನ್ನು ಪೂರ್ಣ ಮಾಡುವುದಕ್ಕೆ ಅವರಿಗೆ ಶಕ್ತಿ ಬಂದಿದೆ. ಇನ್ನು ಜಾಸ್ತಿ ಮಾಡಬೇಕು. ನನ್ನಂತಹವರು ಇನ್ನು ಒಂದು ಮೂರು ವರ್ಷಗಳು ಅದರಲ್ಲಿ ಕುಳಿತುಕೊಂಡರೆ ಸರಿಯಾದ ಕೆಲಸ ಆಗುತ್ತದೆ. ಈಗ ಮಹಾರಾಷ್ಟ್ರ ಗೃಹಮಂಡಲಿ ಏನಿದೆ ಅದಕ್ಕೆ ಯಾವ ಹಣ ಇಲ್ಲದೆ ತನ್ನದೆ ಶಕ್ತಿಯ ಮೇಲಿದೆ. ನಮ್ಮಲ್ಲಿರತಕ್ಕಂಥ ಭೂಮಿಯನ್ನು ಉಪಯೋಗಿಸಿಕೊಂಡು ಇವತ್ತು ಸುಮಾರು ಒಂದು ಸಾವಿರ ಕೋಟಿ ರೂಪಾಯಿಗಳ ಯೋಜನೆಗಳನ್ನು ಮಾಡುವುದಕ್ಕೆ ಆಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಪಟ್ಟಂತೆ ಯಾವುದೂ ಯೋಜನೆ ಇಲ್ಲ. ಕೋಲಾರಕ್ಕೆ ಸಂಬಂಧಪಟ್ಟಂತೆ ಯಾವುದೂ ಯೋಜನೆ ಇಲ್ಲ. ಬೆಳಗಾಂ ಜಿಲ್ಲೆಗೆ ಸಂಬಂಧಪಟ್ಟಂತೆ ಯೋಜನೆ ಇಲ್ಲ. ಅಧ್ಯಕ್ಷರೇ ಮಂಡ್ಯದಲ್ಲಿ ಸ್ವಲ್ಪ ಜಮೀನು ಇತ್ತು ಅದರಲ್ಲೇ ಮಾಡಿದ್ದೇವೆ. ಇವತ್ತು ನಿಮ್ಮ ಜಿಲ್ಲೆಯಲ್ಲಿ ಕೂಡ ದೊಡ್ಡ ದೊಡ್ಡ ಯೋಜನೆಗಳನ್ನು ಮಾಡುವುದಕ್ಕೆ ಭೂಮಿ ನಮಗೆ ಸಿಗುತ್ತಿಲ್ಲ. ನಮಗೆ ಎಲ್ಲಿ ಭೂಮಿ ಚೆನ್ನಾಗಿ ಸಿಗುತ್ತದೆ ಅಲ್ಲಿ ಹೆಚ್ಚು ಹೆಚ್ಚು ಯೋಜನೆಗಳನ್ನು ಮಾಡುವುದಕ್ಕೆ ಆಗುತ್ತದೆ ಮತ್ತು ಹಣಕಾಸಿನ ಸಹಾಯ ಪಡೆಯುವುದಕ್ಕೆ ಆಗುತ್ತದೆ. ಇವತ್ತು ಹಣ ಬರಲಿಲ್ಲ ಟೈ ಆಫ್ ಆಗಲಿಲ್ಲ ಟೈ ಆಫ್ ಆಗಿ ಅಪ್ಪ ಮಾಡಿಟ್ಟ ದೊಡ್ಡ ಗಂಟು ಇದ್ದರೆ ಅದನ್ನು ಚೆನ್ನಾಗಿ ಇಟ್ಟುಕೊಂಡು ಕಬಳಿಸಿಕೊಂಡು ಚೆನ್ನಾಗಿ ಮಾಡಬಹುದು, ಕೆಲಸ ಮಾಡಿ ಹಣ ತರಬಹುದು ಕಾಣದವರೆಲ್ಲರನ್ನೂ ಕಾಣಬೇಕು ಎಲ್ಲಾ ಸಂಸ್ಥೆಗಳನ್ನು ನೋಡಬೇಕು ಅವರನ್ನು ಒಲಿಸಿಕೊಂಡು ಅವರಿಂದ ಹಣ ತೆಗೆದುಕೊಂಡು ಬಂದು ಕೆಲಸ ಮಾಡಬೇಕು. ಆ ರೀತಿ ಹೋರಾಟ ಮಾಡಿ ಇನ್ನಷ್ಟು ಯೋಜನೆಗಳನ್ನು ಮಾಡಿ ಇವತ್ತು ನಮ್ಮ ರಾಜ್ಯದಲ್ಲಿ ಕನಿಷ್ಠ ಒಂದು ಲಕ್ಷ ಮನೆಗಳನ್ನು ಕಟ್ಟುವ ಅವಶ್ಯಕತೆ ಇದೆ. ಬೀಡಿ ಕಾರ್ಮಿಕರಿಗೆ ಮನೆ ಕೊಡುವಂತಹ ಅವಶ್ಯಕತೆ ಇದೆ. ಅದನ್ನು ಹೆಚ್ಚು ಉಪಯೋಗ ಮಾಡಿಕೊಳ್ಳುವುದಕ್ಕೆ ಆಗಿಲ್ಲ. ಆ ದೃಷ್ಟಿಯಿಂದ ಗೃಹಮಂಡಲಿಗೆ ಕಳಂಕ ಬರುವ ರೀತಿಯಲ್ಲಿ ಚರ್ಚೆ ಮಾಡಬೇಡಿ. ಸಲಹೆ ಇದ್ದರೆ ಕೊಡಿ ಅವರು ಒಳ್ಳೆಯ ಆಡಳಿತವನ್ನು ನಡೆಸಲಿ ಕೆಲಸ ಚೆನ್ನಾಗಿ ಮಾಡಲಿ ಅವರ ಬೆನ್ನು ತಟ್ಟಿ ನಡೆಸಿ ಸಣ್ಣ ಲೋಪವನ್ನು ದೊಡ್ಡದಾಗಿ ವಿಶಾಲವಾಗಿ ಮಾಡುವುದಕ್ಕೆ ಹೋಗಬೇಡಿ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಿ ಮುಂದೆ ಏನು ಕಾರ್ಯಕ್ರಮ ಮಾಡಬೇಕು ತನಿಖೆ ಮಾಡಬೇಕು ಎಂದು ತಾವು ಹೇಳುವಾಗ ಇದನ್ನು ಸೇರಿಸಿ ಎಲ್ಲಾ ತನಿಖೆ ಮಾಡಬೇಕೆಂದು ನಾನು ಒತ್ತಾಯ ಮಾಡಿ ಅದು ಸರ್ಕಾರಕ್ಕೆ ಬಿಟ್ಟಿದ್ದು ಅವರು ಯಾವ ತರಹ ತೀರ್ಮಾನ ಮಾಡುತ್ತಾರೋ ಮಾಡಲಿ ಅದು ಅವರಿಗೆ ಬಿಟ್ಟಿರತಕ್ಕಂಥಾದ್ದು ಇಷ್ಟು ಮಾತ್ರ ಹೇಳಿ ಆಶ್ರಯ ಯೋಜನೆ ವಿಚಾರದಲ್ಲಿ ಮಾತ್ರ ಒಂದು ತಾಲ್ಲೂಕಿನ ಶಾಸನಸಭಾ ಕ್ಷೇತ್ರಕ್ಕೆ ಒಂದು ಸಾವಿರ ಮನೆಗಳಿಗೆ ಕಡಿಮೆ ಆಗಕೂಡದು ಎನ್ನತಕ್ಕಂಥ ಒತ್ತಾಯವನ್ನು ಮತ್ತೊಮ್ಮೆ ಮಾಡಿ ತಮಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವೈ.ಕೆ. ರಾಮಯ್ಯ:- ಮಾನ್ಯ ಅಧ್ಯಕ್ಷರೇ ಈ ಚರ್ಚೆಯಲ್ಲಿ ನಾನು ಭಾಗವಹಿಸಬೇಕು ಅಂತ ಅನಿಸಿರಲಿಲ್ಲ. ನಾನು ಸದನದಲ್ಲಿ ಕುಳಿತುಕೊಂಡು ಇವತ್ತಿನ ಚರ್ಚೆಯನ್ನು ಕೇಳಿದಾಗ, ಈ ಸಭೆಯಲ್ಲಿ ವಿಶೇಷವಾದಂತಹ ವಿಷಯ ನನ್ನ ಗಮನಕ್ಕೆ ಬಂತು.

ಅಧ್ಯಕ್ಷರು:- ಭಾಷಣ ಮಾಡುತ್ತಿದ್ದಿರೇನು?

ಶ್ರೀ ವೈ.ಕೆ. ರಾಮಯ್ಯ:- ಇಲ್ಲ. ಕ್ಲಾರಿಫಿಕೇಶನ್ ಕೇಳುತ್ತಿದ್ದೇನೆ. ಆ ಕಡೆಯಿಂದ ಮಾತನಾಡಿದಂತಹ ಮಾನ್ಯ ಸದಸ್ಯರು ಈ ಕಡೆಯ ಮಾನ್ಯ ಸದಸ್ಯರಿಗೆ ಉತ್ತರ ಕೊಡುವಾಗ ನಿಮ್ಮ ಕಾಲದಲ್ಲಿ ಆಗಿಲ್ಲವೇ ಅದೇ ರೀತಿ ನಮ್ಮ ಕಾಲದಲ್ಲಿ ನಡೆದಿದೆ ನಿಮ್ಮ ಸರ್ಕಾರ ಇದ್ದಾಗ ನಡೆದಿದೆ ನಮ್ಮ ಪಕ್ಷದ ಸರ್ಕಾರ ಇದ್ದಾಗಲೂ ನಡೆದಿದೆ ನಿಮ್ಮ ಪಕ್ಷದ ಸರ್ಕಾರವಿದ್ದಾಗಲೂ ನಡೆದಿದೆ

ಎಂದು ಆರೋಪ ಮಾಡಿದರು. ಅದಕ್ಕೆ ಉತ್ತರ ಕೊಡುವಾಗ ಈ ಸದನದ ಸದಸ್ಯರಾದ ಹಾಗೂ ನನ್ನ ಮಿತ್ರರಾದ ಶ್ರೀ ಆಳ್ವರವರು ಹೌದು ನಾನು ಮಾಡಿದ್ದೇವೆ, ಕಾಶ್ಮೀರದಿಂದ ಕನ್ಯಾಕುಮಾರಿವರೆಗೂ ವಿರೋಧಪಕ್ಷದ ಸಂಘಟನೆಗಾಗಿ ಮಾಡಿದ್ದೇವೆ.

DR. JEEVARAJ ALVA:- He has misquoted. No State's interests were bartered. ಎರಡೂ ಮಾಡಿದ್ದೇವೆ. ಅಂದರೆ ನಾವು ತಪ್ಪು ಮಾಡಿದ್ದೇವೆ. ಪಾಪ ಮಾಡಿದ್ದೇವೆ ಅಂದರೆ, ಆ ತರಹ ಮಾಡಿದ್ದೇವೆಂದು ಹೇಳಲಿಲ್ಲ. No State's interests were bartered ಶ್ರೀ ರಾಮಯ್ಯನವರು ಹಿರಿಯರು ನನ್ನ ಭಾಷೆಯ ವೈಖರಿಯಲ್ಲಿ ನಾನು vocal, precise, clear ಮಾಡಿದ್ದೇನೆ. ಸಮಾವೇಶಕ್ಕೆ ಹಣ ಖರ್ಚು ಮಾಡಿದ್ದೇವೆ ಬಸ್ಸು ತಂದಿದ್ದೇವೆ. ಹಿಂದೆ ಹೇಳಿದರಲ್ಲ ಇವೆಲ್ಲಾ ರಾಜಕೀಯವಾಗಿ ಮಾಡಬೇಕಾಗುತ್ತದೆ. ಸಮಾವೇಶಗಳು ಜಾಂಬೂರಿಗಳು ಕಾನ್ಫರೆನ್ಸ್‌ಗಳು ಪೊಲಿಟಿಕಲ್ ಇಂಟರೆಸ್ಟ್‌ನಿಂದ ನೋಡಬೇಕಾಗುತ್ತದೆ, ಅಪೋಸಿಷನ್ ಪಾರ್ಟೀಸ್ ನೋಡಬೇಕಾಗುತ್ತದೆ, ಚುನಾವಣೆ ಮಾಡಬೇಕಾಗುತ್ತದೆ. ಇದೆಲ್ಲಾ ಮಾಡುವಾಗಲೂ I differed. ನಿಮಗೂ ನಮ್ಮ ಸಂಸ್ಕೃತಿಗೂ ವ್ಯತ್ಯಾಸವೇನೆಂದರೆ At no time there was a nexus. Bureaucracy was not exploited. ಅದರಿಂದ ಅದನ್ನು ಕ್ಲಿಯರ್ ಆಗಿ ಹೇಳಿದನೆ ಹೊರತು, ತಪ್ಪಾಗಿದ್ರೆ if I was misheard, misquoted, I stand corrected.

ಶ್ರೀ ವೈ.ಕೆ. ರಾಮಯ್ಯ:- ನನ್ನ ವಾಖ್ಯಾನ ಎಂದು ಹೇಳಲಿಕ್ಕಾಗುವುದಿಲ್ಲ. ನನ್ನ ಅಭಿಪ್ರಾಯ, ನಾವಂತೂ ಈ ಎರಡೂ ಸಂಸ್ಕೃತಿಗಳು ಹೊರತಾದವರು. ನನ್ನ ದೃಷ್ಟಿಯಿಂದ, ನೀವು ಮಾಡಿಲ್ಲವೇ ಎಂದು ಅವರು ಕೇಳುವಂಥ ಪದ್ಧತಿಯಲ್ಲಾಗಲೀ, ವಾಖ್ಯಾನವಾಗಲೀ ಅತ್ಯಂತ ತಪ್ಪೆಂದು ನನ್ನ ಭಾವನೆ.

ಡಾ|| ಜೀವರಾಜ್ ಆಳ್ವ:- ಅದಕ್ಕೆ, ನಾನು ಅದು ನಮ್ಮ ಸಂಸ್ಕೃತಿ ಅಲ್ಲವೆಂದು ಹೇಳಿದ್ದುದು. ಏಕೆಂದರೆ I do not want to be misquoted. He was a part of the Government. He was a part of the Party. ನಾವು ಮಾಡಿಲ್ಲ. ಆದ್ದರಿಂದ ಆ ಸಂಸ್ಕೃತಿ ನಮ್ಮದಲ್ಲ. ಅದು ಅವರ ಸಂಸ್ಕೃತಿ. ಇದನ್ನು ಸರಿಪಡಿಸಿಕೊಳ್ಳಿ ಎಂದು ಹೇಳುತ್ತಿದ್ದೇನೆ.

ಶ್ರೀ ಕೆ.ಜೆ. ಜಾರ್ಜ್:- ನಮ್ಮ ಸಂಸ್ಕೃತಿ ಎಂದು ನೀವು ಹೇಳುತ್ತಿದ್ದೀರಿ. ಈಗ ನಿಮ್ಮ ಪದ್ಧತಿಯನ್ನು ನಾವು ಹೇಳುತ್ತಿದ್ದೇವೆ.

ಡಾ|| ಜೀವರಾಜ್ ಆಳ್ವ:- ದೇಶಪಾಂಡೆಯುವರು ಹೇಳಿದರು 3 ವರ್ಷಗಳ ಕಾಲ ಆ ಸ್ಥಾನದಲ್ಲಿ ನೀವು ಇದ್ದೀರಿ, you are accountable, you are accountable to this Chair. If you had little guts, courage, conviction, integrity, you should have ordered a judicial prob. ಅದು ಬಿಟ್ಟು, ನೀವು ಮಾಡಿಲ್ಲವೇ ಇದು ಸತತವಾಗಿ ವಿಧಾನ ಸಭೆಯಲ್ಲಿ ನಡೆಯುತ್ತಿದೆ. ಸಭಾಧ್ಯಕ್ಷರೆ, ಎಂದು ಹೇಳುವುದು, ನಮ್ಮ ಮತದಾರರ ಹತ್ತಿರ ಹೋಗಬಾರದೇ? ಪ್ರತಿಸಾರಿ ಏನಾದರೂ ಒಂದು when we make a serious allegation, shamelessly you say, ನೀವು ಮಾಡಿದ್ದೀರಿ, ನಾವು ಮಾಡಿದ್ದೇವೆ, ನಿಮ್ಮ ಸರ್ಕಾರದಲ್ಲಿ ಆಗಿತ್ತು, ಈ ತರಹ ಕುತಂತ್ರ ಬೇಡ. ಈ ತರಹ ಎಸ್ಕೇಪಿಸಂ ಬೇಡ. Even to this day, I am prepared ಎಲ್ಲಾ ಮಾಡಲಿ. ಇವತ್ತು ಕರ್ನಾಟಕ ಜನತಾದಳ ಕಾರ್ಯಾಧ್ಯಕ್ಷನಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಚಾಲೆಂಜ್ ಕೊಡುತ್ತಿದ್ದೇನೆ. ಸಿ.ಬಿ.ಐ ಎನ್‌ಕ್ವಯರಿ ಮಾಡುವುದಿದ್ದರೆ Let it cover to us also. We are ready. ಸಿ.ಬಿ.ಐ. ಎನ್‌ಕ್ವೊಯರಿ ಮಾಡಲಿ. We are ready. ಅದು ಬಿಟ್ಟು let us not mine words. ಪುನಃ ಪುನಃ ಯಾವುದೋ ಡಿ.ಎಲ್.ಎಫ್ ಮಾಡಿದ್ದಿರಿ, ಸ್ಟೇಡಿಯಂ ಮಾಡಿದ್ದಿರಿ, ಇದು ಬೇಡ. Let us get down to the depth. ಹೋಗೋಣ. ಅದುಬಿಟ್ಟು ಅದೂ ಇದು

ಎಂದರೆ, ಅದಕ್ಕೆ ನಮ್ಮ ಸಂಸ್ಕೃತಿ ಹೊರತು, ನಾನು ಏನು ಹೇಳಿದೆ ಎಂದರೆ, ತಾವು ಅದನ್ನೆಲ್ಲಾ ಮಾಡಬೇಡಿ. ಕಾಂಗ್ರೆಸ್ ಸಂಸ್ಥೆಯ ಬಲಸಂವರ್ಧನೆಗೆ ನೀವು ಪ್ರಯತ್ನ ಪಟ್ಟಿರಿ. ನಾವು ವಿರೋಧ ಪಕ್ಷದ ಬಲಸಂವರ್ಧನೆಗೆ ಪ್ರಾಮಾಣಿಕ ಪ್ರಯತ್ನ ಮಾಡಿದೆವು. ನಾವು ಜಾಂಬೂರಿ ಮಾಡಿದೆವು, ಜನತಾದಳ ಕಾನ್‌ಫರೆನ್ಸ್ ಮಾಡಿದೆವು, ನಮ್ಮ 5 ವರ್ಷಗಳ ಸಮಾವೇಶ ಮಾಡಿದೆವು. ಅದು ಹಿಸ್ಟಾರಿಕ್, ಚಾರಿತ್ರಿಕ. ಅದಕ್ಕೂ ನಿಮಗೂ ಸಂಬಂಧ ಹೋಲಿಸಬೇಡಿ. ಏಕೆಂದರೆ ನಮಗೂ ನಿಮಗೂ ಬಹಳ ಅಜಗಜಾಂತರ ವ್ಯತ್ಯಾಸ ಇದೆ. ನಮ್ಮ ಭಾವನೆಗಳೇನೆಂದರೆ, ಯಾವುದೋ ಒಂದು ಕಾರಣಕ್ಕೆ ಮುಂದಿನ ರಾಜಕೀಯ ದೃಢೀಕರಣ ಆದಾಗ ಸ್ವಲ್ಪ ಇಂಪ್ರೂವ್ ಮಾಡಿಕೊಳ್ಳಿ.

ಶ್ರೀ ವೈ.ಕೆ. ರಾಮಯ್ಯ:- ಸನ್ಮಾನ್ಯ ಅಧ್ಯಕ್ಷರೆ, ನಾನು ಯೀಲ್ಡ್ ಆಗಿಲ್ಲ. ನಿಂತೇ ಇದ್ದೇನೆ. ನಾನು ನೋಡುತ್ತಿದ್ದೇನೆ, ಆಗಲೇ ಸುಮಾರು 10 ವರ್ಷವಾಯಿತು ನಾನು ಸದಸ್ಯನಾಗಿ. ಕಿರಿಚಾಡಲಿಕ್ಕೆ ದೇವರು ನನಗೆ ಗಂಟಲು ಜಾಸ್ತಿ ಕೊಟ್ಟಿಲ್ಲ. ಆದರಿಂದ ನಮ್ಮ ಪರಿಸ್ಥಿತಿ ಹೀಗಾಗಿದೆ. ನನ್ನ ಉದ್ದೇಶ ಇಷ್ಟೇ, ಯಾರು ಯಾರ ಸಂಸ್ಕೃತಿ ಏನಾದರೂ ಆಗಿಕೊಂಡು ಹೋಗಿರಲಿ. ಅವರು ವ್ಯಾಖ್ಯಾನ ಮಾಡಿದಂಥ ಸಂದರ್ಭದಲ್ಲಿ ಜನತಾಪಕ್ಷ ಅಧಿಕಾರದಲ್ಲಿ ಇದ್ದಂಥ ಸಂದರ್ಭದಲ್ಲಿ ಅದೇ ಕಾಲಕ್ಕೆ ಗೃಹಮಂಡಳಿ ಅಧ್ಯಕ್ಷನಾಗಿ ನಾನು ಹೆಚ್ಚಿನ ಕಾಲ ಕೆಲಸ ಮಾಡಿದ್ದೇನೆ. ಆದ್ದರಿಂದ, ಪರೋಕ್ಷವಾಗಿ ಆ ಸಂದರ್ಭದಲ್ಲಿ ಭ್ರಷ್ಟಾಚಾರ ನಡೆಯಿತು, ಅವ್ಯವಹಾರ ನಡೆಯಿತು, ಅಪಚಾರ ನಡೆಯಿತು, ಅನ್ಯಾಯ ನಡೆಯಿತೆಂದರೆ ಈ ಸದನದಲ್ಲಿ ಕುಳಿತುಕೊಂಡಿರುವಾಗ ಅದಕ್ಕೆ ಒಂದು ಕ್ಲಾರಿಫಿಕೇಷನ್ ಹೇಳಲೇಬೇಕಾಗಿದೆ ಎಂದು ಎದ್ದು ನಿಂತುಕೊಂಡಿದ್ದೇನೆ ಅಷ್ಟೆ. ನನ್ನ ದೃಷ್ಟಿಯಿಂದ ನೀವು ಇದ್ದಾಗ ಮಾಡಲಿಲ್ಲವೇ? ಏನು ಸ್ವಾಮಿ, ನಿಮ್ಮ ಸರ್ಕಾರ ಉತ್ತರಪ್ರದೇಶದಲ್ಲಿ ಮಾಡಲಿಲ್ಲವೇ? ಅಲ್ಲಿ 50 ಜನ ಸತ್ತಿದ್ದಾರೆ ನಮ್ಮಲ್ಲಿ 10 ಜನ ಸತ್ತಿದ್ದಾರೆ ಆದ್ದರಿಂದ we are better than them. ಈ ತರಹ ವ್ಯಾಖ್ಯಾನಗಳು, ಹೇಳಿಕೆಗಳು ಯಾರಿಗೂ ತರವಲ್ಲವೆಂದು ನನ್ನ ಅಭಿಪ್ರಾಯ. ನಾವು ಪಕ್ಷ ಕಟ್ಟುವುದಕ್ಕೆ ದುಡ್ಡು ಮಾಡಿದೆವೆಂದು ನಾನು ಹೇಳುವುದಾದರೆ ಅದೂ ತರವಲ್ಲ. ನೀವು ಇದ್ದಾಗ ಮಾಡಲಿಲ್ಲವೇ ಎಂದು ನಿಮ್ಮ ಕಡೆ ಬೆರಳು ಮಾಡಿ ತೋರುವಂಥಾದ್ದು ಅದೂ ತರವಲ್ಲ. ನಾವು ಸರಿಯಾಗಿ ನಡೆದುಕೊಳ್ಳಲಿಲ್ಲ. ಸರಿಯಾಗಿ ರಾಜ್ಯದ ಜನರ ಹಿತರಕ್ಷಣೆ ಮಾಡಲಿಲ್ಲವೆಂದು ನಮ್ಮನ್ನು ಸೋಲಿಸಿ ನಿಮ್ಮನ್ನು ತಂದು ಕೂರಿಸಿದ್ದಾರೆ. ದಯಮಾಡಿ ಮತ್ತೆ ನೀವು ಸೋತು ಇಲ್ಲಿಗೆ ಬರಬೇಡಿ. ಜನರ ಹಿತ, ಕೆಲಸವನ್ನು ಸ್ವಚ್ಛ ಮಾಡಿಕೊಂಡು ಹೋಗುವಂಥ ಕೆಲಸ ಮಾಡಿ. ನಮ್ಮ ಕಡೆ ಬೆರಳು ತೋರಬೇಡಿ. ಸನ್ಮಾನ್ಯ ಅಧ್ಯಕ್ಷರೆ, ಈ ಆಶ್ರಯ ಯೋಜನೆ ಬಗ್ಗೆ ಬಹುಶಃ ನನ್ನನ್ನು ಸೇರಿದ ಹಾಗೆ ಈ ಸದನದಲ್ಲಿ ಯಾರದು ತಕರಾರಿಲ್ಲ. ನಮ್ಮ ತಕರಾರಿರುವುದು ಅನುಷ್ಠಾನದ ಬಗ್ಗೆ. ಅಲ್ಲಿ ನಡೆದಿರತಕ್ಕಂಥ ಅವ್ಯವಹಾರದ ಬಗ್ಗೆ; ಅಲ್ಲಿ ನಡೆದಿರತಕ್ಕಂಥ ತಾಂತ್ರಿಕತೆ ಬಗ್ಗೆ ಇಲ್ಲ. ಸನ್ಮಾನ್ಯ ಸದಸ್ಯರು ಹೊರಟುಹೋದರೆಂದು ಮಾನ್ಯರು ತಾಂತ್ರಿಕತೆ ಬಗ್ಗೆ ಬಹಳ ಹೇಳಿದರು. 1984ನೇ ಇಸವಿಯಲ್ಲಿ ಆ ತಾಂತ್ರಿಕತೆಯನ್ನು ಅಳವಡಿಸಿಕೊಂಡು, 450 ಮನೆಗಳನ್ನು ನಾವು ರೈತರುಗಳಿಗೆ ಕಟ್ಟಿಸಿಕೊಟ್ಟಿದ್ದೇವೆ. ಆ ತಾಂತ್ರಿಕತೆಯು ಹೊಸದಾಗಿ ಪ್ರಪಂಚದಿಂದ ಇಳಿದು ಬಂದುದು ಅಲ್ಲ. ಅವೊತ್ತು ಕೂಡ ಆ ತಾಂತ್ರಿಕತೆಯನ್ನು ನಾವು ಅಳವಡಿಸಿಕೊಳ್ಳುತ್ತಾ ಇದ್ದೆವು. ಇನ್ನೊಂದು ವಿಷಯವನ್ನು ಅವರು ಹೇಳಿದರು...

ಅಧ್ಯಕ್ಷರು:- ಮಾನ್ಯ ರಾಮಯ್ಯನವರೆ, ತಾವುಗಳು ಇನ್ನೂ ಸ್ವಲ್ಪ ಸಮಯವನ್ನು ತೆಗೆದುಕೊಳ್ಳಿ, ಏಕೆಂದರೆ ನೀವು ಅದರ ಅಧ್ಯಕ್ಷರಾಗಿ ಇದ್ದವರು. ಆದ್ದರಿಂದ ಇನ್ನೂ ಹೆಚ್ಚಿನ ವಿವರಗಳನ್ನು ನೀವು ಕೊಡಬಹುದು. ಈಗ ಸದನವು ಮುಂದುವರಿದು ಮತ್ತೆ ಮೂರು ಗಂಟೆಗೆ ಸೇರುತ್ತದೆ.

(ಸದನವು 1-47ಕ್ಕೆ ತನ್ನ ಕಲಾಪಗಳನ್ನು ಸ್ಥಗಿತಗೊಳಿಸಿ ಮತ್ತೆ 3-00 ಗಂಟೆಗೆ ಸೇರಲು ನಿರ್ಧರಿಸಿತು)

ಸದನವು 3 ಗಂಟೆ 20 ನಿಮಿಷಕ್ಕೆ ಮರುಸಮಾವೇಶಗೊಂಡಿತು.

(ಉಪಾಧ್ಯಕ್ಷಿಣಿಯವರು ಪೀಠದಲ್ಲಿ)

ಶ್ರೀ ವಾಟಾಳ್ ನಾಗರಾಜ್:- ಮಹಾರಾಷ್ಟ್ರದಲ್ಲಿ 10–12 ಲಕ್ಷ ಜನ ಕನ್ನಡಿಗರಿದ್ದಾರೆ, ಅವರಿಗೆ ರಕ್ಷಣೆ ಇಲ್ಲ, ದೊಡ್ಡ ಗದ್ದಲವಾಗಿ ಎಲ್ಲರೂ ವಲಸೆ ಬರುತ್ತಿದ್ದಾರೆ, ನಮ್ಮ ಸರ್ಕಾರ ರಕ್ಷಣೆ ಕೊಡುತ್ತಿಲ್ಲ, ಮಹಾರಾಷ್ಟ್ರ ಸರ್ಕಾರವೂ ಅವರಿಗೆ ರಕ್ಷಣೆ ಕೊಡುತ್ತಿಲ್ಲ. ಮಹಾರಾಷ್ಟ್ರ ಸರ್ಕಾರ ಅವರಿಗೆ ರಕ್ಷಣೆ ಕೊಡಬೇಕಾಗಿದ್ದುದು ಕರ್ತವ್ಯ. ರಕ್ಷಣೆ ಕೊಡಲಿಲ್ಲ ಎನ್ನುವ ಕಾರಣಕ್ಕಾಗಿ ರೈಲು ತುಂಬ ಕನ್ನಡಿಗರು ಬರುತ್ತಿದ್ದಾರೆ, ಅವರ ಪರಿಸ್ಥಿತಿಯೇನು? ಅವರಿಗೆ ಸಹಕಾರ ಕೊಡುವವರು ಯಾರು?

ಉಪಾಧ್ಯಕ್ಷಿಣಿಯವರು:- ಮಾನ್ಯ ಮಂತ್ರಿಗಳು ಹೌಸ್‌ಗೆ ಬರುತ್ತಿದ್ದಾರೆ, ಅವರು ಬಂದ ಮೇಲೆ...

ಶ್ರೀ ಆರ್.ವಿ. ದೇಶಪಾಂಡೆ:- ಇದು ಬಹಳ ಮಹತ್ವದ ಪ್ರಶ್ನೆ ಇದೆ. ಮುಂಬಯಿಯಲ್ಲಿ ಪ್ರಧಾನಿ ಇದ್ದರು, ಅವರೇ ಒಪ್ಪಿಕೊಂಡಿದ್ದಾರೆ ಬಹಳಷ್ಟು ಜನ ಬಾಂಬೆ ಬಿಟ್ಟು ಹೋಗುತ್ತಿದ್ದಾರೆ. ನಾನು ಬಾಂಬೆಗೆ ಕಾಂಟಾಕ್ಟ್ ಮಾಡಿದಾಗ ನನಗೂ ಗೊತ್ತಾಯಿತು, ಬಹಳ ಜನ ಕನ್ನಡಿಗರು ಬರ್ತಿದ್ದಾರೆ, ಬಹಳ ಭಯ ತೊಂದರೆಯಲ್ಲಿದ್ದಾರೆ, ಭಯದ ವಾತಾವರಣ ಇದೆ, ಮತ್ತು ಮಾನ್ಯ ಮುಖ್ಯಮಂತ್ರಿಗಳು ಮೂರು ದಿವಸದಿಂದ ಸದನಕ್ಕೆ ಏಕೆ ಬರ್ತಿಲ್ಲ, ನನಗೆ ಗೊತ್ತಾಗುತ್ತಿಲ್ಲ, ನನಗೆ ಆಶ್ಚರ್ಯವಾಗುತ್ತಿದೆ. ಅವರು ಮೂರ್ನಾಲ್ಕು ವಿಷಯಗಳಲ್ಲಿ ಸ್ಟೇಟ್‌ಮೆಂಟ್ ಮಾಡಬೇಕು. 10 ಗಂಟೆತನಕ ನಾವು ಕಾಯುವುದಕ್ಕಾಗುವುದಿಲ್ಲ, ದಯಮಾಡಿ ಮುಖ್ಯಮಂತ್ರಿಗಳನ್ನು ಕರೆಯಿಸಿ, ಅವರು ಬಂದು ಹೇಳಲಿ.

ಶ್ರೀ ವಾಟಾಳ್ ನಾಗರಾಜ್:- ಬಹಳ ಭಯದ ವಾತಾವರಣ ಅಲ್ಲಿ ರಚನೆಯಾಗಿದೆ, ಕನ್ನಡಿಗರಿಗೆ ಅಲ್ಲಿ ರಕ್ಷಣೆ ಇಲ್ಲ, ಈ ನೀತಿಯನ್ನು ವಿರೋಧಿಸಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ, ಇದು ಸರಿಯಲ್ಲ, ಬೆಳಿಗ್ಗೆಯಿಂದ ಮುಖ್ಯಮಂತ್ರಿಗಳನ್ನು ಕರೆಯುತಿದ್ದೇವೆ, ಏನು ನಡೆದಿದೆ ಎಂದು ಹೇಳಬೇಕು ಮುಖ್ಯಮಂತ್ರಿಗಳು ಯಾರೂ ಇಲ್ಲಲ್ಲ, ಯಾರಾದರೂ ಹೇಳಬೇಕು.

(ಶ್ರೀ ವಾಟಾಳ್ ನಾಗರಾಜ್ ಅವರು ಸಭಾತ್ಯಾಗ ಮಾಡುವರು)

ಉಪಾಧ್ಯಕ್ಷಿಣಿ:- ಅವರು ಸದನಕ್ಕೆ ಬಂದ ತಕ್ಷಣ ಅದಕ್ಕೆ ಏನು ಉತ್ತರ ಕೊಡಬೇಕೋ ಅದನ್ನು ಕೊಡುತ್ತಾರೆ.

(ಗೊಂದಲ)

ಶ್ರೀ ಎಂ. ನಾರಾಯಣಸ್ವಾಮಿ:- ಮಹಾರಾಷ್ಟ್ರ ಸರ್ಕಾರ ಇದುವರೆಗೂ ಕನ್ನಡಿಗರಿಗೆ ರಕ್ಷಣೆ ಕೊಡುವ ವಿಚಾರದಲ್ಲಿ ಯಾವುದೇ ಮಾತನಾಡಿಲ್ಲ, ಒಂದು ಕೋಟಿ ರೂ. ಪರಿಹಾರ ಕೊಡುತ್ತೇವೆಂದು ಹೇಳಿದ್ದಾರೆ. ಹೊರತಾಗಿ ಈ ಅಮಾಯಕ ಅಥವಾ ಬಲಿಪಶುಗಳಾಗಿರುವ ಜನರಿಗೆ ರಕ್ಷಣೆ ಕೊಡುವ ಮಾತು ಆಡಿಲ್ಲ. ಇದು ತಪ್ಪು ನೀತಿ. ಏಕೆಂದರೆ ಒಬ್ಬ ಮನುಷ್ಯ ಸಾಯುವ ಸಂದರ್ಭದಲ್ಲಿ ಸರ್ಕಾರ ರಕ್ಷಣೆಗೆ ಬರದಿದ್ದರೆ ಬರುವವರು ಯಾರು? ಆದ್ದರಿಂದ ಗೋವಾದಲ್ಲಿ ಗಲಾಟೆ ಆಯಿತು, ಅಲ್ಲಿ ನಾವು ಬಲಿಪಶು ಆಗಿದ್ದೇವೆ, ಮಹಾರಾಷ್ಟ್ರದಲ್ಲಿ ಆಯಿತು ನಾವು ಬಲಿಪಶು ಆಗಿದ್ದೇವೆ, ಆದ್ದರಿಂದ ಮಾನ್ಯ ವೀರಪ್ಪ ಮೊಯಿಲಿಯವರು ಆಗಿರಬಹುದು ಅಥವಾ ಪ್ರಧಾನಮಂತ್ರಿ ಆಗಿರಬಹುದು ಅವರಿಂದ ಒಂದು ಸ್ಟೇಟ್‌ಮೆಂಟ್ ಕೂಡ ಇಲ್ಲ ಆದ್ದರಿಂದ ಕೂಡಲೇ ಕ್ರಮ ತೆಗೆದುಕೊಳ್ಳುವ ವ್ಯವಸ್ಥೆ ಮಾಡಬೇಕು.

ಶ್ರೀ ವೈ.ಕೆ. ರಾಮಯ್ಯ:- ಸನ್ಮಾನ್ಯ ಅಧ್ಯಕ್ಷಿಣಿಯವರೇ,....

ಶ್ರೀ ಕೆ.ಹೆಚ್. ಹನುಮೇಗೌಡ:- ಸನ್ಮಾನ್ಯ ಅಧ್ಯಕ್ಷಿಣಿಯವರೇ, ನಾನು ಎಂಟು-ಹತ್ತು ದಿವಸಗಳ ಹಿಂದೆ ಒಂದು ಹಕ್ಕುಚ್ಯುತಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೆ.

ಉಪಾಧ್ಯಕ್ಷರು:- ಅದು ಬಂದಿದೆ. ಇವತ್ತು ಸಾಯಂಕಾಲ ಸಭೆ ಮುಗಿಯುವುದರೊಳಗಾಗಿ ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಬೈರೇಗೌಡ:- ಮಾನ್ಯ ಉಪಾಧ್ಯಕ್ಷಿಣಿಯವರೇ, ಏನೋ ಸೂಚನೆ ಕೊಟ್ಟಿದ್ದೀರಿ ಎಂದು ಹೇಳುತ್ತೀರಿ. ಏನು ಸೂಚನೆ ಎನ್ನತಕ್ಕಂಥದ್ದು ಗೊತ್ತಿಲ್ಲ. ಅದು ಏನು ಎಂದು ನಮಗೆ ಗೊತ್ತಾದರೆ ಅದು ಸರಿ, ತಪ್ಪೇ, ಎಂದು ಹೇಳುವುದಕ್ಕೆ ಅವಕಾಶವಾಗುತ್ತದೆ.

ಉಪಾಧ್ಯಕ್ಷರು:- ಎಸ್ಟಿಮೇಟ್ಸ್ ಕಮಿಟಿಯ ವಿಷಯವನ್ನು ಹೇಳಿದ್ದಾರೆ.

ಶ್ರೀ ಸಿ. ಬೈರೇಗೌಡ:- ತಮಗೆ ಮತ್ತು ಸದಸ್ಯರಿಗೆ ಗೊತ್ತಾದರೆ ನಮಗೂ ತಿಳಿದುಕೊಳ್ಳುವ ಅವಶ್ಯಕತೆ ಇದೆ. ಅದು ಏನು ಎಂದು ಗೊತ್ತಿಲ್ಲ.

ಶ್ರೀ ವೈ.ಕೆ. ರಾಮಯ್ಯ:- 'ಊರಿಗೆ ಬಂದವಳು ನೀರಿಗೆ ಬರಲ್ಲವೇ' ಮೇಡಂ ಅವರೇ. ಊರಿಗೆ ಬಂದವಳು ನೀರಿಗೆ ಬಂದೇ ಬರುತ್ತಾಳೆ.

ಶ್ರೀ ಕೆ.ಹೆಚ್. ಹನುಮೇಗೌಡ:- ಈಗ ನನಗೆ ಅವಕಾಶವನ್ನು ಕೊಟ್ಟರೆ ನಾನು ಹೇಳುತ್ತೇನೆ.

ಉಪಾಧ್ಯಕ್ಷರು:- ಈ ಸಭೆ ಮುಗಿಯುವುದರೊಳಗಾಗಿ ಅದರ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳೋಣ.

ಶ್ರೀ ವೈ.ಕೆ. ರಾಮಯ್ಯ:- ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಸದನದಲ್ಲಿ ಆಶ್ರಯ ಯೋಜನೆಯ ಬಗ್ಗೆ ಮತ್ತು ಈ ಆಶ್ರಯ ಯೋಜನೆಯನ್ನು ಅನುಷ್ಠಾನಕ್ಕೆ ತರುವುದರಲ್ಲಿ ಗೃಹನಿರ್ಮಾಣ ಮಂಡಲಿಯ ವೈಖರಿಯ ಬಗ್ಗೆ ಚರ್ಚೆ ನಡೆಯುತ್ತಿತ್ತು. ಆಶ್ರಯ ಯೋಜನೆ ತಂದಂಥ ಸರ್ಕಾರಕ್ಕೆ ಅದಕ್ಕೆ ಒತ್ತುಕೊಟ್ಟಂಥ ನನ್ನ ಸ್ನೇಹಿತರಿಗೆ ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ. ಈ ಯೋಜನೆಯ ಹಿನ್ನೆಲೆಯಲ್ಲಿ ಸೂರು ಇಲ್ಲದಂಥವರಿಗೆ ಸೂರು ಕೊಡುವುದು, ನಿವೇಶನ ಇಲ್ಲದಂಥವರಿಗೆ ನಿವೇಶನ ಕೊಡುವಂಥ ಒಂದು ಅತ್ಯಂತ ಪವಿತ್ರವಾದ ಕೆಲಸವನ್ನು ಮಾಡುವುದಕ್ಕೆ ಈ ಯೋಜನೆಯನ್ನು ತಂದಿದ್ದಾರೆ. ಈ ಯೋಜನೆಯ ಬಗ್ಗೆಯಾಗಲೀ ಇದರ ಪಾವಿತ್ರತೆಯ ಬಗ್ಗೆಯಾಗಲೀ, ಅವಶ್ಯಕತೆಯ ಬಗ್ಗೆಯಾಗಲಿ ಬಹುಶಃ ನನ್ನನ್ನೂ ಸೇರಿಸಿದಂತೆ ಈ ಕಡೆ ನಾವು ಯಾರೂ ಚಕಾರ ಶಬ್ದವನ್ನು ಎತ್ತಲಿಲ್ಲ. ನಾವು ತಕರಾರು ಹೇಳುತ್ತಿರುವುದು ಇದರ ಅನುಷ್ಠಾನದಲ್ಲಿ ಅಥವಾ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರುವಂಥ ಸಂದರ್ಭದಲ್ಲಿ ನಡೆದಂಥ ನ್ಯೂನತೆಗಳು, ಅವ್ಯವಹಾರಗಳು, ಪಕ್ಷಪಾತಗಳು ಇದೆಲ್ಲಕ್ಕಿಂತ ಅತ್ಯಂತ ಮಿಗಿಲಾಗಿ ಭ್ರಷ್ಟತನ. ಇದರ ಬಗ್ಗೆ ವಿರೋಧಪಕ್ಷದ ನಾಯಕರಿಂದ ಹಿಡಿದು ನಾವೆಲ್ಲಾ ವ್ಯಾಖ್ಯಾನ ಮಾಡುತ್ತಿದ್ದೇವೆಯೇ ಹೊರತು ಇದರ ಪಾವಿತ್ರ್ಯತೆಯ ಬಗ್ಗೆಯಾಗಲೀ, ಅವಶ್ಯಕತೆಯ ಬಗ್ಗೆಯಾಗಲೀ ಚರ್ಚೆ ಮಾಡುತ್ತಿಲ್ಲ. ಅದನ್ನು ಬಿಟ್ಟು ಈ ಸದನದ ಸದಸ್ಯರೂ ಆಗಿರತಕ್ಕಂಥ ಗೃಹಮಂಡಲಿಯ ಅಧ್ಯಕ್ಷರಾಗಿರುವಂಥ ನನ್ನ ಸ್ನೇಹಿತರು ಈಗತಾನೆ ನನ್ನ ಸ್ನೇಹಿತರ ಪಕ್ಕದಲ್ಲಿ ಕುಳಿತುಕೊಂಡು ಹೇಳುತ್ತಿದ್ದರು. ಟೋಪಿ ಅಂಗಡಿಗೆ ಹೋಗಿ ಟೋಪಿ ಕೇಳಿದರೆ ಕೊಡುತ್ತಾರೆ. ಯಾರೊ ಟೋಪಿ ತೆಗೆದುಕೊಳ್ಳುವುದಕ್ಕೆ ಟೋಪಿ ಅಂಗಡಿಗೆ ಹೋಗುವುದು ಬಿಟ್ಟು ಚಪ್ಪಲಿ ಅಂಗಡಿಗೆ ಹೋದರಂತೆ. ಆ ರೀತಿ ನಾವು ಕೇಳುವುದೇ ಒಂದು. ಅವರು ಉತ್ತರ ಕೊಡುವುದೇ ಒಂದು. ಗೃಹಮಂಡಲಿಯೊಳಗೆ ತಂತ್ರಜ್ಞಾನವನ್ನು ಅಳವಡಿಸಿಕೊಂಡಿರುವ ಬಗ್ಗೆ ಅವರು ಹೇಳಿದರು. ಅದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ. ಆಶ್ರಯ ಯೋಜನೆಯ ಕಾರ್ಯರೂಪಕ್ಕೆ ಬಂದಿರುವಂಥ ನಿಜಸ್ವರೂಪ ತಮಗೆ ಏನಾದರೂ ಗೊತ್ತಾಗಬೇಕಾದರೆ

ದಯಮಾಡಿ ಮಂತ್ರಿಗಳು, ಕುಣಿಗಲ್ ಕ್ಷೇತ್ರದಲ್ಲಿ ಏಕೆಂದರೆ ಇದು ಕ್ಷೇತ್ರವಾರು ಅನುಷ್ಠಾನ ನಡೆದಿರುವಂಥದ್ದನ್ನು ದಯಮಾಡಿ ತರಿಸಿ ನೋಡಿ. ಬೇರೆ ಕ್ಷೇತ್ರದಲ್ಲಿ ಚುನಾವಣೆ ಇರಲಿಲ್ಲವಲ್ಲ. ಕುಣಿಗಲ್ ಕ್ಷೇತ್ರದಲ್ಲಿ ಚುನಾವಣೆ ಇತ್ತು. ಆದ್ದರಿಂದ ಅನುಷ್ಠಾನದ ನಿಜಸ್ವರೂಪ ನಿಮ್ಮ ಗಮನಕ್ಕೆ ಬರಬೇಕಾದರೆ ದಯಮಾಡಿ ತರಿಸಿ ನೋಡಿ. ಎಷ್ಟು ಚೆನ್ನಾಗಿ ಅನುಷ್ಠಾನಕ್ಕೆ ಬಂದಿದೆ ಈ ಬಡವರ ಕಾರ್ಯಕ್ರಮ ಎಂದು. ತುಮಕೂರು ತಾಲ್ಲೂಕಿನ ತಹಶೀಲ್ದಾರ್‌ರವರು ಬಡವರಿಗೆ ನಿವೇಶನವನ್ನು ಕೊಂಡುಕೊಳ್ಳುವುದಕ್ಕಾಗಿ ಒಂದು ಲಕ್ಷ ರೂಪಾಯಿಗಳನ್ನು ಯಾರಿಗೋ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ಅದಕ್ಕೆ ಒಂದು ಕಾಗದದ ಮೇಲೆ ರೆಸಲ್ಯೂಷನ್ ಕೂಡ ಆಗಿಲ್ಲ. ಅವರಿಗೇನು ಪ್ರಮೋಷನ್ ಕೊಟ್ಟಿದ್ದೀರೋ ಅಥವಾ ಬೇರೆ ಕಡೆಗೆ ಟ್ರಾನ್ಸ್‌ಫರ್ ಮಾಡಿದ್ದೀರೋ ನನಗೆ ಗೊತ್ತಿಲ್ಲ. ಸನ್ಮಾನ್ಯ ಜಿಲ್ಲಾಧಿಕಾರಿಗೆ ಆಶ್ರಯ ಸಮಿತಿಯ ಅಧ್ಯಕ್ಷನಾಗಿ ಪತ್ರವನ್ನು ಬರೆದಿದ್ದೇನೆ. ಇವತ್ತಿನವರೆಗೂ ಅದಕ್ಕೆ ಉತ್ತರವಿಲ್ಲ. ಕಾಗದದ ಮೇಲೆ ಸಾವಿರಾರು ನಿವೇಶನಗಳನ್ನು ಹಂಚಿರುವಂಥ ಅಂಕಿಅಂಶಗಳನ್ನು ನಾನೂ ನೋಡಿದ್ದೇನೆ. ನೀವೂ ನೋಡಬಹುದು. ಆದರೆ ಕಾರ್ಯತಃ ಅಷ್ಟು ನಿವೇಶನಗಳನ್ನು ಹಂಚಲ್ಲ. ಈ ಸದನದಲ್ಲಿ ಸಾವಿರಾರು ಮನೆಗಳನ್ನು ಕಟ್ಟಿರುವ ಅಂಕಿಅಂಶಗಳನ್ನು ಕೇಳಿದ್ದು ಆಯಿತು. ನನ್ನ ಕ್ಷೇತ್ರದ್ದು ಬೇಡ, ಈ ಸರ್ಕಾರದಲ್ಲಿ ಅತ್ಯಂತ ಹಿರಿಯ ಮಂತ್ರಿಯಾಗಿರುವಂತಹ ಸನ್ಮಾನ್ಯ ಹುಚ್ಚಮಾಸ್ತಿ ಗೌಡರ ಕ್ಷೇತ್ರ, ನನ್ನ ಪಕ್ಕದ ಕ್ಷೇತ್ರ. ನನ್ನ ಹುಟ್ಟೂರು ಅದು. ಒಂದೇ ಒಂದು ಮನೆಯನ್ನು ಕಟ್ಟಿ ಅವರು ಏನಾದರೂ ಪೂರ್ಣ ಮಾಡಿದ್ದರೆ ನೀವು ಈ ಯೋಜನೆಯನ್ನು ಕಾರ್ಯರೂಪಕ್ಕೆ ತಂದಿದ್ದಕ್ಕಾಗಿ ನಿಮ್ಮನ್ನು ಅಭಿನಂದಿಸುತ್ತೇನೆ. ಬಡವರ ಹೆಸರಿನಲ್ಲಿ, ದೊಡ್ಡ ದೊಡ್ಡ ಪದಗಳನ್ನು ಉಪಯೋಗಿಸಿ ವಂಚನೆಯನ್ನು ಈ ಆಶ್ರಯ ಯೋಜನೆಯಲ್ಲಿ ಮಾಡಬೇಡಿ ಎಂದು ಅಷ್ಟೇ ನಮ್ಮ ತಕರಾರು. ಇಷ್ಟು ಹೇಳಿ ಮತ್ತೊಮ್ಮೆ ಒತ್ತಿ ಹೇಳುತ್ತೇನೆ. ಯಾವ ಉದ್ದೇಶ ಸಾಧನೆಗಾಗಿ ಈ ಆಶ್ರಯ ಯೋಜನೆಯನ್ನು ರೂಪಿಸುತ್ತಿದ್ದೀರೋ ಅದನ್ನು ದಯಮಾಡಿ ಭ್ರಷ್ಟತೆಗೆ ಹೊರತಾಗಿ, ಪಕ್ಷಪಾತಕ್ಕೆ ಹೊರತಾಗಿ, ರಾಜಕೀಯಕ್ಕೆ ಹೊರತಾಗಿ, ದಯಮಾಡಿ ಅದನ್ನು ಕಾರ್ಯರೂಪಕ್ಕೆ ತನ್ನಿ, ನಿಮ್ಮನ್ನು ಅಭಿನಂದಿಸುತ್ತೇನೆ. ಬಹುಶಃ ನಾನು ಇಲ್ಲಿಗೆ ಬಂದು ಕುಳಿತುಕೊಳ್ಳುವವರೆಗೆ ಈ ಚರ್ಚೆಯಲ್ಲಿ ಭಾಗವಹಿಸುವಂತಹ ಮನಸ್ಸು ಆಗಲಿ ಅಥವಾ ತಿಳುವಳಿಕೆ ಆಗಲಿ ಇರಲಿಲ್ಲ. ಇಲ್ಲಿಗೆ ಬಂದು ಕುಳಿತುಕೊಂಡ ಮೇಲೆ, ಈ ಸಂದರ್ಭದಲ್ಲಿ ನಡೆದಂತಹ ಚರ್ಚೆಯ ವಿಶೇಷವನ್ನು ನೋಡಿದ ಮೇಲೆ ನಾನು ಈ ವಿಷಯದಲ್ಲಿ ಎರಡು ಮಾತುಗಳನ್ನು ಹೇಳಬೇಕೆಂದು ಮಾತನಾಡುತ್ತಿದ್ದೇನೆ. ಕರ್ನಾಟಕ ಗೃಹಮಂಡಳಿ ಕಾರ್ಯವೈಖರಿ ಬಗ್ಗೆ ಚರ್ಚೆ ನಡೆಯಿತು. ಹಿಂದೆ ನಡೆದಿರುವ ಬಗ್ಗೆ ಆ ಕಡೆ ನನ್ನ ಸ್ನೇಹಿತರು ನಿಮ್ಮ ಕಾಲದಲ್ಲೂ ನಡೆಯಿತು, ನಿಮ್ಮ ಸರ್ಕಾರ ಇದ್ದಾಗಲೂ ನಡೆಯಿತು, ನಿಮ್ಮ ಪಕ್ಷ ಸರ್ಕಾರದ ಇದ್ದಾಗಲೂ ನಡೆಯಿತು ಎಂದು ಈ ಕಡೆಗೆ ಬೆರಳು ಮಾಡಿ ತೋರಿಸಿದರು. ಅಂದರೆ ಈ ಕಡೆಯ ಸರ್ಕಾರ ಇದ್ದಂತಹ ಕಾಲದಲ್ಲಿ ಅತೀ ಹೆಚ್ಚಿನ ಕಾಲ ಗೃಹಮಂಡಲಿಯ ಅಧ್ಯಕ್ಷನಾಗಿ ಕೆಲಸ ಮಾಡಿದಂತಹವನು ನಾನು. ಅವರು ಕೆಲವು ಹೆಸರುಗಳನ್ನು ಕೂಡ ಪ್ರಸ್ತಾಪ ಮಾಡಿದರು. ಶ್ರೀ ಹೆಚ್.ಎಲ್. ತಿಮ್ಮೇಗೌಡರು ಈ ಮನೆಯ ಸದಸ್ಯರಲ್ಲ, ಅವರು ಅಧ್ಯಕ್ಷರಾಗಿ ಹಿಂದೆ ಕೆಲಸ ಮಾಡಿದ್ದಾರೆ. ನಮ್ಮ ವಿರೋಧ ಪಕ್ಷ ಸರ್ಕಾರ ಕೆಲಸ ಮಾಡುವಂತಹ ಸಂದರ್ಭದಲ್ಲಿ ಶ್ರೀ ಬಾಪೂಗೌಡ ಚರ್ಶನಾಪುರ್ ಅವರು ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಅವರು ಇವತ್ತು ದೈವಾಧೀನರಾಗಿ ಈ ಸದನದಲ್ಲಿ ಅಷ್ಟೇ ಅಲ್ಲ, ಈ ಭೂಮಿಯಲ್ಲೂ ಇಲ್ಲದಿರುವುದರಿಂದ ನೀವು ಎತ್ತಿದ ಯಾವ ತಕರಾರಿಗೂ ಅವರ ಕೈಯಲ್ಲಿ ಉತ್ತರ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ. ಅದೃಷ್ಟಕ್ಕೋ ದುರಾದೃಷ್ಟಕ್ಕೋ ಆ ಕಾಲದಲ್ಲಿ ಅಧ್ಯಕ್ಷನಾಗಿ ಕೆಲಸ ಮಾಡಿದವನು ನಾನು ಒಬ್ಬ ಮಾತ್ರ ಇಲ್ಲಿ ಕುಳಿತಿದ್ದೇನೆ. ಆದ್ದರಿಂದ ವಿಧಿ ಇಲ್ಲದೆ ನೀವು ಕೇಳಿದಂತಹ ಎರಡು ಪ್ರಶ್ನೆಗೆ ಉತ್ತರವನ್ನು ಕೊಡಬೇಕಾಗಿದೆ. ನಾನು ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕಿಂತ ಮೊದಲು ನಾನು ಎಲ್ಲರಂತೆ ಒಬ್ಬ ಸಾಮಾನ್ಯ ರಾಜಕಾರಣಿ. ಸರ್ವಗುಣ ಸಂಪನ್ನನಲ್ಲಿ ಸರ್ವಜ್ಞನಲ್ಲ,

ಸರ್ವ ಸಮಸ್ಯೆಗಳ ಸಂಜೀವಿಯೂ ಅಲ್ಲ, ಎಂದು ಈ ಮೂರು ಮಾತುಗಳನ್ನು ಹೇಳುತ್ತೇನೆ. ಗುಣಮಟ್ಟದ ಬಗ್ಗೆ ನನ್ನ ಸ್ನೇಹಿತರು ಹೇಳಿದರು. ನಿಮ್ಮ ಕಾಲದಲ್ಲಿ ಕಟ್ಟಿಡ ಮನೆಗಳ ಪೈಕಿ ಕಿತ್ತುಹೋಗುವ ಮನೆಗಳು ಇರಲಿಲ್ಲವೇ? ಅಲ್ಲಾ ಆದರೆ ಬಿದ್ದು ಹೋಗುವಂಥ ಮನೆಗಳು ಇರಲಿಲ್ಲವೇ ಎಂದು ಕೇಳಿದರು. ಇಲ್ಲ ಎಂದು ನಾನು ಹೇಳಲಾರೆ. ಯಲಹಂಕ ಒಂದರಲ್ಲಿ ನಾನು ಒಂದೇ ದಿವಸ ನಿಂತುಕೊಂಡು 40 ಮನೆಗಳ ಅಡಿಪಾಯವನ್ನು ಕಿತ್ತು ಬಿಸಾಕಿಸಿದೆ. ಅವತ್ತಿನ ಕಂಟ್ರಾಕ್ಟರ್ ಬಂದು ಹೇಳಿದರು, ನನ್ನ ಮನೆ ಹಾಳಾಗುತ್ತದೆ ಎಂದು. ಇವತ್ತು ಎಷ್ಟು ಜನ ನಂಬುತ್ತಾರೋ ಬಿಡುತ್ತಾರೋ ನಾನು ಅವರಿಗೆ ಒಂದು ಮಾತು ಹೇಳಿದೆ. 40 ಜನಗಳ ಮನೆಗಳನ್ನು ಉಳಿಸುವುದಕ್ಕೆ ನನ್ನ ಕೈಯಲ್ಲಿ ಸಾಧ್ಯ ಆಗುವುದಾದರೆ ನಿನ್ನ ಮನೆ ಹಾಳಾಗಿ ಹೋಗಲಿ ಎಂದು ಅವನಿಗೆ ಹೇಳಿಕಳಿಸಿದೆ. ನಾನು ನನ್ನ ಮಿತ್ರರನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಎಷ್ಟು ಅಡಿಪಾಯಗಳನ್ನು ಕಿತ್ತು ಹಾಕಿಸಿದ್ದಾರೆ ಇವರು. ಅವರಿಗೆ ತೊಂದರೆ ಕೊಡಬೇಕು ಎಂತಲ್ಲ. ಸಿಮೆಂಟ್, ಮರಳು ಮತ್ತು ಜಲ್ಲಿಯಿಂದ ಹಾಕಬೇಕಾದ್ದಂತಹ ಅಡಿಪಾಯವನ್ನು ಕೇವಲ ಮರಳು ಕಲ್ಲುನಿಂದ ಹಾಕಿದ್ದ. ಅಂಥ 40 ಮನೆಗಳ ಅಡಿಪಾಯವನ್ನು ಕಿತ್ತು ಬಿಸಾಕಿಸಿದ್ದೇನೆ. ನಮ್ಮ ಮಾನ್ಯ ಲಕ್ಷ್ಮೀಸಾಗರ್ ಅವರು ಮಂತ್ರಿಗಳು. ಅಧ್ಯಕ್ಷನಾಗಿ ಅವರ ಹುಚ್ಚುತನದ ಬಗ್ಗೆ ತಿಕ್ಕಲುತನದ ಬಗ್ಗೆ ನನಗೂ ಬೇಸರ ಆಗುತ್ತಿತ್ತು. ಆದರೆ ಮನೆಗಳನ್ನು ಹಂಚುವಂತಹ ವಿಷಯದಲ್ಲಿ ಇದ್ದಂತಹ ಅನುಮಾನವನ್ನು ತೊಲಗಿಸಬೇಕು, ಇದ್ದಂತಹ ಒಂದು ಯಾವುದೇ ಕೆಟ್ಟ ಪ್ರವೃತ್ತಿಯನ್ನು ತಪ್ಪಿಸಬೇಕು ಎನ್ನುವ ಉದ್ದೇಶದಿಂದ ಲಾಟರಿ ಮೂಲಕ ಮನೆಗಳನ್ನು ಹಂಚುವಂತಹ ಸುವ್ಯವಸ್ಥೆಯನ್ನು ತಂದಂತಹ ಕೀರ್ತಿ ನನಗೂ ಹಾಗೂ ಲಕ್ಷ್ಮೀಸಾಗರ್ ಅವರಿಗೂ ಸೇರಬೇಕು. ಸ್ವಜನಪಕ್ಷಪಾತ ಮಾಡಲಿಕ್ಕೆ ಅವಕಾಶಾನೆ ಕೊಡಲಿಲ್ಲ ನಾವು. We used to allot the houses by drawing lottery. ಆದ್ದರಿಂದ ಯಾರನ್ನಾದರೂ ಸಾರ್ವಜನಿಕವಾಗಿ ದೂಷಣೆ ಮಾಡುವಂತಹ ಸಂದರ್ಭದಲ್ಲಿ ಭ್ರಷ್ಟತನದಿಂದ ಹೊರತಾಗಿ ಬದುಕಬೇಕು ಎನ್ನುವಂತಹವನು ನಾನು. ಯಾರಿಂದಲೂ ಸರ್ಟಿಫಿಕೇಟ್ ತೆಗೆದುಕೊಳ್ಳಬೇಕು ಎಂದಲ್ಲ. ಅದು ಸ್ವಯಂಕೃತವಾದ ನಿರ್ಧಾರ. ಇದನ್ನು ಅರಿವಿಲ್ಲದೇ ಏನಾದರೂ ಮಾತನಾಡಿದಾಗ ಹರಿಶ್ಚಂದ್ರನ ಹಾಗೆ ಬದುಕದೇ ಇದ್ದರೂ ಕೂಡ ಭ್ರಷ್ಟತನದಿಂದ ಹೊರತಾಗಿ ಬದುಕಬೇಕೆಂದು ಪ್ರಯತ್ನ ಮಾಡಿದವರಿಗೆ ನೋವು ಆಗುತ್ತದೆ ಎನ್ನುವುದನ್ನು ನನ್ನ ಸ್ನೇಹಿತರು ಅರಿತುಕೊಳ್ಳಬೇಕು. ಅವರು ಹೇಳಿದರು, ನಿಮ್ಮ ಕಾಲದಲ್ಲಿ ಆಗಲಿಲ್ಲವೇ? ನಾನು ಒಂದೇ ಪ್ರಶ್ನೆಯನ್ನು ಸನ್ಮಾನ್ಯ ಮಂತ್ರಿಗಳಿಗೆ ಕೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಅದರ ಅಧ್ಯಕ್ಷನಾಗಿದ್ದಾಗ ಒಂದೇ ಒಂದು ರೂಪಾಯಿ ಸಂಬಳ ತೆಗೆದುಕೊಂಡಿಲ್ಲ. ಅಷ್ಟೇ ಅಲ್ಲ ಸಾರಿಗೆ ಭತ್ಯ ಒಂದೇ ಒಂದು ರೂಪಾಯಿ ತೆಗೆದುಕೊಂಡಿಲ್ಲ. ಆ ಸಂಸ್ಥೆಗೆ ರಾಜೀನಾಮೆಯನ್ನು ಕೊಟ್ಟು ಬರುವ ದಿವಸ ಅಕೌಂಟ್ಸ್ ಆಫೀಸರ್‌ರವರನ್ನು ಕರೆದು ಕೇಳಿದೆ, ನೋಡಿ ನಾನು ಎಷ್ಟು ದುಡ್ಡನ್ನು ತೆಗೆದುಕೊಂಡಿದ್ದೇನೆ ಎಂದು ಕೇಳಿದೆ. ನನಗೆ ತಿಳಿದಮಟ್ಟಿಗೆ 660 ರೂಪಾಯಿಗಳನ್ನು ಎರಡು ವರ್ಷದ ಅವಧಿಯಲ್ಲಿ ಅಧ್ಯಕ್ಷನಾಗಿ ತೆಗೆದುಕೊಂಡಿದ್ದೇನೆ. ಅದು ಯಾವುದು ಎಂದು ನನಗೆ ಗೊತ್ತಾಗಿರಲಿಲ್ಲ. ಸಿಟಿಂಗ್ ಛಾರ್ಜ್ ಅಂತ 50 ರೂಪಾಯಿ ಆಗ ಕೊಡುತ್ತಿದ್ದರು. ಅದನ್ನು ಬಿಟ್ಟು ಯಾವುದೇ ಒಂದು ಅಧಿಕವಾದಂತಹ, ಅನುಕೂಲವನ್ನು ಅದರಿಂದ ನಾನು ಪಡೆದುಕೊಂಡಿಲ್ಲ. ನೀವು ಮಾಡಲಿಲ್ಲವೇ ಅಂತ ಹೇಳುತ್ತೀರಿ, ನಾನು ಸಾವಿರಾರು ಮನೆಗಳನ್ನು ಹಂಚಿದ್ದೇನೆ. ನಿವೇಶನಗಳನ್ನು ಹಂಚಿದ್ದೇನೆ. ಆದರೆ ಗೃಹಮಂಡಲಿಯಿಂದ ಹೊರಗೆ ಬರುವಾಗ ಒಂದೇ ಒಂದು ಮನೆಯಾಗಲಿ, ಒಂದು ನಿವೇಶನವಾಗಲಿ, ಬೆಂಗಳೂರಿನಲ್ಲಾಗಲಿ, ಅಥವಾ ಇಡೀ ರಾಜ್ಯದಲ್ಲಾಗಲಿ ಪಡೆದುಕೊಳ್ಳದೇ ಹೊರಗಡೆ ಬಂದಿದ್ದೇನೆ. ಇವರು ವಿಚಾರಣೆಯನ್ನು ಮಾಡಬೇಕು, ವಿಚಾರಣೆ ಮಾಡಬೇಕು ಎಂದು ಹೇಳುತ್ತಾರೆ. ವಿಚಾರಣೆಯನ್ನು ಮಾಡಿ, ಇವರ ಕಾಲದಲ್ಲಿ ಇವರು ಎಷ್ಟು ಹಣವನ್ನು ಡ್ರಾ ಮಾಡಿದ್ದಾರೆ. ನನ್ನ ಕಾಲದಲ್ಲಿ ನಾನು ಎಷ್ಟು ಡ್ರಾ ಮಾಡಿದ್ದೇನೆ ಎನ್ನುವುದು ಗೊತ್ತಾಗುತ್ತದೆ. ಇಂದಿರಾನಗರ ಮನೆಯ ಬಗ್ಗೆ ನನ್ನ ಸ್ನೇಹಿತರುಗಳು ಪ್ರಸ್ತಾಪ ಮಾಡುತ್ತಾರೆ.

ಹೆಸರುಗಳನ್ನು ಹೇಳಬೇಕು, ಅವರು ಏತಕ್ಕೆ ಹೇಳುವುದಿಲ್ಲ, ಏಕೆ ಹೇಳುವುದಿಲ್ಲ ಎಂದು ನಾನು ಹೇಳುತ್ತೇನೆ. ಇವರುಗಳದ್ದು 58 ಹುಳುಕುಗಳು ಇವೆ, ತಿರುಗಿ ಹೇಳುತ್ತಾರೆ. ಇಂದಿರಾನಗರದಲ್ಲಿ ಇಂತಹ ಮನೆಯನ್ನು ನಾನು ಅಧ್ಯಕ್ಷನಾಗುವುದಕ್ಕಿಂತ ಮೊದಲು ಅಲ್ಲಿದ್ದಂಥ ನೌಕರರುಗಳು ನಾನ್‌ಅಫಿಶೀಯಲ್ ಮೆಂಬರ್‌ಗಳು ಮೇಜವಾನಿಗೆ ಉಪಯೋಗಿಸುತ್ತಿದ್ದರು. ನಾನು ಅಲ್ಲಿದ್ದಂಥ ಕುರ್ಚಿ, ಬೆಂಚು, ಹಾಸಿಗೆ, ಮಂಚವನ್ನು ಎಲ್ಲವನ್ನು ತೆಗೆದು ಬಿಸಾಕಿ ಆ ಮನೆಯನ್ನು ಬಾಡಿಗೆ ಕೊಟ್ಟೆ. ಅದಾದಮೇಲೆ ಏನಾಯಿತು ಎಂದು ನನಗೆ ಗೊತ್ತಿಲ್ಲ. ನಾನಂತೂ ಅಲಾಟೂ ಮಾಡಿಲ್ಲ. ನಮ್ಮ ಮಾನ್ಯ ಸ್ನೇಹಿತರು ಹೇಳಿದಹಾಗೆ ಲಕ್ಷಾಂತರ ರೂಪಾಯಿಗಳ ಅವ್ಯವಹಾರದ ಬಗ್ಗೆಯೂ ನನಗೆ ಗೊತ್ತಿಲ್ಲ. ನನ್ನ ಸಮಾಧಾನಕ್ಕಾದರೂ ಮುಂದೆ ಏನಾಯಿತು ಎಂದು ತಿಳಿಸಿ. ನನಗೆ ತಿಳಿದಮಟ್ಟಿಗೆ ಅದರಲ್ಲಿ ಅವ್ಯವಹಾರವೋ ಅನ್ಯಾಯವೋ ಆಗಿದೆ ಎಂದು ನನಗಂತೂ ಭಾವಿಸುವುದಿಲ್ಲ. ಏಕೆಂದರೆ ಕಾನೂನು ಪ್ರಕಾರ ಅಲಾಟ್ ಮಾಡಿರುತ್ತಾರೆ. ಇದು ಇಂದಿರಾನಗರದ ಮನೆಯ ಕಥೆ. ಅದಕ್ಕೆ ಯಾರ್ಯಾರು ಯಾವ್ಯಾವ ರೂಪದ ವ್ಯಾಖ್ಯಾನ ಬೇಕಾದರೂ ಕೊಟ್ಟುಕೊಳ್ಳಬಹುದು. ಯಾವ ಕಾಲದಲ್ಲಿ ಆಗಿದೆ ಎನ್ನುವಂಥದ್ದನ್ನು ತಿಳಿಸಿದರೆ ನಾನು ಅವರಿಗೆ ಋಣಿಯಾಗಿರುತ್ತೇನೆ.

ಶ್ರೀ ಸಿ. ಬೈರೇಗೌಡ:- ಕಾನೂನಿಂದ ಆಗಿದೆಯೆಂದು ದಿಢೀರನೆ ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ಅದನ್ನು ಅಲಾಟ್ ಮಾಡಬೇಕಾದರೆ ನೋಟಿಫೈ ಮಾಡಬೇಕಾಗುತ್ತದೆ. ನೋಟಿಫೈ ಮಾಡಿ ಅಪ್ಲಿಕೇಷನ್ ಕರೆಯಬೇಕಾಗುತ್ತದೆ. ಕರೆದ ಮೇಲೆ ಯಾರು ಅರ್ಹರು, ಯಾರು ಅನರ್ಹರು ಎಂಬುದನ್ನು ತೀರ್ಮಾನವಾಗಬೇಕಾಗುತ್ತದೆ. ಅದೆಲ್ಲಾ ಆಗಿ ಮಾಡಿದ್ದರೆ ನೀವು ಹೇಳಿದ ಅರ್ಥ ಬರುತ್ತದೆ. ಏನೂ ಇಲ್ಲದೆ ಸುಮ್ಮನೆ 25 ಲಕ್ಷ ರೂಪಾಯಿಗೆ ಬಾಳತಕ್ಕ ಮನೆಯನ್ನು ಕೇವಲ 1-2-3 ಲಕ್ಷಕ್ಕೆ ಕೊಟ್ಟುಬಿಡುತ್ತೇವೆಂದರೆ ಅದು ಅವ್ಯವಹಾರದ ಪರಮಾವಧಿ ಎನ್ನದೆ, ಬೇರೆ ಏನಾದರೂ ಅದಕ್ಕೆ ಪದ ಇದ್ದರೆ ತಾವು ಹೇಳಿ?

ಶ್ರೀ ವೈ.ಕೆ. ರಾಮಯ್ಯ:- ನಾನು ಇದರ ಬಗ್ಗೆ ಆಗಲೇ ಹೇಳಿದ್ದೇನೆ. ಅದನ್ನು ಕ್ಲಬ್ಬಾಗಿ ಗೆಸ್ಟ್ ಹೌಸ್ ಆಗಿ ಉಪಯೋಗಿಸುತ್ತಿದ್ದುದರಿಂದ ಖಾಲಿ ಮಾಡಿಸಿ ಬಾಡಿಗೆ ಕೊಡುವವರೆಗೆ ನನಗೆ ಗೊತ್ತಿತ್ತು. ಆದರೆ ಮುಂದಕ್ಕೆ ಏನಾಗಿದೆ ಎನ್ನುವುದನ್ನು ರೆಕಾರ್ಡ್ ಇದ್ದರೆ ಮಂತ್ರಿಗಳು ತೆಗೆದು ನೋಡುತ್ತಾರೆ. ಸದಸ್ಯರಿಗೆ ಅದಕ್ಕೆ ಉತ್ತರ ಕೊಟ್ಟುಕೊಳ್ಳಬಹುದು. ನಾನು ಅದನ್ನು ಏತಕ್ಕೆ ಹೇಳಿದೆ ಎಂದರೆ ಅಲಾಟ್ ಆಗಿರಬಹುದು ಎನ್ನುವ ಭಾವನೆಯಿಂದ ನಾನು ಹೇಳಿದೆ. ಅದಾದಮೇಲೆ ನನ್ನ ಮಿತ್ರರು ಇನ್ನೊಂದು ವಿಷಯವನ್ನು ಪ್ರಸ್ತಾಪ ಮಾಡಿದರು. ವಿಚಾರಣೆ ನಡೆಯಲಿ, ನಾವು ಇದನ್ನೇ ಕೇಳುತ್ತಿರುವುದು, ಬೆಳಿಗ್ಗೆಯಿಂದ ನಾವು ಅದರ ಬಗ್ಗೆ ಒತ್ತಾಯ ಮಾಡುತ್ತಿದ್ದೇವೆ. ಎಲ್ಲಿಂದಾದರೂ ಮಾಡಲಿ, ನನ್ನ ಕಾಲದಿಂದ ಮಾಡುತ್ತಾರೆಯೇ, ಮಾನ್ಯ ತಿಮ್ಮೇಗೌಡರ ಕಾಲದಿಂದ ಮಾಡುತ್ತಾರೆಯೇ, ಮಾನ್ಯ ಗುಂಡೂರಾಯರ ಕಾಲದಿಂದ ಮಾಡುತ್ತಾರೆಯೇ, ಮಾನ್ಯ ರಾಮಕೃಷ್ಣ ಹೆಗಡೆಯ ಕಾಲದಿಂದ ಮಾಡುತ್ತಾರೆಯೇ, ಯಾವ ಕಾಲದಿಂದಲಾದರೂ ಮಾಡಲಿ, ಯಾರ ಕಾಲದ ಎಲ್ಲಾ ಭ್ರಷ್ಟತೆಗಳಿಗೂ ಇರುವಂಥದ್ದು ಒಂದೇ ಒಂದು ಮುಖ. ಭ್ರಷ್ಟತೆಗೆ ಬೇರೆಬೇರೆ ಜಾತಿ ಇಲ್ಲ. ಭ್ರಷ್ಟತೆಗೆ ಪಕ್ಷ ಇಲ್ಲ, ಭ್ರಷ್ಟತೆಗೆ ವಯಸ್ಸು ಇಲ್ಲ, ಭ್ರಷ್ಟತೆಗೆ ಬಣ್ಣ ಇಲ್ಲ, ಭ್ರಷ್ಟತೆ ಒಂದೇ ಒಂದು ಜಾತಿಯದು. ಆ ಜಾತಿ ಅಥವಾ ಆ ಬಣ್ಣ, ಆ ಅಕೃತ್ಯವೆಂದು ಯಾವುದು ಹೇಳುತ್ತೇವೊ ಯಾರ್ಯಾರ ಕಾಲದಲ್ಲಿ ಎಷ್ಟೆಷ್ಟು ನಡೆದಿದೆ ಎನ್ನುವುದನ್ನು ಹೊರಗೆ ಹಾಕಲಿಕ್ಕೆ ನೀವು ಯಾವುದಾದರೂ ತನಿಖೆಯನ್ನು ಮಾಡಿ ನಿರ್ಧಾರ ಮಾಡುವುದಾದರೆ ನಾವು ಸಂಪೂರ್ಣವಾಗಿ ಅದಕ್ಕೆ ಒಪ್ಪಿಗೆ ಕೊಡುತ್ತೇವೆ. ಕೊನೆಯದಾಗಿ ತಮ್ಮ ಮುಖಾಂತರ ನನ್ನ ಸ್ನೇಹಿತರಿಗೆ ಹೇಳುವುದೇನೆಂದರೆ ಯಾರಾದರೂ ಸದಸ್ಯರು ಮಾತನಾಡುವಾಗ ನಮ್ಮ ಸ್ನೇಹಿತರು ಮೊನ್ನೆ ಕೂಡ ಪ್ರಸ್ತಾಪ ಮಾಡಿದರು. ಯಾರೋ ಮಾತನಾಡುವಾಗ ಅಡ್ಡ ಮಾತನಾಡಿ ನಮ್ಮ ಮನಸ್ಸು ನೋಯಿಸುವಂಥ ಪ್ರವೃತ್ತಿಯನ್ನು ನನ್ನ ಸ್ನೇಹಿತರು ಮಾಡಿದರು. ನಾನಂತೂ ಮಾಡುವುದಿಲ್ಲ.

ನಾನು ಸುಮ್ಮನೆ ಕುಳಿತುಕೊಂಡು ಯಾರು ಏನು ಹೇಳಿದರೂ ಕೇಳುತ್ತಿರುತ್ತೇನೆ. ನೀವು ಮಾಡುವುದಿಲ್ಲವೇ ನಿಮ್ಮ ಕಾಲದಲ್ಲಿ ಆಗುವುದಿಲ್ಲವೇ ಏನು ಆಗಿದೆ ಎನ್ನುವುದಾದರೂ ಹೇಳಬೇಕು. ಹಾಗೆ ಹೇಳುವಂಥ ಧೈರ್ಯ ಮತ್ತು ಶಕ್ತಿ ಅವರಿಗೆ ಬರಲಿ. ಆ ರೀತಿ ಹೇಳದೆ ಇದ್ದ ಮೇಲೆ, ಜನರಲೈಜೇಷನ್ ಮಾಡಿ ಸಾರ್ವತ್ರಿಕವಾಗಿ ಆಡುವ ಮಾತನ್ನು ನಿಲ್ಲಿಸಲೆಂದು ಪ್ರಾರ್ಥಿಸಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

MADAM DEPUTY SPEAKER:- Mr. Shafi Ahmad, you please complete within 5 to 10 minutes.

† ಶ್ರೀ ಶಫಿ ಅಹಮದ್ (ತುಮಕೂರು):- ಮಾನ್ಯ ಉಪಾಧ್ಯಕ್ಷಿಣಿಯವರೆ, ಸರ್ಕಾರದವರು 'ಆಶ್ರಯ' ಯೋಜನೆ ಬಗ್ಗೆ ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೋ ಇದು ನಿಜವಾಗಿಯೂ ಬಹಳ ಒಳ್ಳೆಯ ಕಾರ್ಯಕ್ರಮವಾಗಿದೆ. ದಿವಂಗತ ಶ್ರೀಮಾನ್ ದೇವರಾಜ ಅರಸ್‌ರವರು ಮಾಡಿದಂಥ ಈ ಕಾರ್ಯಕ್ರಮವನ್ನು ಹಿಂದಿದ್ದ ಸರ್ಕಾರದವರು ಮುಂದುವರೆಸಿಕೊಂಡು ಬಂದರು. ತುಮಕೂರು ಜಿಲ್ಲೆಯ ವಿಚಾರದಲ್ಲಿ ಈಗ ತಾನೇ ಮಾನ್ಯ ಸದಸ್ಯರಾದ ರಾಮಯ್ಯನವರು ಹೇಳಿದ್ದಾರೆ. ಆದರೆ, ತುಮಕೂರು ನನ್ನ ಕ್ಷೇತ್ರವಾಗಿದ್ದು, ಅಲ್ಲಿಗೆ ಮೊನ್ನೆ ದಿವಸ ಮಾನ್ಯ ಸಚಿವರು ಬಂದಿದ್ದರು. ಆಶ್ರಯ ಯೋಜನೆಯಡಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಈಗಾಗಲೇ ಸುಮಾರು 6,000 ನಿವೇಶನಗಳನ್ನು ಮತ್ತು ನಗರ ಪ್ರದೇಶಗಳಲ್ಲಿ ಸುಮಾರು 3,000 ನಿವೇಶನದ ಹಕ್ಕುಪತ್ರಗಳನ್ನು ಕೊಡಲಾಗಿದೆ. ಅದೇ ರೀತಿ ಇವೊತ್ತು 650 ಮನೆಗಳ ನಿರ್ಮಾಣ ಕೆಲಸ ನಡೆಯುತ್ತಿದೆ. ಆದರೆ, ಈ ಕೆಲಸ ಕುಂಠಿತವಾಗಿದೆ. ಸರ್ಕಾರ ಇದರ ಬಗ್ಗೆ ಒಂದು ನಿಕಟವಾದ ಧೋರಣೆಯನ್ನು ತೆಗೆದುಕೊಂಡು ಸದರಿ ಕಾರ್ಯಕ್ರಮವನ್ನು ಮುಂದುವರಿಸಿಕೊಂಡು ಬರಬೇಕಾಗಿದೆ. ಕರ್ನಾಟಕ ಸರ್ಕಾರದ ಆಶ್ರಯ ಯೋಜನೆಯಡಿಯಲ್ಲಿ ನಿವೇಶನ ಕೋರಿ ಸಾವಿರಾರು ಅರ್ಜಿಗಳು ಬಂದಿವೆ. ಆಶ್ರಯ ಯೋಜನೆಯ ಟಾಸ್ಕ್‌ಫೋರ್ಸ್ ಕಮಿಟಿಯ ಅಧ್ಯಕ್ಷರಾಗಿ ನಾವು ನನ್ನ ಕ್ಷೇತ್ರದಲ್ಲಿ ಈ ಕಾರ್ಯವನ್ನು ಸರಿಯಾದಂಥ ರೀತಿಯಲ್ಲಿ ನಡೆಸಿಕೊಂಡು ಹೋಗುತ್ತಿದ್ದೇವೆ. ನನ್ನ ಕ್ಷೇತ್ರದಿಂದ ನಿವೇಶನ ಕೋರಿ 30,000 ಅರ್ಜಿಗಳು ಬಂದಿವೆ. ಆದರೆ, ಸರ್ಕಾರದವರು 25,000 ರೂಪಾಯಿಗಳಿಗೆ ಜಮೀನು ಕೊಡುವ ಬಗ್ಗೆ ಒಂದು ಆದೇಶ ಹೊರಡಿಸಿದ್ದಾರೆ. 25,000 ರೂಪಾಯಿಗಳಿಂದ ಜಮೀನು ಕೊಂಡುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಇಡೀ ಜಿಲ್ಲೆಯಲ್ಲಿ ಎಲ್ಲಿಯೂ ಅಂಗೈಯಗಲದಷ್ಟು ಸರ್ಕಾರಿ ಜಮೀನು ಇಲ್ಲ. ಬಡವರಿಗೆ ಈ ಆಶ್ರಯ ಯೋಜನೆ ನಿಜವಾಗಿಯೂ ಒಳ್ಳೆಯ ಕಾರ್ಯಕ್ರಮವಾಗಿದೆ. ಇದರ ಬಗ್ಗೆ ಸರ್ಕಾರದವರು ಬಹಳ ಹಿಂದೆ ಒಂದು ಪಾಲಿಸಿಯನ್ನು ಮಾಡಿದ್ದರು, ಏನೆಂದರೆ, ಸಬ್ ರಿಜಿಸ್ಟ್ರಾರ್ ಲ್ಯಾಂಡ್ ಕಾಸ್ಟ್ ವ್ಯಾಲ್ಯೂ ಬಗ್ಗೆ ಶೇಕಡ 30% ಎನಾನ್ಸ್‌ಮೆಂಟ್ ಕೊಟ್ಟು, ಜಮೀನು ಖರೀದಿ ಮಾಡುವುದನ್ನು ಮುಂದುವರಿಸಿಕೊಂಡು ಬರಬೇಕೆಂದು ಹೇಳಿದ್ದರು. ಆದರೆ, ಇವೊತ್ತಿನ ದಿವಸ ನಗರ ಪ್ರದೇಶದಲ್ಲಿ ಎಲ್ಲಿಯೂ ಒಂದು ಲಕ್ಷ ರೂಪಾಯಿಗಳಿಗಿಂತ ಕಡಿಮೆ ಬೆಲೆಗೆ ಜಮೀನು ಸಿಕ್ಕುವುದಿಲ್ಲ. ಆದುದರಿಂದ, ನಗರ ಪ್ರದೇಶಗಳಲ್ಲಿ ಸಬ್ ರಿಜಿಸ್ಟ್ರಾರ್ ಲ್ಯಾಂಡ್ ಕಾಸ್ಟ್ ವ್ಯಾಲ್ಯೂ ಅನ್ನು 40 ಪರ್ಸೆಂಟ್ ಮಾಡಿ ಮತ್ತು ಗ್ರಾಮಾಂತರ ಪ್ರದೇಶದಲ್ಲಿ 40,000 ರೂಪಾಯಿಗಳಿಗೆ ಆಶ್ರಯ ಯೋಜನೆಯಡಿಯಲ್ಲಿ ಜಮೀನು ಖರೀದಿ ಮಾಡುವುದಕ್ಕೆ ನಿರ್ದೇಶನ ಕೊಟ್ಟು ಬಡವರಿಗೆ ಹಾಗೂ ನಿರ್ಗತಿಕರಿಗೆ ಅನುಕೂಲ ಮಾಡಿಕೊಟ್ಟರೆ ಒಳ್ಳೆಯದು. ಅಲ್ಲದೆ, ಇವೊತ್ತು ಪ್ರೀ ಫ್ಯಾಬ್ರಿಕೇಟೆಡ್ ಎಂದು ಏನು ಒಂದು ಟೆಕ್ನಾಲಜಿಯನ್ನು ಅಡಾಪ್ಟ್ ಮಾಡಿದ್ದಾರೆ, ಅದನ್ನು ಅಳವಡಿಸಿಕೊಂಡು ತುಮಕೂರು ಜಿಲ್ಲೆಯಲ್ಲಿ ಸಾಕಷ್ಟು ಕಡೆ ವರ್ಕ್‌ಶಾಪ್‌ಗಳನ್ನು ಸ್ಥಾಪಿಸಿ ಕೆಲಸವನ್ನು ಶುರು ಮಾಡಿದ್ದಾರೆ. ಅದನ್ನು ಸನ್ಮಾನ್ಯ ಸಚಿವರೂ ಸಹ ನೋಡಿಕೊಂಡು ಬಂದಿದ್ದಾರೆ. ಆದುದರಿಂದ, ಎಲ್ಲೆಲ್ಲಿ ಒಳ್ಳೆಯ ಕಾರ್ಯಕ್ರಮಗಳನ್ನು ಮಾಡುತ್ತಿದ್ದಾರೆ, ಅದನ್ನು ಹಾಗೆ ಮುಂದುವರೆಸಿಕೊಂಡು ಬಂದರೆ ನಿಜವಾಗಿಯೂ ಬಡಜನರಿಗೆ ಅನುಕೂಲವಾಗುತ್ತದೆ. ಈ ಪಾಲಿಸಿಯನ್ನು ಸರ್ಕಾರ ಹಾಗೆ ಮುಂದುವರಿಸಿಕೊಂಡು ಹೋಗಲೆಂದು ಕೋರುತ್ತಾ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ):- ಮಾನ್ಯ ಉಪಾಧ್ಯಕ್ಷಿಣಿಯವರೆ, ನಾವೆಲ್ಲರೂ ಕೂಡ ಜನರಿಗೆ ಏನು ಆಶ್ವಾಸನೆ ಕೊಟ್ಟಿದ್ದೇವೆ, ಸರ್ಕಾರ ಎಂದರೆ 3 ವರ್ಷವಿದ್ದ ಸರ್ಕಾರ ಕೂಡ ಮನೆಗಳನ್ನು ಕಟ್ಟಿಸಿಕೊಡುವಂಥ ವ್ಯವಸ್ಥೆ ಬಗ್ಗೆ ಅನೇಕ ಬಾರಿ ಅನೇಕ ಘೋಷಣೆಗಳನ್ನು ಮತ್ತು ಪತ್ರಿಕಾ ಹೇಳಿಕೆಗಳನ್ನು ಕೊಟ್ಟಿರುವುದನ್ನು ನಾವು ನೋಡಿದ್ದೇವೆ. ನಾಲ್ಕನೆಯ ವರ್ಷಕ್ಕೆ ನಾವೆಲ್ಲರೂ ಕಾಲಿಡುತ್ತಿದ್ದೇವೆ. ಮಾನ್ಯ ವೀರೇಂದ್ರ ಪಾಟೀಲ್‌ರವರ ಸರ್ಕಾರ ಇದ್ದಾಗ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರಾಗಿ ದಿವಂಗತ ಶ್ರೀ ಬಸವಲಿಂಗಪ್ಪನವರು ಇದ್ದರು. ಆಗ ಅವರು ನಾವು 1 ಲಕ್ಷ 75 ಸಾವಿರ ಮನೆಗಳನ್ನು ಕಟ್ಟುತ್ತೇನೆ ಎಂದು ಹೇಳಿದರು. ಬಳಿಕ 2 ಲಕ್ಷ 60 ಸಾವಿರ ಮನೆಗಳನ್ನು ಕಟ್ಟುತ್ತೇವೆ ಎಂದು ಹೇಳಿ ನಂತರ 3 ಲಕ್ಷ ಚಿಲ್ಲರೆ ಮನೆಗಳನ್ನು ಕಟ್ಟುತ್ತೇವೆಂದು ಹೇಳಿಕೆ ಕೊಟ್ಟರು. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಈಗಾಗಲೇ ಮೂರು ವರ್ಷ ಕಳೆದು ನಾಲ್ಕನೆಯ ವರ್ಷಕ್ಕೆ ಕಾಲಿಟ್ಟರೂ ಕೂಡ ಒಬ್ಬ ಬಡವನಿಗೂ ಮನೆ ಕಟ್ಟಿಕೊಡತಕ್ಕಂಥ ಕೆಲಸ ನಮ್ಮಿಂದಾಗಲಿಲ್ಲ. ಇದಕ್ಕೆ ಕಾರಣವೇನು? ಎರಡನೆಯದಾಗಿ, ಈಗಾಗಲೇ ಮಾನ್ಯ ಕಾಗೋಡು ತಿಮ್ಮಪ್ಪನವರು ''ನಿಮ್ಮ ಪಕ್ಷ ಬಹಳ ಪಾಪ ಮಾಡಿದೆ, ಅನೇಕ ಅವ್ಯವಹಾರಗಳನ್ನು ಮಾಡಿದೆ'' ಎಂದು ಹೇಳಿದರು. ನಾವು ಇದನ್ನು ಒಂದು ರೀತಿ ಒಪ್ಪುತ್ತೇವೆ. ನಾವು ಪಾಪ ಮಾಡಿದ್ದಕ್ಕೆ ಜನರ ತೀರ್ಮಾನದಂತೆ ನಾವು ಈ ಕಡೆ ಕುಳಿತಿದ್ದೇವೆ. ಪ್ರತಿವರ್ಷ 1000 ಮನೆಗಳನ್ನು ಕಟ್ಟುತ್ತೇವೆಂದು ಬರೀ ಪೊಳ್ಳು ಘೋಷಣೆಗಳನ್ನು ಆಶ್ವಾಸನೆಗಳನ್ನು ಕೊಟ್ಟಿರುವುದರಿಂದ. ಇದು ಬಡವನ ಮೇಲೆ ಬಹಳ ದುಷ್ಪರಿಣಾಮವಾಗತಕ್ಕಂಥ ಸಂದರ್ಭ ಕೂಡ ಆಗಿದೆ. ಆದುದರಿಂದ, ಈ ರೀತಿ ಮಾಡುವಂಥ ಕೆಲಸವಾಗಬಾರದು. ಪ್ರತಿ ವಿಧಾನಸಭಾ ಕ್ಷೇತ್ರದಲ್ಲೂ 1,000 ಮನೆಗಳನ್ನು ಕಟ್ಟಲಾಗುವುದೆಂದು ಹಿಂದಿನ ಸರ್ಕಾರ ಹೇಳಿತ್ತು, ಹೊಸ ಸರ್ಕಾರ ಬಂದಿದ್ದು ಈಗ 500 ಮನೆಗಳಿಗೆ ಇಳಿದಿದೆ. ಇದರ ಬಗ್ಗೆ ನಮ್ಮೆಲ್ಲರ ಮೇಲೆ ಸಾಕಷ್ಟು ಒತ್ತಡ ಬರುತ್ತಿದೆ. ಈಗಾಗಲೇ 1000 ಮನೆಗಳನ್ನು ಕಟ್ಟಿಕೊಡುತ್ತೇವೆಂದು ಹೇಳಿರತಕ್ಕಂಥವರು ಈಗ 500 ಮನೆಗಳನ್ನು ಕಟ್ಟಿಕೊಡುತ್ತೇವೆಂದು ಹೇಳುತ್ತಿದ್ದೀರಲ್ಲಾ, ಮುಂದೆ ಏನು ಮಾಡುತ್ತಾರೋ ಏನೋ ಎಂಬ ಪ್ರಶ್ನೆಯನ್ನು ಜನರು ನಮಗೆ ಕೇಳುತ್ತಿದ್ದಾರೆ. ಈ ಯೋಜನೆಯಲ್ಲಿ ಸಮಿತಿಗಳನ್ನು ಮಾಡಿದ್ದು, ಸಮಿತಿಗೆ ನನ್ನ ತಾಲ್ಲೂಕಿನಲ್ಲಿರುವ ನಾಲ್ಕು ಅಧಿಕಾರೇತರ ಸದಸ್ಯರುಗಳನ್ನು ನೇಮಕ ಮಾಡಿದ್ದಾರೆ. ಅವರು ಕಾಂಗ್ರೆಸ್ ಪಕ್ಷಕ್ಕೆ ಸಂಬಂಧಪಟ್ಟ ಸದಸ್ಯರು. ಇವರ ಬಗ್ಗೆ ಬಂಗಾರಪೇಟೆ ತಾಲ್ಲೂಕಿನ ಒಂದು ಮಾಹಿತಿಯನ್ನು ತರಿಸಿಕೊಂಡರೆ ಒಳ್ಳೆಯದು. ಅಧ್ಯಕ್ಷನಾಗಿ ನನ್ನ ಗಮನಕ್ಕೆ ಬಾರದೆ ಸುಮಾರು 1200 ನಿವೇಶನಗಳನ್ನು ಕೊಡತಕ್ಕಂಥ ಕೆಲಸ ಮಾಡಿದ್ದಾರೆ. ಇಬ್ಬರು ಮಾನ್ಯ ಮಂತ್ರಿಗಳು ಕೂಡ ನನ್ನ ತಾಲ್ಲೂಕಿಗೆ ಬಂದಿದ್ದರು. ತಹಶೀಲ್ದಾರ್ ಮತ್ತು ಮೆಂಬರ್ ಇಬ್ಬರೂ ಒಂದಾಗಿ ಸೇರಿಕೊಂಡು ಈ ರೀತಿ ಮಾಡಿದ್ದಾರೆ. without my permission, without my sign... ಇದರ ಬಗ್ಗೆ ನಾನು ಬಹಿರಂಗ ಸಭೆಯಲ್ಲಿ ಸವಾಲು ಹಾಕಿದ್ದೇನೆ. ಆಗ ಹಿಂದಿನ ಸರ್ಕಾರದಲ್ಲಿದ್ದ ಇಬ್ಬರು ಮಂತ್ರಿಗಳು, ಒಬ್ಬರು ಲೋಕಸಭಾ ಸದಸ್ಯರು ಹಾಗೂ ಐದು ಜನ ವಿಧಾನ ಪರಿಷತ್ತಿನ ಸದಸ್ಯರುಗಳು ಬಂದಿದ್ದರು. ಆಗ ಆ ಸಭೆಯಲ್ಲಿ ನಾನು ''ಬಂಗಾರಪೇಟೆ ತಾಲ್ಲೂಕಿನ ಬಗ್ಗೆ ತನಿಖೆ ಮಾಡುವುದಕ್ಕೆ ವ್ಯವಸ್ಥೆ ಮಾಡಿ'' ಎಂದು ಹೇಳಿದೆ. ಇದಲ್ಲದೆ, ಮಾರ್ಚಿ ತಿಂಗಳಲ್ಲಿ ಅಸೆಂಬ್ಲಿ ನಡೆಯುವಂಥ ಸಂದರ್ಭದಲ್ಲಿ ಹೋದ ವರ್ಷದ ದಿನಾಂಕವನ್ನು ಹಾಕಿ ಹಕ್ಕು ಪತ್ರಗಳನ್ನು ವಿತರಿಸಿರುವ ನಿದರ್ಶನಗಳಿವೆ. ಬಂಗಾರಪೇಟೆ ತಾಲ್ಲೂಕಿನಲ್ಲಿಯೂ ನಿವೇಶನಗಳನ್ನು ವಿತರಿಸುವಾಗ ಫಲಾನುಭವಿಗಳು ಅರ್ಹರಿದ್ದಾರೋ? ಇಲ್ಲವೇ? ಎಂಬುದನ್ನು ಸಹ ನೋಡದೆ ಕೊಟ್ಟಿರತಕ್ಕಂಥ ಪ್ರಕರಣಗಳಿವೆ. ಇದರ ಬಗ್ಗೆ ತನಿಖೆ ಕೂಡ ಆಗಬೇಕು. ನಾನು ಅನೇಕ ಸಂದರ್ಭದಲ್ಲಿ ಏಕೆ ಮೌನವಾಗಿದ್ದೇನೆಂದರೆ, ಎಲ್ಲಿ ನೋಡಿದರೂ ಕೂಡ ನಮ್ಮ ಪಕ್ಷ ನಾವು ಹೇಳಿದ್ದೇ ವೇದ ವಾಕ್ಯ ಎಂದು ಯಾರು ಬಡವರಿದ್ದಾರೋ ಅವರಿಗೆ ಮನೆಗಳನ್ನು ಕೊಡತಕ್ಕಂಥ ಕೆಲಸವಾಗದೆ, ಯಾರು

ಬಡವರಿಲ್ಲವೋ ಅವರಿಗೆ ಮನೆಗಳನ್ನು ಕೊಡತಕ್ಕಂಥ ಕೆಲಸ ನಡೆಯುತ್ತಿದೆ. ಇದೇ ರೀತಿ ಬಂಗಾರಪೇಟೆಯಲ್ಲಿ 223 ನಿವೇಶನಗಳನ್ನು ಕೊಟ್ಟಿದ್ದಾರೆ. ಹೋದ ವರ್ಷವೂ ಕೂಡ ಆ ರೀತಿ ಕೊಡುವಾಗ ಸಂಬಂಧಪಟ್ಟ ಕಾಗದ ಪತ್ರಗಳಿಗೆ ನಮ್ಮ ಸಹಿಯೂ ಇಲ್ಲದೆ ಬೇನಾಮಿಯಾಗಿ ಕೊಟ್ಟಿದ್ದಾರೆ. ನಾನು ಬಹಿರಂಗವಾಗಿ ಹೇಳುತ್ತಿದ್ದೇನೆ. ಆಗ ನನ್ನ ಪಕ್ಷ ಅಧಿಕಾರದಲ್ಲಿರಲಿಲ್ಲ. ಕಾಂಗ್ರೆಸ್ ಪಕ್ಷದ ನಾಲ್ಕು ಜನ ಏನು ಅಧಿಕಾರೇತರ ಸದಸ್ಯರಿದ್ದಾರೆ, ಅವರ ವಿಚಾರ ಕೂಡ ಸೇರಿದೆ. ಬೇಕಾದರೆ ಇದರ ಬಗ್ಗೆ ಜಿಲ್ಲಾಧಿಕಾರಿಗಳಿಂದ ವರದಿ ತರಿಸಿಕೊಳ್ಳಿ. ಈ ವ್ಯವಸ್ಥೆ ಬಹಳ ಕೆಟ್ಟದಾಗಿದೆ. ಅನಂತರ ಪ್ರಥಮ ಬಾರಿಗೆ ಹಿಂದೂಸ್ತಾನದಲ್ಲಿ ಮೂರೂವರೆ ಲಕ್ಷ ಮನೆಗಳನ್ನು ಕಟ್ಟಿದ್ದೇವೆ. ಇದರ ಬಗ್ಗೆ ನಾವೆಲ್ಲರೂ ಮೆಚ್ಚುಗೆ ತೋರಿಸಬೇಕೆಂದು ಹೇಳಿದ್ದಾರೆ. ಆದರೆ, ನಾಲ್ಕು ವರ್ಷಗಳಾದರೂ ಒಂದು ಮನೆಯನ್ನು ಕಟ್ಟುವುದಕ್ಕೆ ಯೋಗ್ಯತೆ ಇಲ್ಲ. ಇದಕ್ಕೆ ಕಾರಣವೇನು? ಬರೀ ಈ ರಾಜಕೀಯ ವಾತಾವರಣದಲ್ಲಿ ಯಾವೊತ್ತು ಅಸೆಂಬ್ಲಿ ವಿಸರ್ಜನೆಯಾಗುತ್ತದೆ? ಯಾವೊತ್ತು ಪಾರ್ಲಿಮೆಂಟ್ ವಿಸರ್ಜನೆಯಾಗುತ್ತದೆ? ಎನ್ನುವ ಗುಂಗಿನಲ್ಲೇ ಇದ್ದೇವೆ. ಇದರಿಂದ ನಾಳೆ ದಿವಸ ಜನರಿಗೆ ಮುಖ ತೋರಿಸದಿರತಕ್ಕ ಪರಿಸ್ಥಿತಿ ನಮ್ಮದಾಗುತ್ತದೆ. ಅದು ಕಾಂಗ್ರೆಸ್ ಇರಬಹುದು, ಜನತಾ ದಳ ಇರಬಹುದು. ಎರಡೂ ಪಕ್ಷಗಳ ಶಾಸಕರುಗಳಿಗೆ ಇವೊತ್ತು ಜವಾಬ್ದಾರಿ ಇದೆ. ''ಒಂದು ಸಾವಿರ ಮನೆಗಳನ್ನು ಕಟ್ಟುತ್ತೇವೆಂದು ಬರೀ ಸುಳ್ಳು ಹೇಳುತ್ತಿದ್ದೀರಿ'' ಎಂದು ನಮ್ಮನ್ನು ಯಾರೂ ಕೂಡ ನಂಬುವುದಿಲ್ಲ. ಮತ್ತು ಮನೆಗಳನ್ನು ಕಟ್ಟತಕ್ಕಂಥ ವಿಚಾರದಲ್ಲಿಯೂ ಕೂಡ ಒಂದು ಹೊಸ ಟೆಕ್ನಾಲಜಿ, ಐಡಿಯಾಲಜಿ ಇದೆ. ಇವಾವುದೂ ಕೂಡ ನಡೆಯುವುದಿಲ್ಲ. ಆಯಾ ಪ್ರದೇಶದಲ್ಲಿ, ಆಯಾ ವಾತಾವರಣಕ್ಕೆ ತಕ್ಕಂತೆ ಯಾವ ರೀತಿ ಮನೆಗಳನ್ನು ಕಟ್ಟುವುದಕ್ಕೆ ಆಗುತ್ತದೆಯೇ ಅದನ್ನು ಪರಿಶೀಲನೆ ಮಾಡುವಂಥ ಕೆಲಸವಾಗಬೇಕು. ನಮ್ಮ ತಾಲ್ಲೂಕಿನಲ್ಲಿ ಹೊಸದಾಗಿ 10-20 ಮನೆಗಳನ್ನು ಕಟ್ಟಿದ್ದಾರೆ. ಆ ರೀತಿ ಕಟ್ಟಿರುವ ಮನೆಗಳಿಗೆ ಕೇವಲ ಒಂದೂವರೆ ಅಡಿಗಳಷ್ಟು ಮಾತ್ರ ಪಾಯ ಹಾಕಲಾಗಿದೆ. ಅದು ಮರಳಾಗಿರಬಹುದು ಅಥವಾ ಮಣ್ಣಾಗಿರಬಹುದು ಅಥವಾ ಕೆರೆ ಜೇಡಿಯಾಗಿರಬಹುದು. ಆದುದರಿಂದ, ಆಯಾ ವಾತಾವರಣಕ್ಕೆ ಸರಿ ಹೊಂದುವಂಥ ರೀತಿಯಲ್ಲಿ ಮನೆಯನ್ನು ಕಟ್ಟುವಂಥ ಕೆಲಸವಾಗಬೇಕು ಎಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಜೊತೆಗೆ 1000 ಮನೆಗಳನ್ನು ಆಶ್ರಯ ಯೋಜನೆ ಸಮಿತಿಯ ಅಧ್ಯಕ್ಷರಾಗಿ ಅಥವಾ ಸಮಿತಿಯವರು ಏನು ಕೊಟ್ಟಿದ್ದೇವೆ, ಆ 1000 ಮನೆಗಳನ್ನು ಕಟ್ಟುವುದಕ್ಕೆ ಕೂಡ ಸರ್ಕಾರ ಪ್ರಯತ್ನ ಮಾಡಬೇಕಾಗುತ್ತದೆ. ಈಗ ಸರ್ಕಾರದ ಧೋರಣೆ ಏನಿದೆಯೆಂದು ಗೊತ್ತಿಲ್ಲ. ಆದರೂ ಕೂಡ ಮಾರ್ಚಿ ಅಂತ್ಯದೊಳಗೆ 500 ಮನೆಗಳನ್ನು ಕಟ್ಟುತ್ತೇವೆ ಎನ್ನುವ ಶಬ್ದವನ್ನು ಸರ್ಕಾರದವರು ಉಪಯೋಗಿಸಿದ್ದಾರೆ. 500 ಮನೆಗಳನ್ನು ಕಟ್ಟುವುದಕ್ಕೆ ಯಾರನ್ನು ಆಯ್ಕೆ ಮಾಡಬೇಕು? ಯಾರನ್ನು ಬಿಡಬೇಕು? ಎಂಬುದರ ಬಗ್ಗೆ ನಮಗೂ, ಸಮಿತಿಯವರಿಗೂ ಗೊಂದಲವುಂಟಾಗಿದೆ. ಏಕೆಂದರೆ, ಪ್ರತಿ ದಿವಸ ಕೂಡ ನಾವೆಲ್ಲರೂ ಇದರ ಬಗ್ಗೆ ಜನರಿಗೆ ಜವಾಬು ಹೇಳತಕ್ಕಂಥ ಪರಿಸ್ಥಿತಿ ನಿರ್ಮಾಣವಾಗುತ್ತಿರುವುದಕ್ಕೆ ಸರ್ಕಾರದಿಂದ ಸ್ಪಷ್ಟ ಹೇಳಿಕೆ ಬೇಕಾಗಿದೆ ಅಥವಾ ಸರ್ಕಾರ ಏನು ಮಾಡುತ್ತದೆನ್ನುವುದರ ಬಗ್ಗೆ ಮಾನ್ಯ ಸಚಿವರು ಹೇಳುತ್ತಾರೆಂದು ಭಾವಿಸಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಉಪಾಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

3.50 ಪಿ.ಎಂ

† ಶ್ರೀ ಗೋಪಿನಾಥ ಆರ್. ಸಾಂಡ್ರಾ (ವಸತಿ ಖಾತೆ ಮಂತ್ರಿಗಳು):- ಮಾನ್ಯ ಅಧ್ಯಕ್ಷರೆ, ನಿಯಮ 62ರ ಮೇರೆಗೆ ಆಶ್ರಯ ಮತ್ತಿತರ ಯೋಜನೆಗಳ ಬಗ್ಗೆ ಸುಮಾರು 3 ಗಂಟೆಗಳ ಸುಧೀರ್ಘ ಚರ್ಚೆ ಈ ಸದನದಲ್ಲಿ ಆಗಿದೆ. ಇದು ಷಾರ್ಟ್‌ಡ್ಯುರೇಷನ್ ಎಂದರೂ ಕೂಡ ಮಾನ್ಯ ಸದಸ್ಯರು ಬಹಳ ಸುದೀರ್ಘವಾಗಿ ಚರ್ಚೆಮಾಡಿದ್ದಾರೆ. ಈ ಚರ್ಚೆಯ ಇಂಗಿತದ ಬಗ್ಗೆ ಹೇಳುವುದಾದರೆ ಮಾನ್ಯ ವಿರೋಧಪಕ್ಷದ ನಾಯಕರಾದ ದೇಶಪಾಂಡೆಯವರು, ಮಾನ್ಯ

ಆಳ್ವಾರವರು, ವೈ.ಕೆ. ರಾಮಯ್ಯನವರು ಇನ್ನೂ ಅನೇಕ ಮಾನ್ಯ ಸದಸ್ಯರು ತಮ್ಮ ನೋವುಗಳನ್ನು ತಮಗೆ ಅನಿಸಿದಂಥ ಅನ್ಯಾಯವನ್ನು ಆದಷ್ಟು ಮಟ್ಟಿಗೆ ಸರ್ಕಾರದ ಮುಂದೆ ತರಲು ಪ್ರಯತ್ನ ಮಾಡಿದ್ದಾರೆ. ಪ್ರಪ್ರಥಮವಾಗಿ ಅವರಿಗೆ ನನ್ನ ಧನ್ಯವಾದಗಳನ್ನರ್ಪಿಸುತ್ತೇನೆ. ಇದರ ಜೊತೆಗೆ ಎಲ್ಲಾ ಮಾನ್ಯ ಸದಸ್ಯರೂ ಅಂದರೆ ಅವರು ವಿರೋಧಪಕ್ಷದವರು ಇರಲಿ, ಆಡಳಿತ ಪಕ್ಷದಲ್ಲಿರಲಿ ಈ ಆಶ್ರಯ ಯೋಜನೆಯ ಕಾರ್ಯ ನಿರ್ವಹಣೆ ಹೇಗೆ ಸರ್ಕಾರದವರು ಇದನ್ನು ಏತಕ್ಕೆ ಮಾಡಿದರು ಎಂಬ ಬಗ್ಗೆ ಯಾರೂ ಕೂಡ ಸರಿಯಾದ ರೀತಿಯಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲಿಲ್ಲ. ಕಾರಣ ಅವರಿಗೆ ಸಿಕ್ಕಿದಂಥ ಮಾಹಿತಿ ದೋಷಪೂರ್ಣವಾಗಿದೆ ಎಂದು ನಾನು ಹೇಳಿದರೆ ಅದು ತಪ್ಪಾಗಲಿಕ್ಕಿಲ್ಲ. ಮಾನ್ಯ ಸದಸ್ಯರು ಹೇಳಿದಂಥ, ಬೊಟ್ಟು ಮಾಡಿ ತೋರಿಸಿದಂಥ ಲೋಪದೋಷಗಳ ಬಗ್ಗೆ ಸ್ವಲ್ಪ ಹೊತ್ತಿನನಂತರ ನಾನು ಉತ್ತರ ಕೊಡುತ್ತೇನೆ. ಆದರೆ ಗೃಹ ಮಂಡಲಿಯ ಆಶ್ರಯ ಯೋಜನೆಯ ಬಗ್ಗೆ ಅನೇಕ ಮಾನ್ಯ ಸದಸ್ಯರು ಅನೇಕ ರೀತಿಯ ಕಟ್ಟುಕತೆಗಳನ್ನು ಹೇಳಿ ಇಲ್ಲಸಲ್ಲದ ಆರೋಪಗಳನ್ನು ಈ ಸದನದ ಒಳಗೆ, ಹೊರಗೆ ಹೇಳಿದ್ದಾರೆ. ಅದು ಪತ್ರಿಕೆಗಳಲ್ಲೂ ಕೂಡ ಬರುತ್ತಿದೆ. ಆದುದರಿಂದ ನಾನು ಸತ್ಯವನ್ನು ಬಹಿರಂಗ ಮಾಡಬೇಕಾಗಿದೆ. ಆಗಿರತಕ್ಕ ಲೋಪದೋಷಗಳನ್ನು ನಾವು ಒಪ್ಪಿಕೊಳ್ಳಬಹುದು. ಮುಂದೆ ಏನು ಮಾಡಬೇಕೆಂಬ ಬಗ್ಗೆ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ನಾನೂ ಮತ್ತು ನನ್ನ ಖಾತೆಯ ಅಧಿಕಾರಿಗಳು ಪ್ರಯತ್ನ ಮಾಡುತ್ತಿದ್ದೇವೆ. ಈಗ ನಾನು ಹೌಸಿಂಗ್ ಬೋರ್ಡ್‌ನ ಆಶ್ರಯ ಯೋಜನೆಯ ಬಗ್ಗೆ ವಿವರಗಳನ್ನು ಕೊಡಬಯಸುತ್ತೇನೆ. ಎಷ್ಟು ಮನೆಗಳನ್ನು ಕಟ್ಟಲಾಯಿತು, ಯಾವ ರೀತಿಯ ಮನೆಗಳನ್ನು ಕಟ್ಟಲಾಯಿತು, ಕಂಟ್ರಾಕ್ಟರ್‌ಗಳ ಮೊಬಲೈಸೇಷನ್ ಏನು ಇನ್ನೂ ಮುಂತಾದ ಅನೇಕ ವಿವರಗಳನ್ನು ವಿವರವಾಗಿ ನಾನು ಕೊಡಬಯಸುತ್ತೇನೆ. ತಾವು ಅಪ್ಪಣೆ ಕೊಟ್ಟರೆ ಇದನ್ನು ಓದುತ್ತೇನೆ. ನಿವೇಶನ ರಹಿತರಿಗೆ ನಿವೇಶನವನ್ನು ಕೊಡತಕ್ಕದ್ದು ಮನೆ ಇಲ್ಲದವರಿಗೆ ಮನೆಯನ್ನು ಕೊಡತಕ್ಕದ್ದು ಎಂಬ ಯೋಜನೆಯನ್ನು ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀಮತಿ ಇಂದಿರಾಗಾಂಧಿಯವರು ಘೋಷಣೆ ಮಾಡಿ 1972–73ನೇ ಸಾಲಿನಲ್ಲಿ ಜನತಾ ಮನೆಗಳನ್ನು ಕಟ್ಟುವ ಯೋಜನೆಯನ್ನು ಜಾರಿಗೆತಂದರು. ಅದೇ ರೀತಿ ನಮ್ಮ ಮಾಜಿ ಮುಖ್ಯಮಂತ್ರಿಗಳಾಗಿದ್ದ ದೇವರಾಜ ಅರಸರ ಸರ್ಕಾರ ಇದ್ದಾಗ ಈ ಯೋಜನೆಯನ್ನು ಕಾರ್ಯಗತಗೊಳಿಸಲಾಯಿತು. 1978ರಿಂದ ಇವತ್ತಿನವರೆಗೆ ಅಂದರೆ 1991ರವರೆಗೆ ಸುಮಾರು 5.82 ಲಕ್ಷ ಜನತಾ ಮನೆಗಳನ್ನು ಕಟ್ಟಿಸಲಾಯಿತು. ಈ ಪೈಕಿ 4.72 ಲಕ್ಷ ಮನೆಗಳು ಪೂರ್ತಿಯಾಗಿದ್ದು ಅವುಗಳಲ್ಲಿ ಫಲಾನುಭವಿಗಳು ವಾಸಿಸುತ್ತಿದ್ದಾರೆ. ಈ ಯೋಜನೆಯಲ್ಲಿ ಇನ್ನೂ 1.04 ಲಕ್ಷ ಮನೆಗಳನ್ನು ಕಟ್ಟಿಸಬೇಕಾಗಿತ್ತು. ಆದರೆ 1991ರಲ್ಲಿ ಈ ಯೋಜನೆಗೆ ಸರ್ಕಾರದಿಂದ ಸ್ವಲ್ಪಮಟ್ಟಿಗೆ ಅಡ್ಡಿ ಆಯಿತು. ಆದರೂ ಕೂಡ ಅರ್ಧದಲ್ಲೇ ನಿಂತಿರತಕ್ಕ ಮನೆಗಳು ಏನಿವೆ ಅವುಗಳನ್ನು ಪೂರ್ಣಮಾಡಬೇಕೆಂದು ಸರ್ಕಾರ ತೀರ್ಮಾನವನ್ನು ತೆಗೆದುಕೊಂಡು ಈಗ್ಗೆ 4–5 ದಿನಗಳ ಹಿಂದೆ ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಇನ್ನೂ 7 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಕನಿಷ್ಟ ಪಕ್ಷ ಬರುವ ಜೂನ್ 30ನೇ ತಾರೀಖಿನೊಳಗೆ 20 ಸಾವಿರ ಮನೆಗಳನ್ನು ಪೂರ್ತಿಮಾಡುವಂತೆ ಹೇಳಿದ್ದೇವೆ. ಇದರ ಪ್ರಕಾರ ಈಗಾಗಲೇ ಕೆಲಸ ಪ್ರಾರಂಭವಾಗಿದೆ. ನಾನು ಈಗಾಗಲೇ ಹೇಳಿದಂತೆ ಶ್ರೀಮತಿ ಇಂದಿರಾಗಾಂಧಿಯವರ 20 ಅಂಶದ ಯೋಜನೆಯನ್ವಯ ಇದನ್ನು ಮಾಡುತ್ತಿದ್ದೇವೆ. ಈ ಜನತಾ ಯೋಜನೆಗೆ ಆಶ್ರಯ ಎಂದು ಹೊಸ ನಾಮಕರಣವನ್ನು ಮಾಡಿ, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಂಗಾರಪ್ಪನವರು ಮುಂದುವರಿಸಿದ್ದಾರೆ. ಜನರಿಗೆ ಹೆಚ್ಚು ತ್ವರಿತವಾಗಿ, ಉತ್ತಮವಾದ ಬಹುಕಾಲ ಬಾಳಿಕೆ ಬರುವಂಥ ಮನೆಗಳನ್ನು ಕಟ್ಟಿಸಬೇಕೆಂದು ಸರ್ಕಾರ ನಿರ್ಧಾರ ತೆಗೆದುಕೊಂಡು 2.43 ಲಕ್ಷ ಮನೆಗಳ ಗುರಿಯನ್ನು ಇಟ್ಟುಕೊಂಡು ಮುಂದುವರಿದಿದೆ. ಈ ಆಶ್ರಯ ಯೋಜನೆಗೆ ಎಷ್ಟು ಹಣ ಬೇಕಾಗಿತ್ತು ಎಂದರೆ 30 ಸಾವಿರ ಮನೆಗಳನ್ನು ಪಟ್ಟಣ ಜನರಿಗೆ ಕೊಡಬೇಕು, 30 ಸಾವಿರ ಮನೆಗಳನ್ನು ಬೆಂಗಳೂರಿನ ಜನರಿಗೆ

ಕೊಡಬೇಕು, 1,75,000 ಮನೆಗಳನ್ನು ಗ್ರಾಮೀಣ ಪ್ರದೇಶದವರಿಗೆ ಕೊಡಬೇಕು ಒಟ್ಟು 2,48,888 ಮನೆಗಳನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಇದರ ಜೊತೆಯಲ್ಲಿ ಅಂಬೇಡ್ಕರ್ ಶತಾಬ್ದಿ ಇದ್ದುದರಿಂದ 2,09,880 ಮನೆಗಳನ್ನು ಈ ಯೋಜನೆ ಪರವಾಗಿ ಕಟ್ಟಿಸಬೇಕೆಂದು ಸರಕಾರದವರು ನಿರ್ಣಯ ತೆಗೆದುಕೊಂಡೆವು. 143 ಕೋಟಿ ಸಬ್ಸಿಡಿ, 295 ಕೋಟಿಯನ್ನು ಹುಡ್ಕೋದಿಂದ ಸಾಲ ಪಡೆಯಬೇಕೆಂದು ನಿರ್ಧಾರವಾಗಿತ್ತು. ಈ ಗುರಿಯನ್ನು ಮುಟ್ಟಲು ಅಥವಾ ಇದನ್ನು ಸಾಧಿಸಲು ಗೃಹಮಂಡಲಿಯನ್ನು ಸರಕಾರ ನೂಡಲ್ ಏಜೆನ್ಸಿ ಎಂದು ಒಪ್ಪಿಸಿತು. ಈ ಗುರಿಯನ್ನು ಮುಟ್ಟಲು, ಇದನ್ನು ಸಾಧಿಸಲು ಅವರಿಗೆ ಗ್ರಹಣ ಬಂತು, ಗ್ರಹಣ ಬಂದು ಅದು ಸರಿಯಾಗಿ ಸಕಾಲಕ್ಕೆ ಗುರಿ ಸಾಧನೆಗಾಗಿ ಪ್ರಯತ್ನ ಮಾಡಲಿಲ್ಲ ಎನ್ನುವುದನ್ನು ನಾನು ಬಹಳ ಪ್ರಾಂಜಲ ಮನಸ್ಸಿನಿಂದ ಒಪ್ಪಿಕೊಳ್ಳುತ್ತೇನೆ. ಬರೀ ಮಾತಿನಿಂದ ಹೇಳುತ್ತಿದ್ದೇನೆಂದು ತಿಳಿಯಬೇಡಿ ಅಂಕಿ ಸಂಖ್ಯೆಗಳನ್ನು ನೋಡಿದರೆ ತಿಳಿಯುತ್ತದೆ. 2,41,000 ಮನೆಗಳನ್ನು ಕಟ್ಟಿಸುವ ಗುರಿ ಇಟ್ಟುಕೊಂಡರೆ ನಾವು ಕಟ್ಟಿಸಿದಂತಹ ಪೂರ್ತಿ ಮನೆಗಳು ಅಂದರೆ 607 ಮತ್ತು 1,444, ಮನೆಗಳು ಆಗಿದೆ. 8-9 ಸಾವಿರ ಮನೆಗಳು ಅರ್ಧಂಬರ್ಧವಾಗಿವೆ. ಒಟ್ಟು 13 ಸಾವಿರ ಚಿಲ್ಲರೆ ಮನೆಗಳು ಆಗಿವೆ. 2,41,000 ಮನೆಗಳನ್ನು ಕಟ್ಟಿಸಬೇಕೆಂದು ಹೇಳಿದಾಗ 12,000 ಮನೆಗಳನ್ನು ಕಟ್ಟಿದ್ದೇವೆ. ಇದು ಗೃಹಮಂಡಲಿಗೆ ಗೌರವ ತರುವುದೂ ಅಲ್ಲ. ಈ ಖಾತೆಯನ್ನು [illegible]ಕೊಂಡಂಥ ಮಂತ್ರಿಗಳಿಗೂ ಸರಕಾರಕ್ಕೂ ಇದು ಗೌರವ ತರುವಂಥ ಮಾತು ಅಲ್ಲ [illegible]ದನ್ನು ನಾನು ಒಪ್ಪಬೇಕಾಗಿದೆ. ಈ ಪ್ರಗತಿಯನ್ನು ನೋಡಿದಾಗ ಇದನ್ನು ಹೇಗೆ ಮುಂದುವರಿಸಬೇಕೆಂದು ನಾವು ವಿಚಾರ ಮಾಡಿದೆವು. ಈ ಆಶ್ರಯ ಯೋಜನೆ ತ್ವರಿತ ಗತಿಯಿಂದ ಆಗಬೇಕು ಸುಭದ್ರ ಮನೆಗಳನ್ನು ಕೊಡಬೇಕೆನ್ನುವ ದೃಷ್ಟಿಯಲ್ಲಿದ್ದೇವೆ. ಪೂಣೆಯ ಶಿರ್ಕೆ ಎನ್ನುವ ಕಂಟ್ರಾಕ್ಟರ್ ಅವರು ನಮ್ಮ ಸರಕಾರವನ್ನು ಭೇಟಿ ಮಾಡಿ ಸರಕಾರದ ಮುಂದೆ ತಮ್ಮದೇ ಆದಂತಹ ಒಂದು ಯೋಜನೆಯನ್ನು ಇಟ್ಟರು. ಆ ಯೋಜನೆ ಪ್ರಕಾರ ಸರಕಾರ ಅದನ್ನು ಒಪ್ಪಿಕೊಂಡು ಪ್ರೀ ಫ್ಯಾಬ್ರಿಕೇಟೆಡ್ ಟೆಕ್ನಾಲಜಿಯನ್ನಾಧಾರಿಸಿ ಅದನ್ನು ಮಾಡಿದರು. ನಾವು ಅದನ್ನು ಒಪ್ಪಿಕೊಂಡು ಕಾರ್ಯಾಚರಣೆಯಲ್ಲಿ ತರಲು ಪ್ರಯತ್ನ ಮಾಡಿದೆವು. ಈ ಯೋಜನೆ ಇಷ್ಟೊಂದು ಹಿಂದೆ ಬೀಳಲಿಕ್ಕೆ ಕಾರಣ ಏನು ಎಂಬುದನ್ನು ನೇರವಾಗಿ ನಮ್ಮ ಸರಕಾರ ನಮ್ಮ ಖಾತೆಯು ವಿಚಾರ ಮಾಡುತ್ತಿದೆ. ಇಷ್ಟೊಂದು ಕಡಿಮೆ ಏಕಾಯಿತು ಎಂದು ವಿಚಾರ ಮಾಡುತ್ತಿದ್ದೇವೆ. ಉದಾಹರಣೆಗೆ ಹೇಳುವುದಾದರೆ ಅಂಬೇಡ್ಕರ್ ಯೋಜನೆಯಲ್ಲಿ 29 ಸಾವಿರ ಮನೆಗಳನ್ನು ಮಾಡಬೇಕೆಂದು ಇದ್ದೆವು. ಆದರೆ ನಮ್ಮ ಗುರಿ ಇವತ್ತು ಕೇವಲ 10 ಮನೆಗಳು ಮಾತ್ರ....

ಶ್ರೀ ಸಿ. ಬೈರೇಗೌಡ:- 10ರ ಪಕ್ಕದಲ್ಲಿ ಸೊನ್ನೆ ಹಾಕಿ.

ಶ್ರೀ ಗೋಪಿನಾಥ ಆರ್. ಸಾಂಡ್ರಾ:- ಅದನ್ನು ನಿಮಗೇ ಬಿಡುತ್ತೇನೆ. ಈಗ ಇದ್ದ ಪರಿಸ್ಥಿತಿಯನ್ನು ಹೇಳುತ್ತಿದ್ದೇನೆ. ಇದನ್ನೆಲ್ಲಾ ವಿಚಾರ ಮಾಡಿ ಪರಿವರ್ತನೆ ಮಾಡಬೇಕು ಮಾರ್ಪಾಡು ಮಾಡಬೇಕು ಎಂಬ ಪ್ರಯತ್ನ ನಾವು ಮಾಡಿದ್ದೇವೆ. ನಮ್ಮ ಸರಕಾರ ಇದನ್ನು ಮಾಡಿದೆ. ಇವತ್ತು ಆ ಯೋಜನೆಗೆ ಸ್ವಲ್ಪ ಮಾರ್ಪಾಟು ಮಾಡಿದ್ದೇವೆ. ಆಶ್ರಯ ಯೋಜನೆಯಲ್ಲಿ ಕೆ.ಹೆಚ್.ಬಿ.ಯಿಂದ ಎಷ್ಟು ಮನೆಗಳನ್ನು ಮಾಡಬೇಕು ಎಷ್ಟು ಮಾಡಲಿಕ್ಕೆ ಸಾಧ್ಯವಾಗುತ್ತದೆನ್ನುವುದನ್ನು ವಿಚಾರ ಮಾಡಿದ್ದೇವೆ. ಮತ್ತು ಇದೇಕೆ ಫೆಲ್ಯೂರ್ ಆಯಿತು ಇದನ್ನು ಏಕೆ ಕಾರ್ಯಗತ ಮಾಡುವುದಕ್ಕಾಗಲಿಲ್ಲವೆನ್ನುವುದನ್ನು ವಿಚಾರ ಮಾಡಿದಾಗ ನಮಗೆ ಕಾಣಿಸಿತು ಈ ಯೋಜನೆ ಯಶಸ್ವಿಯಾಗದಿರಲು ಕಾರಣವೇನೆಂದರೆ ಪೂರ್ಣ ತಯಾರಿಯಿಲ್ಲದೆ ಪ್ರಾಕ್ಟಿಕಲ್ ಆಗಿ ಇದನ್ನು ಸಾಧಿಸಲಿಕ್ಕಾಗುತ್ತದೆಯೋ ಇಲ್ಲವೋ ಎಂದು ವಿಚಾರ ಮಾಡದೆ ಇದರ ಕಡೆ ಗಮನ ಕೊಡದೆ ಹಣದ ವ್ಯವಸ್ಥೆ ಕೂಡ ಮಾಡದೆ ನಾವು ಆಶ್ರಯ ಯೋಜನೆಯನ್ನು ಕೈಗೆತ್ತಿಗೊಂಡಿದ್ದರಿಂದ ನಮಗೆ ಸಾಕಷ್ಟು ಪ್ರಗತಿ [illegible]ಕ್ಕಾಗಲಿಲ್ಲ. ಈ ಬಗ್ಗೆ ಸರ್ಕಾರಿ ಅಧಿಕಾರಿಗಳು ಅಷ್ಟೊಂದು ಆಸೆ ತೋರಿಸ್ಸಿಲ್ಲವೆನ್ನು[illegible]ತನ್ನು ನಾವು ಸಾಧಿಸಿ ಅಂಕಿ

ಸಂಖ್ಯೆಗಳನ್ನು ನೋಡಿದರೆ ಗೊತ್ತಾಗುತ್ತದೆ. ಈ ಒಂದು ಕಾರ್ಯಕ್ರಮದ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರು ಇದಕ್ಕೆ ಟೆಂಡರ್ ಕರೆದಿಲ್ಲವೆಂದು ಹೇಳಿದರು. ದಿನಾಂಕ 11–11–1991ಕ್ಕೆ ನಾಡಿನ ಮತ್ತು ದೇಶದ ದಿನಪತ್ರಿಕೆಗಳಲ್ಲಿ ಜಾಹೀರಾತನ್ನು ನೀಡಿದೆವು. ನೀವು ಜಾಹೀರಾತನ್ನು ಕೊಡದೆ ಟೆಂಡರನ್ನು ಕರೆದಿದ್ದೀರಿ ಎನ್ನುವ ಆಪಾದನೆಯನ್ನು ಕೂಡ ಮಾಡಿದರು. ನಮ್ಮ ನಾಡಿನ ಪತ್ರಿಕೆಗಳಲ್ಲಿ ಅಷ್ಟೇ ಅಲ್ಲ ದೇಶದ ಎಲ್ಲಾ ಪತ್ರಿಕೆಗಳಲ್ಲೂ ಕೂಡ ಜಾಹೀರಾತನ್ನು ಕೊಟ್ಟು ಟೆಂಡರನ್ನು ಕರೆದಿದ್ದೇವೆ. ಆ ಟೆಂಡರ್ ಬಗ್ಗೆ ಏನು ಭಾವನೆಯನ್ನು ನಮ್ಮ ವಿರೋಧಪಕ್ಷದ ನಾಯಕರು ಇಟ್ಟುಕೊಂಡಿರುತ್ತಾರೆ ಅದನ್ನು ದಯವಿಟ್ಟು ತೆಗೆದುಹಾಕಬೇಕು. ಈ ಟೆಂಡರುಗಳನ್ನು ಕರೆದಾಗ ಸುಮಾರು 265 ಜನ ಟೆಂಡರು ಹಾಕಿದರು. ಆ ಟೆಂಡರುಗಳನ್ನು ಪರಿಶೀಲಿಸಿ ಅದರೊಳಗೆ ಸುಮಾರು 27 ಜನ ಗುತ್ತಿಗೆದಾರರಿಗೆ ಆಶ್ರಯ ಯೋಜನೆಯಲ್ಲಿ 2 ಲಕ್ಷ 41 ಸಾವಿರ ಮನೆಗಳನ್ನು ಕಟ್ಟಬೇಕೆಂದು ಕೊಟ್ಟೆವು. 15–12–92ರಲ್ಲಿ ಈ ಯೋಜನೆಯನ್ನು ಸ್ವಲ್ಪ ಮಾರ್ಪಾಡು ಮಾಡಿ 1 ಲಕ್ಷ 84 ಸಾವಿರ ಮನೆಗಳನ್ನು ಗ್ರಾಮಾಂತರ ಪ್ರದೇಶಗಳಿಗೆ, 30 ಸಾವಿರ ಬೆಂಗಳೂರು ನಗರಕ್ಕೆ, 30 ಸಾವಿರ ಬೆಂಗಳೂರನ್ನು ಹೊರತುಪಡಿಸಿ ಒಟ್ಟು 2 ಲಕ್ಷ 35 ಸಾವಿರ ಮನೆಗಳನ್ನು ಕಟ್ಟಬೇಕೆಂದು ಹೇಳಿದೆವು. ಈ ಯೋಜನೆಗೆ ಬೇಕಾದ ಹಣದ ಮೊತ್ತ 276 ಕೋಟಿ ರೂಪಾಯಿಗಳು ಇದರಲ್ಲಿ ಗ್ರಾಮಾಂತರ ಪ್ರದೇಶದವರಿಗೆ, 48 ಕೋಟಿ ರೂಪಾಯಿಗಳು ಪಟ್ಟಣ ಪ್ರದೇಶಗಳಿಗೆ, 69 ಕೋಟಿ ರೂಪಾಯಿಗಳು, ಬೆಂಗಳೂರಿನಲ್ಲಿರತಕ್ಕಂಥ ಜನರಿಗೆ ಕಟ್ಟಿಕೊಡಬೇಕೆಂದು ಮಾಡಿದೆ. 29–1–1992ಕ್ಕೆ ಗುತ್ತಿಗೆದಾರರ ಸಂಖ್ಯೆಯನ್ನು 27 ರಿಂದ 13ಕ್ಕೆ ಇಳಿಸಲಾಯಿತು. ಆಗ ಸರ್ಕಾರದವರು ಒಂದು ನಿರ್ಣಯವನ್ನು ತೆಗೆದುಕೊಂಡರು. ಇದು ಬೃಹತ್ ಯೋಜನೆ ಇದ್ದುದರಿಂದ ತೀವ್ರವಾಗಿ ಕೆಲಸ ಮಾಡಲು ಈ ಕಂಟ್ರಾಕ್ಟರುಗಳಿಗೆ ಅಡ್ವಾನ್ಸ್ 5 ಪರ್ಸೆಂಟ್ ಕೊಡಬೇಕೆಂದು ಹೇಳಿ ಕ್ಯಾಬಿನೇಟ್‌ನಲ್ಲಿ ನಿರ್ಣಯವನ್ನು ತೆಗೆದುಕೊಳ್ಳಲಾಯಿತು. ಅಡ್ವಾನ್ಸ್ ತೆಗೆದುಕೊಂಡನಂತರ ಅದನ್ನು ಬಟವಾಡೆ ಕೂಡ ಮಾಡಿದರು. 11 ಕೋಟಿ ರೂಪಾಯಿಗಳಲ್ಲಿ ಕಂಟ್ರಾಕ್ಟರುಗಳು 6 ಕೋಟಿ ರೂಪಾಯಿಗಳನ್ನು ಸೆಕ್ಯೂರ್ಡ್ ಲೋನ್ಸ್ ಎಂದು ತೆಗೆದುಕೊಂಡರು. ಮೂರು ಕೋಟಿ ರೂಪಾಯಿ ಹಣ Against Bills ಕೊಡಬೇಕೆಂದು ಮಾಡಿದರು. 1992 ಫೆಬ್ರುವರಿಯಲ್ಲಿ ಗುತ್ತಿಗೆದಾರರಿಗೆ ವರ್ಕ್ ಆರ್ಡರ್ ಕೊಟ್ಟರು. 1992ರಲ್ಲಿ, ಮಾರ್ಚ್ ಏಪ್ರಿಲ್‌ನಲ್ಲಿ ಕೆಲಸ ಪ್ರಾರಂಭವಾಯಿತು. ಆ ಕೆಲಸವನ್ನು 17 ಜಿಲ್ಲೆಗಳಲ್ಲಿ ಮಾಡಬೇಕೆಂದು ನಿರ್ಣಯ ತೆಗೆದುಕೊಳ್ಳಲಾಯಿತು. ಕೂರ್ಗ್, ಬಿಜಾಪುರ, ಮತ್ತು ಚಿಕ್ಕಮಗಳೂರು ಜಿಲ್ಲೆಗಳಿಗೆ ಯಾರೂ ಕಂಟ್ರಾಕ್ಟರ್ಸ್ ಬರಲಿಲ್ಲ. ಗುತ್ತಿಗೆದಾರರೂ ಇವತ್ತಿನವರೆಗೂ ಬರಲಿಲ್ಲ. ನಾವು ಆಶ್ರಯ ಯೋಜನೆಯಲ್ಲಿ ಅವರಿಗೆ ಕಿಂಚಿತ್ತಾದರೂ ಸಹಾಯ ಮುಟ್ಟಲಿಲ್ಲ ಎನ್ನುವುದನ್ನೂ ಕೂಡ ತಮ್ಮ ಗಮನಕ್ಕೆ ತರಬಯಸುತ್ತೇನೆ. 1992 ನವೆಂಬರ್ ಹೊತ್ತಿಗೆ ಎಷ್ಟು ಮನೆಗಳು ಅಲ್ಲಿ ಆಗಿವೆ ಎನ್ನುವುದನ್ನು ಈಗಾಗಲೇ ಹೇಳಿದ್ದೇನೆ. 9 ಸಾವಿರ 10 ಸಾವಿರ ಮನೆಗಳು ಆಗಿದೆ. ಅದನ್ನು ಸರಿಯಾಗಿ ಜಾರಿಗೆ ತರಲು ನಮ್ಮ ಸರ್ಕಾರ ಗೃಹಮಂಡಳಿಯ ಅಧಿಕಾರಿಗಳು ನಾವೆಲ್ಲರೂ ಕೂಡಿ ವಿಚಾರ ಮಾಡಿದೆವು. ವಿಚಾರ ಮಾಡಿದಾಗ ನಮ್ಮ ಅನೇಕ ಶಾಸಕರು ನಮ್ಮ ಹತ್ತಿರ ಬಂದರು. ನಿಮ್ಮ ಪ್ರೀಫ್ಯಾಬ್ರಿಕೇಟೆಡ್ ಟೆಕ್ನಾಲಜಿ ನಮಗೆ ಬೇಡ ನಾವು ಒಂದೂವರೆ ವರ್ಷದಿಂದ ಜನರಿಗೆ ಮನೆಗಳನ್ನು ಕೊಡುತ್ತೇವೆ, ಸೈಟುಗಳನ್ನು ಕೊಡುತ್ತೇವೆಂದು ಹೇಳಿದ್ದೇವೆ. ಇವತ್ತಿನವರೆಗೂ 1–2–3–4 ಮನೆಗಳನ್ನು ಕೊಡಲಿಕ್ಕೂ ಆಗಲಿಲ್ಲ, ನಮ್ಮ ಕ್ಷೇತ್ರಗಳಿಗೆ ಹೋಗಿ ಯಾವರೀತಿ ಮುಖಗಳನ್ನು ತೋರಿಸಬೇಕೆಂದು ಅನೇಕ ಶಾಸಕರು ಹೇಳಿದರು. ಅದನ್ನು ಕೇಳಿಕೊಂಡು ಜನರ ಅಭಿಪ್ರಾಯವನ್ನು ತಿಳಿದುಕೊಂಡು ಇದರಲ್ಲಿ ಮಾರ್ಪಾಡು ಮಾಡಬೇಕೆಂದು ಹೇಳಿ ನಾವು ಪ್ರಯತ್ನ ಮಾಡಿದ್ದೇವೆ. ಆ ಪ್ರಯತ್ನದ ಫಲ ಎಂದರೆ ಈಗಿರುವಂತೆ ಈ ವರ್ಷದಲ್ಲಿ ಜೂನ್ ಅಂತ್ಯದವರೆಗೆ 1 ಲಕ್ಷ 6 ಸಾವಿರ ಮನೆಗಳನ್ನು ಕಟ್ಟಿ ಬಡವರಿಗೆ ಕೊಡಬೇಕೆಂದು ನಿರ್ಣಯ ತೆಗೆದುಕೊಂಡಿದ್ದೇವೆ. 1 ಲಕ್ಷ 6 ಸಾವಿರ ಮನೆಗಳನ್ನು ಹೇಗೆ ಕಟ್ಟಲಿಕ್ಕೆ ಸಾಧ್ಯವೆನ್ನುವ ಬಗ್ಗೆ

ಕೆಲವರು ಸಂಶಯವನ್ನು ಪಡುತ್ತಾರೆ. ಕಂಟ್ರಾಕ್ಟರ್ಸ್‌ಗೆ ಕೊಡುವುದು ಇರಲಿ, ತಾಂತ್ರಿಕತನವೇ ಇರಲಿ, ಈ ವಿಷಯದಲ್ಲಿ ಅನುಭವ ಇದ್ದಂಥ ಎಲ್ಲಾ ಜನರನ್ನು ಕರೆದು ವಿಚಾರ ಮಾಡಿ, ನಾವು ಒಂದು ನಿರ್ಣಯಕ್ಕೆ ಬಂದಿದ್ದೇವೆ. ಆ ನಿರ್ಣಯವೇನೆಂದರೆ ಪ್ರೀಫ್ಯಾಬ್ರಿಕೇಟೆಡ್ ಟೆಕ್ನಾಲಜಿ ಏನಿದೆ ಇವರಿಂದ ನಮ್ಮ ಗುರಿ ಸಾಧನೆ ಮಾಡಲಿಕ್ಕೆ ಸಾಧ್ಯವಿಲ್ಲವೆಂದು ಮತ್ತು ಜನರ ಬೇಡಿಕೆಯನ್ನು ಅನುಸರಿಸಿ ಸ್ಪಂದಿಸಿ ಆದಷ್ಟು ಜಾಗ್ರತೆ ಜೂನ್ 30ರ ಒಳಗೆ ನಾವು ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಹೇಳಿ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. 66 ಸಾವಿರ ಟ್ರೆಡಿಷನಲ್ ಕನ್‌ವೆನ್‌ಷನ್ ಮನೆಗಳನ್ನು ಹಿಂದೆ ಯಾವುದು ಕಟ್ಟಿದ್ದೆವು ಅದನ್ನೇ ಮುಂದುವರಿಸಿಕೊಂಡು ಹೋಗಬೇಕೆಂದು ನಿರ್ಣಯ ತೆಗೆದುಕೊಂಡೆವು. 66 ಸಾವಿರ ಮನೆಗಳನ್ನು ಕಟ್ಟುವುದಕ್ಕೆ ಸರ್ಕಾರ ಈಗಾಗಲೇ ನಿರ್ಧರಿಸಿದೆ. ಅದಕ್ಕೆ ಬೇಕಾದ ಹಣವನ್ನು ಹೊಂದಿಸಿದ್ದೇವೆ. ಮೊದಲನೆಯ ಕಂತಾಗಿ 13 ಕೋಟಿ 25 ಲಕ್ಷ ರೂಪಾಯಿಗಳನ್ನು ಮೊನ್ನೆ ಬಿಡುಗಡೆ ಮಾಡಿದ್ದೇವೆ. ನಾನು ಕಳೆದ ಬಾರಿ ನಿಮಗೆ ಹೇಳಿದಂತೆ ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಟ್ಟಿದ್ದೇವೆ. ಬಿಡಿಓ ಮುಖಾಂತರ 66 ಸಾವಿರ ಮನೆಗಳನ್ನು ಕಟ್ಟುವ ಕಾರ್ಯಕ್ರಮವನ್ನು ಬೇರೆಬೇರೆ ಜಿಲ್ಲಾಧಿಕಾರಿಗಳು ಕೈಗೊಳ್ಳಬೇಕೆಂದು ಹೇಳಿದೆವು. 66 ಸಾವಿರ ಮನೆಗಳನ್ನು ಎಲ್ಲಿ ಕಟ್ಟಬೇಕು, ಯಾವ ರೀತಿ ಕಟ್ಟಬೇಕೆಂಬುದನ್ನು ತೀರ್ಮಾನ ಮಾಡಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಟ್ಟಿದ್ದೇವೆ. ಇದರ ಜೊತೆಗೆ ಟಾಸ್ಕ್ ಫೋರ್ಸ್ ಕಮಿಟಿ ಏನಿದೆ ಅದು ಬೆನಿಫಿಷಿಯರೀಸ್ ಅನ್ನು ಕಂಡುಹಿಡಿಯಬೇಕು, ಸ್ಥಳ ನೋಡಬೇಕು ಮತ್ತು ಕಟ್ಟಲಿಕ್ಕೆ ಎಲ್ಲಾ ವ್ಯವಸ್ಥೆ ಮಾಡಬೇಕು. ಟಾಸ್ಕ್‌ಫೋರ್ಸ್ ಕಮಿಟಿಯವರನ್ನು ಬಹುಮಟ್ಟಿಗೆ ತಮ್ಮ ಸಮಯವನ್ನು ಈ ಕಾರ್ಯಕ್ರಮದ ಯಶಸ್ವಿಗೆ ಹರಿಸಬೇಕೆಂದು ಕೇಳಿಕೊಂಡಿದ್ದೇವೆ. ಕರ್ನಾಟಕ ಗೃಹಮಂಡಲಿಯಲ್ಲಿ ಈ ಯೋಜನೆಗೆ ಯಾವ ಗ್ರಹಣ ಹಿಡಿದಿತ್ತು ಅದನ್ನು ಬಿಡಿಸಲು ಅರ್ಥಾತ್ ಪುನಶ್ಚೇತನಗೊಳಿಸಲು ಯಾವ ರೀತಿ ಮಾಡಬೇಕೆಂದು ಕೇಳಿದೆವು, ಅವರು ಇಂಜಿನಿಯರ್ಸ್ ಚೀಫ್ ಇಂಜಿನಿಯರ್ಸ್ ಮತ್ತು ವಿಭಾಗದ ಎಲ್ಲಾ ಕಾರ್ಯಕರ್ತರನ್ನು ಕರೆದು, ಯಾವ ರೀತಿ ಮಾಡಬೇಕೆಂದು ಈಗಾಗಲೇ ಅವರು ತೀರ್ಮಾನ ತೆಗೆದುಕೊಂಡಿದ್ದಾರೆ. 40 ಸಾವಿರ ಮನೆಗಳನ್ನು ಕೆ.ಹೆಚ್.ಬಿ. ಅವರು ಕಟ್ಟಿಸಿಕೊಡಬೇಕೆಂದು ನಾವು ನಿರ್ಣಯ ತೆಗೆದುಕೊಂಡಿದ್ದೇವೆ. ಈ ಬಗ್ಗೆ ಕೆ.ಹೆಚ್.ಬಿ.ಯವರಿಗೆ ಆದೇಶ ಕೂಡ ಕೊಡಲಾಗಿದೆ. ಹಂತಹಂತವಾಗಿ, ಜನವರಿ, ಫೆಬ್ರವರಿ, ಮಾರ್ಚ್ ತಿಂಗಳಿಗೆ ಟಾರ್ಗೆಟ್ ಫಿಕ್ಸ್ ಮಾಡಿ ಪ್ರತಿ ತಿಂಗಳು ಇಷ್ಟು ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಹೇಳಿದ್ದೇವೆ. ಕಂಟ್ರಾಕ್ಟರ್, ಇಂಜನಿಯರ್‌ಗಳನ್ನೆಲ್ಲ ಕರೆಯಿಸಿ ಹೇಳಿದ್ದೇವೆ. ನನಗೆ ಆತ್ಮ ವಿಶ್ವಾಸ ಇದೆ, ಯಾರೇ ಎಷ್ಟೇ ಸಂಶಯ ಪಟ್ಟರೂ ಕೂಡ ಜೂನ್ 30ರೊಳಗೆ ಏನು ಗುರಿ ಇಟ್ಟುಕೊಂಡಿದ್ದೇವೆ ಅಷ್ಟು ಮನೆಗಳನ್ನು ಕಟ್ಟಿಸಿಕೊಡುವ ಜವಾಬ್ದಾರಿ ನನ್ನದು ಮತ್ತು ನನ್ನ ಸರ್ಕಾರದ್ದಾಗಿದೆ ಎಂದು ಹೇಳಬಯಸುತ್ತೇನೆ. 8-1-93ರಲ್ಲಿ ಪ್ರತಿಯೊಂದು ಮತದಾರರ ಕ್ಷೇತ್ರದಲ್ಲಿ ಕನಿಷ್ಠ 500 ಮನೆಗಳನ್ನು ನಮ್ಮ ಸರ್ಕಾರ ಕಟ್ಟಿಸಿಕೊಡಬೇಕೆಂದು ನಿರ್ಣಯ ತೆಗೆದುಕೊಂಡಿದೆ. ನಮ್ಮ ಹಿಂದಿನ ಗೃಹಮಂಡಳಿಯ ಛೇರ್ಮನ್ನರು ಮಾತನಾಡುತ್ತಾ ಹೇಳಿದರು, ಒಂದು ಸಾವಿರ ಹೇಳಿದ್ದೆವು, ನೀವು 500 ಮಾಡಿದ್ದೀರಿ, ಅದನ್ನು ಮುಂದುವರಿಸಬೇಕೆಂದು ಹೇಳಿದರು. 500 ಮಿನಿಮಂ ಎಂದು ಹೇಳಿದ್ದೇವೆ. ಬಡವರಿಗೆ ಕೊಡುವಂಥ ಆಶ್ರಯ ಯೋಜನೆ ಏನಿದೆ ಇದು ಎಲ್ಲಿಯವರೆಗೆ ನಿವೇಶನರಹಿತರು ಇರುತ್ತಾರೆ, ಮನೆ ಇಲ್ಲದ ಬಡವರು ಇರುತ್ತಾರೆ, ಅವರಿಗೆ ಪೂರ್ತಿಯಾಗಿ ಮನೆ ಕಟ್ಟಿಸಿಕೊಡುವರೆಗೆ ಈ ಯೋಜನೆ ಇರುತ್ತದೆ, ಕಾರ್ಯಗತವಾಗುತ್ತದೆ ಮತ್ತು ಇದಕ್ಕೆ ಸರ್ಕಾರ ಸರ್ವ ರೀತಿಯಿಂದ ಸಹಾಯ ಮಾಡುತ್ತದೆನ್ನುವ ಮಾತನ್ನು ಅಧ್ಯಕ್ಷಿಣಿಯವರ ಮೂಲಕ ಮಾನ್ಯ ಸದಸ್ಯರಿಗೆ ಹೇಳುತ್ತೇನೆ. ಮನೆಗಳ ಸಂಖ್ಯೆಯನ್ನು ಕಡಿಮೆ ಮಾಡುತ್ತೇವೆಂಬ ಭಾವನೆ ಮಾನ್ಯ ಸದಸ್ಯರುಗಳಿಗೆ ಇದ್ದರೆ, ಅದನ್ನು ತೆಗೆದು ಹಾಕಬೇಕೆಂದು ಪ್ರಾರ್ಥಿಸುತ್ತೇನೆ. ಈಗಾಗಲೇ ಹೇಳಿದೆ ಮೊದಲನೆ ಕಂತಾಗಿ 13 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ತಲಾ 2 ಸಾವಿರದಂತೆ ಲೆಕ್ಕಹಾಕಿ ಕೊಟ್ಟಿದ್ದೇವೆ. 8-10 ದಿನಗಳಲ್ಲಿ

ಉಳಿದ ಹಣ ಕೊಡುತ್ತೇವೆ. ಎಲ್ಲರೂ ಕೇಳುವಂಥ ಬಹು ದೊಡ್ಡ ಪ್ರಶ್ನೆ ಎಂದರೆ, ಗೃಹಮಂಡಳಿಯವರು ಗುತ್ತಿಗೆದಾರರಿಗೆ ಮುಂಗಡ ಹಣ ಕೊಟ್ಟಿದ್ದಾರೆ, ಇದು ಅನ್ಯಾಯ, ಕಾಯಿದೆಗೆ ವಿರುದ್ಧವಾಗಿದೆ, ಸ್ವಜನ ಪಕ್ಷಪಾತ ಎಂದು ಅನೇಕರು ಮಾತನಾಡಿದ್ದಾರೆ. ಈ ಗುತ್ತಿಗೆದಾರರಿಗೆ ಹಣ ಕೊಟ್ಟಿದ್ದುದು ನಿಜ. ಅಂದಿನ ಕ್ಯಾಬಿನೆಟ್‌ನವರು ನಿರ್ಣಯ ಮಾಡಿ, ಕಂಟ್ರಾಕ್ಟರ್‌ಗಳಿಗೆ ಹಣ ಕೊಟ್ಟಿದ್ದಾರೆ. ಎರಡು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಒಂದು ಮೊಬಿಲೈಸೇಷನ್ ಫಂಡ್ ಕೊಡಬೇಕಾದರೆ ನಾವು ಅನೇಕ ಕರಾರುಗಳನ್ನು ಹಾಕಿದ್ದೆವು. ಮಹತ್ವದ ಕರಾರುಗಳು ಎಂದರೆ ಬ್ಯಾಂಕಿನ ಗ್ಯಾರಂಟಿ ಇಲ್ಲದೆ ಈ ಹಣ ಕೊಡತಕ್ಕದ್ದು ಅಲ್ಲ ಎಂದು ಈ ಕರಾರು ಇತ್ತು. ಒಬ್ಬಿಬ್ಬರು ಬಿಟ್ಟರೆ, 13 ಜನರಲ್ಲಿ ಬಹುತೇಕ ಜನರು, ಬ್ಯಾಂಕ್ ಗ್ಯಾರಂಟಿ ಕೊಟ್ಟಿದ್ದರು. ಬ್ಯಾಂಕ್ ಗ್ಯಾರಂಟಿ ಬೋಗಸ್ ಎಂದು ವಿರೋಧ ಪಕ್ಷದ ನಾಯಕರು ಹೇಳಿದರು. ನಮಗೆ ತಿಳಿದ ಮಟ್ಟಿಗೆ ಎಲ್ಲಾ ಬ್ಯಾಂಕುಗಳ ಮೇನೇಜರ್, ಛೇರ್ಮನ್, ಡಿವಿಜನಲ್ ಮೇನೇಜರ್‌ರವರಿಗೆ ಕೇಳಿದಾಗ ನಾವು ಬ್ಯಾಂಕಿನವರೇ, ಬ್ಯಾಂಕ್ ಗ್ಯಾರಂಟಿ ಕೊಟ್ಟಿದ್ದೇವೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಅಷ್ಟೇ ಅಲ್ಲದೇ, ಯಾರು ಗುತ್ತಿಗೆದಾರರು ಹಣ ತೆಗೆದುಕೊಂಡಿದ್ದಾರೆ, ಒಂದು ನಯಾಪೈಸೆಯಷ್ಟೂ ಕೆಲಸ ಮಾಡಿಲ್ಲ, ಮಾಡುವುದಕ್ಕೆ ಇಚ್ಛೆಯಿಲ್ಲ ಅಂತಹವರನ್ನು ಗುರ್ತು ಮಾಡಿ ಅವರು ಏನು ಬ್ಯಾಂಕ್ ಗ್ಯಾರಂಟಿ ಕೊಟ್ಟಿದ್ದಾರೆ ಅದನ್ನು ರಿವೋಕ್ ಮಾಡಿ ಆ ಹಣವನ್ನು ಪಡೆದುಕೊಳ್ಳಲು ಪ್ರಯತ್ನ ಮಾಡಿದ್ದೇವೆ. ಅದರಲ್ಲಿ 2 ಕೋಟಿ ರೂಪಾಯಿ ನಮಗೆ ಈಗಾಗಲೇ ಕೈಸೇರಿದೆ. ಇನ್ನು 1 ಕೋಟಿ 25 ಲಕ್ಷ ರೂಪಾಯಿಗಳನ್ನು ಇನ್ನು 5-6 ದಿವಸಗಳಲ್ಲಿ ಕಳುಹಿಸುತ್ತಿದ್ದೇವೆಂದು ಹೇಳಿದ್ದಾರೆ. ಮೂರೂವರೆ ಕೋಟಿ ರೂಪಾಯಿಗಳನ್ನು ಈಗಾಗಲೇ ವಸೂಲಿ ಮಾಡಿದ್ದೇವೆ.

ಶ್ರೀ ಸಿ. ಬೈರೇಗೌಡ:- ಕೈಂಡ್ ಆಗಿದೆಯೋ ಕ್ಯಾಷ್ ಆಗಿದೆಯೋ?

SRI GOPINATH R.SANDRA:- Cash, no kind business. ನಿಮ್ಮಂಥವರು ಇಂತಹ ಪ್ರಶ್ನೆ ಕೇಳಬಹುದೇ?

ಶ್ರೀ ಸಿ. ಬೈರೇಗೌಡ:- ದಯವಿಟ್ಟು ಕೇಳಿ ಸ್ವಾಮಿ. ನಾನು ಹೇಳುವುದೆಂದರೆ, ನೀವು ಮೊಬಲೈಸೇಷನ್ ಅಡ್ವಾನ್ಸ್‌ನ್ನು ಎಗನೆಸ್ಟ್ ಮೆಟೀರಿಯಲ್ಸ್ ಕೊಟ್ಟಿದ್ದೀರಿ.

SRI GOPINATH R.SANDRA:- I have said 2 types of loans we have given. Mobilisation fund and secured loan.

ಶ್ರೀ ಸಿ. ಬೈರೇಗೌಡ:- ಕೆಲಸ ಮಾಡಿ ತೋರಿಸಬೇಕೆಂದು ಕೊಟ್ಟಿದ್ದೀರಿ. ಅವರ ಹತ್ತಿರ ಮಾಡಿಸಿದ್ದೀರಾ ಅಥವಾ ಹಣವನ್ನು ವಾಪಸ್ಸು ಪಡೆದಿದ್ದೀರಾ?

ಶ್ರೀ ಗೋಪೀನಾಥ ಆರ್. ಸಾಂಡ್ರಾ:- ನಾವು ಹಣವನ್ನು ವಾಪಸ್ಸು ಪಡೆದಿದ್ದೇವೆ ಎಂದು ಹೇಳುತ್ತಿದ್ದೇನೆ. 3.25 ಕೋಟಿ ರೂಪಾಯಿ ಬಗ್ಗೆ ಹೇಳಿದ್ದೇನೆ. ಇನ್ನು ಉಳಿದಿರತಕ್ಕದ್ದು ಸೆಕ್ಯೂರ್ಡ್ ಲೋನ್ ಇದೆ. ಯಾವ ರೀತಿಯಿಂದ ತೆಗೆದುಕೊಳ್ಳಬೇಕೆಂದು ವಿಚಾರ ಮಾಡುತ್ತಿದ್ದೇವೆ. ಇದಕ್ಕಾಗಿ ಒಬ್ಬ ಅಧಿಕಾರಿಯನ್ನು ನಾವು ನೇಮಿಸಿದ್ದೇವೆ. ಒಂದು ವಾರದ ಒಳಗೆ ಸೆಕ್ಯೂರ್ಡ್ ಲೋನ್ ತೆಗೆದುಕೊಂಡ ಗುತ್ತಿಗೆದಾರರು ಯಾರು ಇದ್ದಾರೆ ಅವರ ಬಳಿಗೆ ನಮ್ಮ ಎಂಜಿನಿಯರ್ ಸಮೇತ ಹೋಗಿ ಇನ್ಸ್‌ಪೆಕ್ಟ್ ಮಾಡಿ ಎಷ್ಟು ಮೆಟೀರಿಯಲ್ಸ್ ಅವೇಯಲಬಲ್ ಇದೆ, ನಾವು ಕೊಟ್ಟ ಹಣದ ಮಟ್ಟಕ್ಕೆ ಮಾಲು ಇದೆಯೇ ಎಂದು ನೋಡಿಕೊಂಡು ಶೀಘ್ರವಾಗಿ ವರದಿ ಮಾಡಬೇಕೆಂದು ಹೇಳಿದ್ದೇವೆ. ಬಹುಶಃ ಇನ್ನು 3-4 ದಿವಸಗಳಲ್ಲಿ ಆ ವರದಿ ನಮ್ಮ ಕೈ ಸೇರಬಹುದು. ಮೊಬಲೈಸೇಷನ್ ಅಡ್ವಾನ್ಸ್ ನಾವು ಕೊಟ್ಟಿದ್ದೇವೆ. ಅದರ ಬಗ್ಗೆ ವಿರೋಧ ಪಕ್ಷದ ನಾಯಕರು ಮಿಸ್ ಅಪ್ರೋಪ್ರಿಯೇಷನ್, ಮಿಸ್ ಅಪ್ಲಿಕೇಷನ್, ಮಿಸ್ ಯೂಟಿಲೈಸೇಷನ್ ಎಂದು ಅನೇಕ

ಶಬ್ದಗಳನ್ನು ಉಪಯೋಗ ಮಾಡಿದ್ದಾರೆ. ನಮಗೂ ಕೂಡ ಅದು ಪ್ರೈಮಾಫೇಸಿ ಎಂದೆನಿಸಿ ನಾವು ಇವತ್ತು ಈ ಒಂದು Entire matter regarding mobilisation advance especially those who have not given bank guarantee. ಬ್ಯಾಂಕ್ ಗ್ಯಾರಂಟಿ ಯಾರು ಕೊಟ್ಟಿಲ್ಲ ಅಂತಹವರ ಮೇಲೆ ವಿಚಾರಣೆ ಮಾಡಬೇಕು. ಅದು ಸಿಓಡಿ ಮುಖಾಂತರ ವಿಚಾರ ಮಾಡಬೇಕೆಂದು ನಾವು ನಿರ್ಧಾರ ತೆಗೆದುಕೊಂಡಿದ್ದೇವೆ. 8 ನೇ ತಾರೀಖಿಗೆ ನಾವು ಈ ಜಿ.ಓ. ಹೊರಡಿಸಿದ್ದೇವೆ. ಅದನ್ನು ಇಲ್ಲಿ ಓದುವ ಅವಶ್ಯಕತೆ ಇಲ್ಲ ಎಂದು ನನಗನ್ನಿಸುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ:- ತಾವು ಒಂದು ಮಾತನ್ನು ಒಪ್ಪಿಕೊಂಡಿದ್ದೀರಿ. ಈಗ ಮಾನ್ಯ ಮುಖ್ಯಮಂತ್ರಿಗಳು ಕಂಪ್ಯೂಟರ್ ವಿಚಾರದಲ್ಲಿ ಸಿಬಿಐ ತನಿಖೆಗೆ ಆರ್ಡರ್ ಮಾಡಿದ್ದಾರೆ. ಅದರಲ್ಲಿ ಐದೂವರೆ ಕೋಟಿ ರೂಪಾಯಿಗಳ ವ್ಯವಹಾರ ಇದೆ. ಅಲ್ಲಿ ಕೊಟ್ಟ ಅಡ್ವಾನ್ಸ್ ಹಣ 1 ಕೋಟಿ 58 ಲಕ್ಷ ರೂಪಾಯಿಗಳು. ಅದಕ್ಕೆ ಸಿಬಿಐ ತನಿಖೆ. ಇಲ್ಲಿ ನಾವು ಏಕೆ ಸಿಬಿಐಗೆ ಕೇಳುತ್ತಿದ್ದೇನೆ? ಇಲ್ಲಿ ಮುಖ್ಯವಾಗಿ 2-3 ವಿಚಾರಗಳಿವೆ. ಒಂದು, ಯಾವ ಕಾಂಟ್ರಾಕ್ಟರಿಗೆ ಅಡ್ವಾನ್ಸ್ ಕೊಟ್ಟಿದ್ದೀರಿ ಅದು ಆಶ್ರಯದಲ್ಲಿ ಇರಲಿ ಅಥವಾ ಯಲಹಂಕ, ಕೆಂಗೇರಿ, ಹುಡ್ಕೋ ಸ್ಕೀಮ್‌ದೇ ಆಗಲಿ, ಅವರು ಬೇರೆ ರಾಜ್ಯದವರು. ಅವರು ಪೂನಾದವರೇ ಇರಬಹುದು, ಆಂಧ್ರಪ್ರದೇಶದವರೇ ಇರಬಹುದು, ಅವರ ಬಗ್ಗೆ ಸಿಓಡಿ ಎನ್‌ಕ್ವಯರಿ ಮಾಡುವುದಕ್ಕಾಗುವುದಿಲ್ಲ. ಯಾವ ಮೆಷಿನರಿಗೆ ಅಡ್ವಾನ್ಸ್ ಮಾಡಿದ್ದೀರಿ, ಅದು ಬ್ರಿಕ್ ಮೌಲ್ಡಿಂಗ್ ಮೆಷಿನರಿ, ಅದೂ ಬರಲಿ. ಒಂದು ವಿಚಾರ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಅವರು 'ನ್ಯೂಸ್ ಟ್ರ್ಯಾಕ್'ಗೆ ಇಂಟರ್‌ವ್ಯೂ ಕೊಡುವಾಗ ಅವರು ಏನು ಹೇಳಿದ್ದಾರೆ? ಅದನ್ನು ವೆರಿಫೈ ಮಾಡಿಕೊಳ್ಳಬೇಕಾಗಿದ್ದರಿಂದ ನಾನು ನಿನ್ನೆ ದಿವಸ ರಾತ್ರಿ ತಮ್ಮ ಕಾನ್ಸೆಪ್ಟ್ ನಾನು ನೋಡಿದೆ. ಅವರು ಏನು ಹೇಳಿದ್ದಾರೆಂದರೆ this is a scandal of the century... ಎಂದು ಹೇಳಿದ್ದಾರೆ, ಆಗ ತಾವು ಮುಖ್ಯಮಂತ್ರಿಗಳಾಗಿರಲಿಲ್ಲ. ಸುಮಾರು 80 ಕೋಟಿ ರೂಪಾಯಿಗಳನ್ನು ಅನ್‌ರೆಕಗ್ನೈಸ್ಡ್, ಯಾರಿಗೆ ಎಕ್ಸ್‌ಪೀರಿಯೆನ್ಸ್ ಇಲ್ಲ ಅಂತಹ ಪಾರ್ಟಿಗಳಿಗೆ ಕೊಟ್ಟಿದ್ದಾರೆಂದು ಅವರೇ ಹೇಳಿದ್ದಾರೆ. ಆದರೆ ಜವಾಬ್ದಾರಿ ಸ್ಥಾನದಲ್ಲಿ ಆಗಲೂ ಇದ್ದಿರಿ. ಹಾಗಾಗಿ ಮುಖ್ಯಮಂತ್ರಿಗಳಾದ ಮೇಲೆ ಕನ್ವೀನ್ಸ್ ಆಗದ ವಿನಹ ಅಂತಹ ಸ್ಟೇಟ್‌ಮೆಂಟ್ ಮಾಡಲಿಕ್ಕೆ ಸಾಧ್ಯವಿಲ್ಲ. ಆದರೆ ಇವತ್ತು ಸಿಓಡಿ ಎನ್‌ಕ್ವಾಯರಿ ಆಗುವುದಕ್ಕೆ ಸಾಧ್ಯವಿಲ್ಲ. Chief Minister himself has said this is a scandal of the century ಇದು uparalleled ಇದೆ. ಹಾಗಾಗಿ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಒತ್ತಾಯ ಮಾಡುತ್ತಿದ್ದೇನೆ. ಸಿಓಡಿ ಎನ್‌ಕ್ವಾಯರಿ ಮಾಡುವುದಕ್ಕೆ ಹೋದರೆ it will be hypocracy you will be trying to shifted the people. ನಿಜವಾಗಿಯೂ ತಾವು ಕ್ಲೀನ್ ಗೌರ್ನಮೆಂಟ್ ಕೊಡುತ್ತೇವೆಂದು ಏನು ಹೇಳುತ್ತಿದ್ದೀರಿ, ಒಪನ್ ಗೌರ್ನಮೆಂಟ್ ಕೊಡುತ್ತೇವೆಂದು ತಾವೇನು ಹೇಳುತ್ತಿದ್ದೀರಿ ಮತ್ತು ಭ್ರಷ್ಟಾಚಾರ ನಿರ್ಮೂಲನ ಮಾಡುತ್ತಿದ್ದೇವೆಂದು ತಾವೇನು ಹೇಳುತ್ತಿದ್ದೀರಿ, ಅದು ಆಗಬೇಕಾದರೆ ತಾವು ಹಿಂದೆ ಹೇಳಿದ್ದನ್ನು ನೆನಪು ಮಾಡಿಕೊಡುತ್ತಿದ್ದೇನೆ. ತಾವು ಸಿಬಿಐ ಎನ್‌ಕ್ವಾಯರಿ ಮಾಡಲಿಲ್ಲವೆಂದರೆ ನಾವು ಬೇರೆ ಅಭಿಪ್ರಾಯಕ್ಕೆ ಬರಬೇಕಾಗುತ್ತದೆ.

ಶ್ರೀ ಗೋಪಿನಾಥ್ ಆರ್. ಸಾಂಡ್ರ:- ಮಾನ್ಯ ಅಧ್ಯಕ್ಷಿಣಿಯವರೆ, ನಾವು ಸಿಓಡಿ ಎನ್‌ಕ್ವಾಯರಿ ಮಾಡಲಿಕ್ಕೆ ನಿರ್ಧರಿಸಿರುವುದಕ್ಕೆ ಕಾರಣಗಳು ಅನೇಕ ಇವೆ. ಒಂದು ಕಾರಣ ನಮ್ಮ ಸಿಓಡಿ ಡಿಪಾರ್ಟ್‌ಮೆಂಟ್‌ನಲ್ಲಿ ಒಳ್ಳೆಯ ಚುರುಕಾಗಿ ಕೆಲಸಮಾಡಿ ಸತ್ಯವನ್ನು ಬಹಿರಂಗಗೊಳಿಸುತ್ತಾರೆನ್ನುವ ಭಾವನೆಯಿಂದ ಅಲ್ಲಿಗೆ ಕೊಟ್ಟಿದ್ದೇವೆ. ಅದು ಸತ್ಯದಿಂದ ನ್ಯಾಯದಿಂದ ನಡೆಯುವಂತಹ ಅಧಿಕಾರಿಗಳಿಗೆ ಆ ಕೆಲಸವನ್ನು ಕೊಡಬೇಕು ಎನ್ನುವ ಉದ್ದೇಶದಿಂದ ಸಿಓಡಿ ಎನ್‌ಕ್ವಾಯರಿಗೆ ಆದೇಶ ಮಾಡಿದ್ದೇವೆ. ಇದು ಸಿಬಿಐಗೆ ಕೊಡುವಂಥ ಕೆಲಸವಲ್ಲವೆಂದು ನನ್ನ ಅನಿಸಿಕೆ.

ಶ್ರೀ ವಾಟಾಳ್ ನಾಗರಾಜ್:- ಕಂಪ್ಯೂಟರ್ ಸಿಬಿಐಗೆ ಏತಕ್ಕೆ ಕೊಟ್ಟಿದ್ದೀರಿ? ಸಿಓಡಿಯಲ್ಲಿರತಕ್ಕವರು ಒಳ್ಳೆಯವರು ಎಂದು ಹೇಳುತ್ತೀರಿ, ಹಾಗಾದರೆ ಸಿಬಿಐನವರು ಒಳ್ಳೆಯವರಲ್ಲವೆ? ಯಾರು ಒಳ್ಳೆಯವರೆಂದು ಹೇಳಿ? ಅಥವಾ ನಿಮ್ಮ ಇಚ್ಛೆ ಬಂದಹಾಗೆ ಮಾಡುತ್ತೀರಾ ಹೇಳಿ.

SRI R.V.DESHPANDE:- When you have said scandal of the century. ಈ ಶತಮಾನದಲ್ಲೇ ನಡೆಯದಂತಹ ಸ್ಕ್ಯಾಂಡಲ್ ನಡೆದಿದೆಯೆಂದು ಆ ಸಮಯದಲ್ಲಿ ಜವಾಬ್ದಾರಿ ಸ್ಥಾನದಲ್ಲಿದ್ದಂತಹ ವ್ಯಕ್ತಿ, ಆ ಶಬ್ಧವನ್ನು ಉಪಯೋಗ ಮಾಡಿದಾಗ, ಕೇವಲ ಮಾನ್ಯ ಬಂಗಾರಪ್ಪನವರ ವಿರುದ್ಧ ಮಾಡಬೇಕೆಂದು ಮಾಡಲಿಲ್ಲವೆಂದರೆ ಆ ಶಬ್ಧವನ್ನು ತಾವು convince ಆಗದ ಹೊರತು ಉಪಯೋಗ ಮಾಡಿಲ್ಲ. ಇದರಲ್ಲಿ ಭ್ರಷ್ಟಾಚಾರವಿದೆ; ಇದರಲ್ಲಿ ಅನ್ಯಾಯವಾಗಿದೆ ಎಂದು ಹೇಳುತ್ತಿದ್ದಾರೆ. ಇವತ್ತು ತಮ್ಮ ಮನಸ್ಸಿನಲ್ಲಿ ಏನಿದೆ ಅದನ್ನಾದರೂ ಹೇಳಿ?

ಶ್ರೀ ವಾಟಾಳ್ ನಾಗರಾಜ್:- ಹಿಂದಿನ ಸರ್ಕಾರದ ವಿರುದ್ಧ ಈಗಿನ ಮುಖ್ಯಮಂತ್ರಿಗಳು ತಾವು ದೊಡ್ಡ ಸಮರವನ್ನೇ ಸಾರಿದ್ದೀರಿ.

ಶ್ರೀ ಎಂ. ವೀರಪ್ಪಮೊಯಿಲಿ:- ನಾವು ಏತಕ್ಕೆ ಸಮರ ಮಾಡೋಣ?

ಶ್ರೀ ವಾಟಾಳ್ ನಾಗರಾಜ್:- ಮೇಜರ್ ಸರ್ಜರಿ ಅಂದರೇನು? ಅವೊತ್ತಿನ ಭಾಷೆಗೂ ಇವತ್ತಿನ ಭಾಷೆಗೂ ಬದಲಾವಣೆ ಇದೆಯೇ?

ಶ್ರೀ ಎಂ. ವೀರಪ್ಪಮೊಯಿಲಿ:- ಅದೇ ಭಾಷೆ.

ಶ್ರೀ ಆರ್.ವಿ. ದೇಶಪಾಂಡೆ:- ಒಂದು ವೇಳೆ ನಿಮಗೆ ಡಿಲ್ಲಿಯಿಂದ ಒತ್ತಡವಿದ್ದರೆ ಅದನ್ನು ಹೇಳಿ. ಸಿಬಿಐ ಎನ್‌ಕ್ವಾಯರಿ ಮಾಡಬಾರದೆಂದು ಹೇಳಿದ್ದಾರೆಯೆ? ನಿಮಗೆ ತೊಂದರೆ ಇದ್ದರೆ ಹೇಳಿ.

ಶ್ರೀ ವಾಟಾಳ್ ನಾಗರಾಜ್:- ಆ ಒಂದು ಧೈರ್ಯದಿಂದ ಮಾತನಾಡಿದ ನಾಲಿಗೆ ಹಿಂದಕ್ಕೆ ಹೋಗುತ್ತಿದೆ. ಕಂಪ್ಯೂಟರ್ ಹಗರಣವನ್ನು ಸಿಬಿಐ ತನಿಖೆಗೆ ಕೊಟ್ಟಿದ್ದೀರಿ. ಇಲ್ಲಿ ಸಿಓಡಿ ಅಧಿಕಾರಿಗಳ ಬಗ್ಗೆ ಪ್ರಶಂಸೆ ಮಾಡುತ್ತಿದ್ದೀರಿ. ಹಾಗಾದರೆ ಅದನ್ನು ಸಿಓಡಿಗೆ ಕೊಡಬೇಕಾಗಿತ್ತು. ನಿಮ್ಮ ಸಿಓಡಿಯ ಅಧಿಕಾರಿಗಳು ಸತ್ಯಹರಿಶ್ಚಂದ್ರರೆಂದು ಹೇಳುತ್ತೀರಿ. ಹಾಗಾದರೆ ಅದನ್ನು ಸಿಬಿಐಗೆ ಏತಕ್ಕೆ ಕೊಟ್ಟಿರಿ? ಅದನ್ನು ಸಿಓಡಿಗೆ ಕೊಡಬೇಕಾಗಿತ್ತು. ನಿಮ್ಮಲ್ಲಿಯೇ ದ್ವಂದ್ವವಿದೆಯೆಂದು ಕಾಣುತ್ತದೆ. ಸಿಬಿಐಗೆ ಕೊಡುವಾಗ ಶಕ್ತಿಯುತವಾಗಿದ್ದಿರಿ, ಹಿಂದಿನ ಸರ್ಕಾರದ ಮೇಲೆ ಪ್ರಚೋದನೆ ಇತ್ತು ಎಂದು ಕಾಣುತ್ತದೆ. ದೆಹಲಿಯಿಂದ ಅಥವಾ ಬೇರೆ ಬೇರೆ ಕಡೆಯಿಂದ ಒತ್ತಡ ಇರಬಹುದು. ಆದ್ದರಿಂದ ಈಗ ಸಿಓಡಿಗೆ ಕೊಡುತ್ತಾ ಇದ್ದೀರಿ ಎಂದು ಕಾಣುತ್ತದೆ.

ಶ್ರೀ ಸಿ. ಬೈರೇಗೌಡ:- ಮಾನ್ಯ ವೀರಪ್ಪಮೊಯಿಲಿಯವರು ಮುಖ್ಯಮಂತ್ರಿಗಳಾದ ತಕ್ಷಣ ಅವರ ಪಕ್ಷದ ವಕ್ತಾರರು ದೆಹಲಿಯಲ್ಲಿ Enough is enough ಎಂದು ಹೇಳಿದ್ದಾರೆ. ಚಂದೂಲಾಲ್ ಚಂದಾರ್ಕರ್ ಅವರು ಹಳೆಯದನ್ನು ವಿಚಾರಣೆ ಮಾಡುವುದಕ್ಕೆ ಹೋಗುವುದಿಲ್ಲ, ಮಾನ್ಯ ಬಂಗಾರಪ್ಪನವರು ಹೋಗಬೇಕಾಗಿತ್ತು ಹೋಗಿದ್ದಾರೆ. ಹೊಸದಾಗಿ ಮುಖ್ಯ ಮಂತ್ರಿಗಳಾಗಬೇಕಾಗಿದ್ದವರು ಆಗಿದ್ದಾರೆಂದು ಹೇಳಿದ್ದಾರೆ.

4.20 ಪಿ.ಎಂ

ಆದ್ದರಿಂದ ನಾವು ಹಳೆಯದ್ದನ್ನು ಕೆದಕುವುದಿಲ್ಲ. ಅದನ್ನೆಲ್ಲಾ ವಿಚಾರಣೆ ಮಾಡುವುದಿಲ್ಲ ಎಂದು ಅವತ್ತೇ ಹೇಳಿದ್ದಾರೆ. ಆದ್ದರಿಂದ ಅವರು ಮೇಲ್ಗಡೆಯಿಂದ ಒತ್ತಡ ಇಲ್ಲವೆಂದರೆ ಯಾರನ್ನು

ನಂಬಿಸುವುದಕ್ಕೆ ಈ ಮಾತನ್ನು ಹೇಳುತ್ತಿದ್ದಾರೆ? ಈಗ ಒತ್ತಡ ಇಲ್ಲವೆಂದರೆ ಯಾರು ನಂಬುತ್ತಾರೆ? ಸಣ್ಣ ಮಗು ಕೂಡ ನಂಬುವುದಿಲ್ಲ. ಅಂಥಾದ್ದರಲ್ಲಿ ನಮ್ಮನ್ನು ನಂಬಿರಿ ಎಂದು ಹೇಳಿದರೆ ಹೇಗೆ ನಂಬಬೇಕಾಗುತ್ತದೆ? ಇದು ಕಾಂಗ್ರೆಸ್ ಪಕ್ಷದ ಸ್ವಂತ ವ್ಯವಹಾರ ಅಲ್ಲ. ಈ ರಾಜ್ಯದಲ್ಲಿ ಆಗಿರತಕ್ಕಂಥ ಅನ್ಯಾಯ ಅಕ್ರಮಗಳು ಏನು ಎನ್ನುವುದನ್ನು ರಾಜ್ಯದ ಜನತೆಯ ಮುಂದೆ ಇಡಬೇಕಾಗುತ್ತದೆ, ಯಾರು ತಪ್ಪಿತಸ್ಥರು ಎನ್ನುವುದು ರಾಜ್ಯದ ಜನತೆಗೆ ಗೊತ್ತಾಗಬೇಕಾಗಿದೆ. ಅಷ್ಟೇ ಅಲ್ಲ, ತಪ್ಪಿತಸ್ಥರಿಗೆ ಉಗ್ರವಾದಂಥ ಶಿಕ್ಷೆ ಕೂಡ ಆಗಬೇಕಾಗಿದೆ. ಮಾತ್ರವಲ್ಲ ಎಷ್ಟು ಹಣ ರಾಜ್ಯದ ಬೊಕ್ಕಸಕ್ಕೆ ಸೇರಬೇಕಾಗಿತ್ತು, ಅದು ಯಾರ‍್ಯಾರ ಜೇಬಿಗೆ ಹೋಗಿದೆ, ಅಲ್ಲಿಂದ ವಾಪಾಸ್ಸು ತೆಗೆದುಕೊಂಡು ಬೊಕ್ಕಸಕ್ಕೆ ವಾಪಾಸ್ಸು ಬರಬೇಕಾಗಿದೆ. ಇದು ನಿಮ್ಮ ಸ್ವಂತ ವ್ಯವಹಾರ ಎಂದು ತಿಳಿಯಬೇಡಿ.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಒಂದು ವಿಷಯವನ್ನು ತರುತ್ತೇನೆ. ಕಂಪ್ಯೂಟರ್ ವಿಷಯ to the best of my knowledge, it was a total transaction of Rs.5 crores 68 lakhs ಅಲ್ಲಿ ಒಂದು ಕೋಟಿ 58 ಲಕ್ಷ ಅಡ್ವಾನ್ಸ್ ಕೊಟ್ಟಿದ್ದರು. ಇಲ್ಲಿ Rs.30 crores were released under Ashraya. I may be corrected by the Hon'ble Minister. And Rs.15 crores were released under Ambedkar Scheme. Totally Rs.45 crores were released. Who is responsible? What is the interest as on today? Where is the money? ಕೆಲವು ಬ್ಯಾಕ್ ಗ್ಯಾರಂಟಿ ಇಲ್ಲ ಎಂದು ಅವರೇ ಒಪ್ಪಿಕೊಂಡಿದ್ದಾರೆ. ಅಷ್ಟೇ ಅಲ್ಲ, 15 ಕೋಟಿಯ ಅಂಬೇಡ್ಕರ್ ಸ್ಕೀಮ್‌ನಲ್ಲಿ, ಮುಂಜಾನೆ ಸಹಿತ ನಾವು ನೀವು ಅಂಬೇಡ್ಕರ್ ಹೆಸರನ್ನು ಎತ್ತಿದ್ದೇವೆ. Out of 29,000 houses.....

ಶ್ರೀ ವಾಟಾಳ್ ನಾಗರಾಜ್:- ಅಂಬೇಡ್ಕರ್ ಸ್ಕೀಮ್‌ನಲ್ಲಿ ಕಟ್ಟಿರುವುದು ಬರೀ ಹತ್ತು ಮನೆಗಳು.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:- ಆಶ್ರಯದಲ್ಲಿ out of 2,29,000 houses, 2 ಲಕ್ಷ 38 ಸಾವಿರ ಮನೆಗಳಲ್ಲಿ 607 ಮನೆಗಳು are completed by now. Out of Rs.44 crores... ಹಣದ ಬಗ್ಗೆ ಚಿಂತನೆಯನ್ನು ಮಾಡುವುದಿಲ್ಲ. COD, I do not think it as proper. I would request you to please order for a CBI enquiry.

ಶ್ರೀ ಎಂ. ವೀರಪ್ಪಮೊಯಿಲಿ:- ಸನ್ಮಾನ್ಯ ಉಪಾಧ್ಯಕ್ಷರೇ, ಈಗ ಬಹಳ ಬಹಳ ಆಲೋಚನಾ ಲಹರಿ ಎಲ್ಲೆ ಮೀರಿ ಹೋಗುತ್ತಿದೆ.

ಶ್ರೀ ವಾಟಾಳ್ ನಾಗರಾಜ್:- ತಾವು ಏನೇನು ಹಿಂದೆ ಹೇಳಿದ್ದೀರಿ, ಅದನ್ನು ಜ್ಞಾಪಿಸುತ್ತಿದ್ದೇವೆ. ಮುಖ್ಯಮಂತ್ರಿಗಳ ಕೆಲಸದ ಒತ್ತಡದಿಂದ ತಾವು ಹೇಳಿರತಕ್ಕಂಥ ಹೇಳಿಕೆಗಳನ್ನು ಮರೆತಿದ್ದೀರಿ. ಅದನ್ನು ಸ್ವಲ್ಪ ಜ್ಞಾಪಿಸುತ್ತಿದ್ದೇವೆ.

ಶ್ರೀ ಸಿ. ಬೈರೇಗೌಡ:- ಆವತ್ತು ಮುಖ್ಯಮಂತ್ರಿಯಾಗುವ ಪ್ರಯತ್ನದಲ್ಲಿದ್ದಿರಿ, ಜ್ಞಾಪಕಕ್ಕೆ ಬಂದಿತ್ತು. ಈಗ ಮುಖ್ಯಮಂತ್ರಿಯಾಗಿದ್ದೀರಿ, ಅದಕ್ಕೆ ತಮಗೆ ಮರೆತು ಹೋಗಿದ್ದೀರಿ. ಆದ್ದರಿಂದ ಜ್ಞಾಪಿಸುತ್ತಿದ್ದೇವೆ.

ಶ್ರೀ ಎಂ. ವೀರಪ್ಪಮೊಯಿಲಿ:- ಆ ಕೆಲಸ ನಾನು ಮಾಡುವುದಿಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್:- ಮುಖ್ಯಮಂತ್ರಿಗಳ ಸ್ಥಾನಪಲ್ಲಟವೇ ತಮ್ಮ ಮೇಜರ್ ಆಪರೇಶನ್ ಎಂದು ಈಗ ಅನ್ನಿಸ್ತಾ ಇದೆ.

ಶ್ರೀ ಎಂ. ವೀರಪ್ಪಮೊಯಿಲಿ:- ನಾನು ಈಗಲೂ ಮಾಡುತ್ತಿರುವುದು ನನ್ನ ಮೇಲೆ ನಾನೇ ಮೇಜರ್ ಸರ್ಜರಿ. I am doing it. I have not stopped the major surgery. ಈ ಕಾಂಟೆಸ್ಟ್‌ನ್ನು ತಾವು ಅರ್ಥಮಾಡಿಕೊಳ್ಳಲಿಲ್ಲ. ತಾವು ತಮ್ಮ ದೃಷ್ಟಿಯಲ್ಲಿ ಆಲೋಚನೆ ಮಾಡುತ್ತಿದ್ದೀರಿ. ನಾನು ನನ್ನ ದೃಷ್ಟಿಯಲ್ಲಿ ಹೇಳಿಕೆ ಕೊಟ್ಟವನು. ಆದ್ದರಿಂದ ಮೇಜರ್ ಸರ್ಜರಿ ಅರ್ಥ ಏನು ಎಂದು ನನಗೆ ಗೊತ್ತಿದೆಯೇ ಹೊರತು ತಮಗೆ ಗೊತ್ತಿಲ್ಲ. ಮೇಜರ್ ಸರ್ಜರಿ ಏನೂ ಎಂದು ನಾನು ಹೇಳಿದ್ದೇನೆ. ಅವರು ನಾಯಕ ಸ್ಥಾನದಿಂದ ಹೋಗುವುದು ಮೇಜರ್ ಸರ್ಜರಿ ಅಲ್ಲ. The question is, for the whole administration, political and administrative major surgery will have to be conducted, and that's why I was appointed on the Cabinet Sub-Committee on austerity and I gave a reform. After I gave a statement at Hubli/Mysore that means it was not exactly a censure on the then Chief Minister or the Government, but what I am telling you is, certain accumulated affects you know certain things which have happened in administration, I may be responsible or somebody else, that is not the question even now, the question is certain major surgery is necessary. ಮೊದಲು ನನ್ನನ್ನು ಕೇಳಿದಾಗ ನಾನು ಹೇಳಿದ್ದೆ My major surgery is going on. I have not stopped that kind of a major surgery. Even as Chief Minister today, I have to conduct major surgery on myself and my administration. I have not said that it is a one time affair. ಆದ್ದರಿಂದ ಇದಕ್ಕೆ ಏನೋ ತಾವು ಅರ್ಥ ಕಲ್ಪಿಸಿಕೊಂಡರೆ ಹೇಗೆ? ಮೇಜರ್ ಸರ್ಜರಿ ಹಿಂದಿನ ಮುಖ್ಯಮಂತ್ರಿಗಳ ಮೇಲೆ ಮಾಡುತ್ತೇನೆ ಎಂದು ನಾನು ಹೇಳಿಲ್ಲ. ಆ ಸ್ಟೇಟ್‌ಮೆಂಟ್‌ನ್ನು ತಾವು ತಂದುನೋಡಿ. I said particular on administration. It is a more objective. ಹಾಗಾದರೆ ಏನಿಲ್ಲ, ನಾವೆಲ್ಲ ಸಭ್ಯರಾಗಿದ್ದೇವೆಂದಲ್ಲ. ನಮ್ಮ ಕರ್ನಾಟಕ ರಾಜ್ಯದ ಆಡಳಿತ ಬಹಳ ಚೆನ್ನಾಗಿ ಇದೆಯೆಂದು ಕರ್ನಾಟಕ ರಾಜ್ಯದ ಯಾವ ಮುಖ್ಯಮಂತ್ರಿ ಯಾವ ಸಂದರ್ಭದಲ್ಲೂ ಹೇಳುವಹಾಗಿಲ್ಲ. ಅಪ್ರಮಾಣಿಕರಿದ್ದರೆ ಹೇಳಬಹುದು. Regarding hypocrisy, that will be epoch. I do not want to be a hypocrite.

ಪ್ರಾಮಾಣಿಕವಾಗಿ, Yes I am doing surgery on everyday, every minute I conduct a major sargery on my administration. It is not complete. I am not perfected. I am on the way. ಅದನ್ನು ಹೇಳಿದ್ದೇವೆಯೇ ಹೊರತು ಅನ್ಯಥಾ ಇಲ್ಲ. ಮತ್ತೆ ತಾವು ಹೇಳಿದ್ದೀರಿ. ಆಶ್ರಯ ಇದರ ಕಾನ್ಟೆಸ್ಟ್ ತಾವು ಓದಿದ್ದೀರೋ ಇಲ್ಲವೋ. What I said is, ಇದು ನಾನು ಈಗ ಮುಖ್ಯಮಂತ್ರಿಯಾದ ಮೇಲೆ ಹೇಳಿದ್ದಲ್ಲ. Even my colleagues have been told at that time when I was a Minister. Ashraya is a good programme. Ashraya is a very good programme and it is a very ambitious programme. ಅದು ಸರಿಯೇ. ಪ್ರಶ್ನೆ ಏನೆಂದರೆ, the manner in which we wanted to implement that can be a scandal of the century ಎಂದು ಅದನ್ನು ಫಾರ್ಮುಲೇಟ್ ಮಾಡುವಾಗಲೇ ನಾನು ಹೇಳಿದ್ದೇನೆ. ನಮ್ಮ ಕೊಲಿಗ್ಸ್ ಹತ್ತಿರ ನಾನು ಹೇಳಿದ್ದೆ. ಒಂದನೆಯದು ಈ ಫಾರ್ಮನಲ್ಲಿ ಮಾಡಿದರೆ, ಅದು ಪ್ರಾಕ್ಟಿಕಲ್ ಆಗಲಿಕ್ಕಿಲ್ಲ. ಎರಡನೆಯದು, ಆದರಿಂದ ಸಾಕಷ್ಟು ಅನಾಹುತವಾಗಬಹುದು. ಸರ್ಕಾರಕ್ಕೆ ಕೆಟ್ಟ ಹೆಸರು ಬರಬಹುದು. This kind of a warning I think I have given when I was a Minister. That's why I still hold the manner in which we have done that kind of.. Ashraya no doubt, it is an experiment. May be it must have been done with the best intention. ಆದರೆ, ಪ್ರಶ್ನೆ ಏನೆಂದರೆ, ನಾಳೆ ಅದರಿಂದ ಸಾಕಷ್ಟು

ದುರುಪಯೋಗವಾಗುವುದಕ್ಕೆ ಸಾಧ್ಯವಿದೆ. ಆ ಕಾರ್ಯಕ್ರಮ ಯಶಸ್ವಿಯಾಗಲಿಕ್ಕೆ ಇಲ್ಲ; ಪರಿಣಾಮಕಾರಿಯಾಗುವುದಿಲ್ಲ, ವ್ಯವಹಾರಿಕವಾಗಿ ಆಗುವುದಿಲ್ಲ. ಈ ಮಾತು ಇವತ್ತಲ್ಲ, ಆ ಫಾರ್ಮುಲೇಟ್ ಮಾಡುವಾಗಲೇ ನಾನು ಹೇಳಿದ್ದೆ. All my colleagues, I have told them with my frank opinion and it has come true today. ಆದರೆ ದೈವವಶಾತ್, ಸಾಕಷ್ಟು ಬೇಗ ಇದನ್ನು ಗುರುತಿಸತಕ್ಕ ಕೆಲಸ ಮಾಡಿದ್ದೇವೆ. ಆ ಪ್ರಾಮಾಣಿಕತೆಯನ್ನು ತಾವು ಖಂಡಿತವಾಗಿ ಒಪ್ಪಬೇಕಾಗುತ್ತದೆ. ಇವತ್ತು ಎಲ್ಲಿ ಏನಾಗಿದೆ, ಅದು ತಮಗೆ ಗೊತ್ತಿದೆ, ಈಗಾಗಲೇ ಅವರು ಚೆನ್ನಾಗಿ ಹೇಳಿಕೆ ಮಾಡುತ್ತಿದ್ದಾರೆ, ಅವರು ಸ್ಪಷ್ಟವಾಗಿ ಹೇಳಿದ್ದಾರೆ. ನಾವು ಹೇಳುತ್ತಾ ಇದ್ದೇವೆ. 2,48,000 ಮನೆಗಳನ್ನು ಕಟ್ಟಿಸಿಕೊಡುತ್ತೇವೆ ಎಂದು ಏನು ವಚನಕೊಟ್ಟಿದ್ದೇವೆ, ಅದನ್ನು ನಡೆಸುತ್ತೇವೆ. ಸಮಯ ಸ್ವಲ್ಪ ಮುಂದೆ ಹೋಗಬಹುದು. ಇದರಲ್ಲಿ ಬೇರೆ ಪ್ರಶ್ನೆಯೇ ಇಲ್ಲ. ಯಾವಾಗ ಎಂದು ಸಚಿವರು ಹೇಳುತ್ತಾರೆ. We are committed to that.

SRI D.B.CHANDRE GOWDA:- That was a programme for the year.

Sri M.VEERAPPA MOILY:- No, No, It is not for the year. ಇದು ಎರಡು ವರ್ಷದ್ದು, 1991-92, 1992-93ರ ಕಾರ್ಯಕ್ರಮ. ಹೌದು, ಅದು ತಡವಾಗಿದೆ. ನಾವೇನು ಹೊಸ ಪ್ರಯೋಗ ಮಾಡಿದ್ದೇವೆ, ಖಂಡಿತ ಅದು ಯಶಸ್ವಿಯಾಗಿಲ್ಲ. ನಾವು ನೀರಿಕ್ಷಿಸಿದ ಮಟ್ಟಕ್ಕೆ ಯಶಸ್ವಿಯಾಗಿಲ್ಲ. ಇದನ್ನು ಸಜ್ಜುಗೊಳಿಸತಕ್ಕ ರೀತಿಯಲ್ಲಿ ಎಲ್ಲಾ ಕಾರ್ಯಕ್ರಮಗಳನ್ನು ಮಾಡಿದ್ದೇವೆ. ನಾವು ನೂರು ದಿವಸಗಳ ಕಾರ್ಯಕ್ರಮ ಮಾಡಿದ್ದೇವೆ. ಪುನಃ ಒಂದು ಕಾರ್ಯಕ್ರಮ ಹಾಕುತ್ತೇವೆ. We are committed to give houses to these people. ಈ ಆಶ್ರಯ ಯೋಜನೆಯಲ್ಲಿ ನಿವೇಶನ ಕೊಡುವ ಮಟ್ಟಕ್ಕೆ ಸಾಕಷ್ಟು ಯಶಸ್ವಿಯಾಗಿದೆ. That part you must agree. ಮನೆಗಳನ್ನು ಕಟ್ಟಿಕೊಡತಕ್ಕ ಹೊಸ ಪ್ರಯೋಗ ಮಾಡುವುದಕ್ಕೆ ಹೊರಟೆವು, ಇದರಲ್ಲಿ ಸ್ವಲ್ಪ ಜಾರಿದ್ದೇವೆ. ಹೌದು, ಈಗ ಯಾರು ತಪ್ಪಿತಸ್ಥರು, ಎಲ್ಲಿ ತೊಂದರೆಯಾಗಿದೆ ಎಂಬ ವಿಚಾರ ನಮ್ಮ ಮುಂದೆ ಇದೆ. ಇದನ್ನು ನಾವು ವಿಚಾರಣೆ ಮಾಡುವುದಿಲ್ಲವೆಂದು ಹೇಳಲಿಲ್ಲ. ಪ್ರಶ್ನೆ ಏನೆಂದರೆ, ತಾವು ಹೇಳುತ್ತಿದ್ದೀರಿ, ಸಿ.ಬಿ.ಐ.ನವರು ಮಾಡಬೇಕು. ನಾವು ಈಗಾಗಲೇ ಸಚಿವಸಂಪುಟದಲ್ಲಿ ತೀರ್ಮಾನ ಮಾಡಿ, ಸಿ.ಓ.ಡಿ. ಎನ್‌ಕ್ವೈರಿಗೆ ಆರ್ಡರ್ ಮಾಡಿದ್ದೇವೆ. ಇದು ಯಾರಿಗೂ, victimise ಮಾಡತಕ್ಕ ದೃಷ್ಟಿಯಲ್ಲಿ ನಾವಿಲ್ಲ. ಜನರಲ್ಲಿ ಸರ್ಕಾರದ ಬಗ್ಗೆ, ನಮ್ಮ ಕಾರ್ಯಕ್ರಮದ ಬಗ್ಗೆ, ಪ್ರಾಮಾಣಿಕತೆ ಎದ್ದು ಕಾಣಬೇಕು. ಈ ದೃಷ್ಟಿಯಿಂದ ಮಾಡಿದ್ದೇವೆ. ಸಿ.ಬಿ.ಐ.ಗೆ ಕೊಡಿ ಎಂದು ತಾವು ಹೇಳುತ್ತೀರಿ, ನಾವು ಎಲ್ಲಾ ವಿಚಾರಗಳನ್ನೂ ಸಿ.ಬಿ.ಐ.ಗೆ ಕೊಟ್ಟರೆ, ಸಿ.ಬಿ.ಐ.ನವರ ಹೆಡ್‌ಕ್ವಾರ್ಟರ್ಸ್‌ನ್ನು ಬೆಂಗಳೂರಿನಲ್ಲಿಯೇ ಮಾಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:- ತಿಮಿಂಗಿಲ ತೆಗೆದುಕೊಂಡು ಹೋಗಿ ಸಿ.ಬಿ.ಐ.ಗೆ ಕೊಡುವುದು ಬಿಟ್ಟು, ಮೀನು ತೆಗೆದುಕೊಂಡು ಹೋಗಿ ಸಿ.ಬಿ.ಐ.ಗೆ ಕೊಟ್ಟಿದ್ದೀರಿ.

ಶ್ರೀ ಎಂ. ವೀರಪ್ಪಮೊಯಿಲಿ:- ನಾನು ಹೇಳುತ್ತೇನೆ. ತಾವೆಲ್ಲರೂ ಹೇಳಿದ್ದನ್ನು ನಾವು ಬಹಳ ಸಮಾಧಾನವಾಗಿ ಕೇಳಿದ್ದೇವೆ. ಮಂತ್ರಿಗಳೂ ಕೇಳಿದ್ದಾರೆ, ನಾನೂ ಕೇಳಿದ್ದೇನೆ. ಆದ್ದರಿಂದ, ದಯಮಾಡಿ ನಮ್ಮ ಮಾತೂ ಸ್ವಲ್ಪ ಸಹನೆಯಿಂದ ಕೇಳಿ. ಸಿ.ಬಿ.ಐ.ಗೆ ಅಧಿಕಾರಿಗಳು ಯಾರು, ನಮ್ಮ ಅಧಿಕಾರಿಗಳೇ. ನಮ್ಮ ಅಧಿಕಾರಿಗಳು ಅನೇಕ ಜನ ಡೆಪ್ಯುಟೇಷನ್‌ನಲ್ಲಿ ಸಿಬಿಐ ನಲ್ಲಿದ್ದಾರೆ. ಅವರೇನು ಆಕಾಶದಿಂದ, ಸ್ವರ್ಗದಿಂದ ಬಂದವರಲ್ಲ. ಅವರೂ ಪೋಲೀಸ್ ಅಧಿಕಾರಿಗಳೇ.

ಶ್ರೀ ವಾಟಾಳ್ ನಾಗರಾಜ್:- ನೀವು ಏಕೆ ಈ ರೀತಿ ಹೇಳುತ್ತಿದ್ದೀರಿ. ಏಕೆ ಇಷ್ಟೊಂದು ಬದಲಾವಣೆಯಾಗುತ್ತಿದ್ದೀರಿ. ನೀವೇ ಅವರನ್ನು ಸ್ವರ್ಗಕ್ಕೆ ಹುಡುಕಿಕೊಂಡು ಹೋಗಿದ್ದಿರಿ. ಸಿ.ಬಿ.ಐ.ನವರನ್ನು ಹುಡುಕಿಕೊಂಡು ಹೋಗಿದ್ದವರು ಯಾರು, ನೀವೇ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ನಿಮ್ಮ ಬಗ್ಗೆ ನಮಗೆ ಬಹಳ ಗೌರವ ಇದೆ, ನೀವು ಬಹಳ ಎಡವುತ್ತಿದ್ದೀರಿ. ನಾನು ಏನೂ ಮಾತನಾಡುವುದಿಲ್ಲ. ಸಿ.ಬಿ.ಐ. ಬಗ್ಗೆ, ರಾಜ್ಯದ ಸಿ.ಓ.ಡಿ ಬಗ್ಗೆ 83ರ ಏಪ್ರಿಲ್‌ನಿಂದ 89ರವರೆಗೆ ತಾವು ಈ ಸಾಲಿನಲ್ಲಿ ಕುಳಿತಿದ್ದಾಗ ಸಿ.ಬಿ.ಐ. ಬಗ್ಗೆ ಏನು ಹೇಳಿದ್ದೀರಿ ಎಂಬುದನ್ನು ನೀವೇ ರೆಕಾರ್ಡ್ ತರಿಸಿಕೊಂಡು ನೋಡಿ.

ಶ್ರೀ ಎಂ. ವೀರಪ್ಪಮೊಯಿಲಿ:- ಸಿ.ಬಿ.ಐ. ಬಗ್ಗೆ ಆಗಿನ ಅಭಿಪ್ರಾಯಕ್ಕೂ, ಈಗಿನ ಅಭಿಪ್ರಾಯಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಸಿ.ಬಿ.ಐ. ಉತ್ತಮವಾದಂಥ ಸಂಸ್ಥೆ, ಈ ದೇಶದ ಜನ ಒಪ್ಪಿದ್ದಾರೆ, ನಾವೂ ಒಪ್ಪಿದ್ದೇವೆ, ಆ ವಿಶ್ವಾಸದಿಂದಲೇ ನಾವು ಸಿ.ಬಿ.ಐ.ಗೆ ಬ್ಲಾಂಕೆಟ್ ಪರ್ಮಿಷನ್ ಕೊಟ್ಟಿದ್ದೇವೆ, ವಿಶ್ವಾಸದಿಂದಲೇ ಕೊಟ್ಟಿದ್ದೇವೆ, ಇವತ್ತಿಗೂ ಆ ವಿಶ್ವಾಸ ಉಳಿದಿದೆ. ಪ್ರಶ್ನೆ ಸಿ.ಬಿ.ಐ. ಏನು, ಸಿ.ಓ.ಡಿ. ಏನು, ಮಾಡಬೇಕು ಕೆಲವು ವಿಚಾರದಲ್ಲಿ ಸಿ.ಬಿ.ಐ. ಎನ್‌ಕ್ವೈರಿ ಕೂಡಾ ಮಾಡಬೇಕು, ಏತಕ್ಕೆಂದರೆ ಕ್ಲಾಸಿಕ್ ಕಂಪ್ಯೂಟರ್ ವಿಚಾರ ತಮಗೆ ಗೊತ್ತಿದೆ, ಅದರಲ್ಲಿ ಕಂಪ್ಯೂಟರ್ಸ್‌ನ್ನು ಆಮದು ಮಾಡತಕ್ಕಂಥ ವಿಚಾರ ಇದೆ, ಫಾರಿನ್ ಎಕ್ಸ್‌ಚೇಂಜ್ ವಿಚಾರ ಇದೆ, ಅದರಲ್ಲಿ ಕೆಲವು ಗ್ಯಾರಂಟಿ ಕೊಟ್ಟಂಥ ವಿಚಾರ ಇದೆ, ಇಂಪೋರ್ಟ್‌ಗೆ ಗ್ಯಾರಂಟಿ ಕೊಟ್ಟಂಥ ವಿಚಾರ ಇದೆ, ಅದನ್ನು ನಾವು ಇಲ್ಲಿ ಕುಳಿತುಕೊಂಡು ಮಾಡುವುದಕ್ಕೆ ಆಗುವುದಿಲ್ಲ. ಇದು ಹಣದ ಗಾತ್ರ ಅಲ್ಲ, ವಿಚಾರದ ಗಂಭೀರತೆ ಮತ್ತು ವ್ಯಾಪ್ತಿಯನ್ನು ಹೊಂದಿಕೊಂಡು. ನಾವು ಇದನ್ನು ಸಿ.ಬಿ.ಐ.ಗೆ ಕೊಟ್ಟಿದ್ದೇವೆ. ಸಿ.ಓ.ಡಿ.ಯಲ್ಲಿ ಒಳ್ಳೆಯ ಅಧಿಕಾರಿಗಳು ಇದ್ದಾರೆ, ರೇವಣ್ಣಸಿದ್ಧಯ್ಯ ಒಳ್ಳೆಯ ಆಫೀಸರ್ ಅಲ್ಲವೇ? ಯಾವ ಸಿ.ಬಿ.ಐ. ಆಫೀಸರ್‌ಗೆ ಅವರು ಕಡಿಮೆ ಇದ್ದಾರೆ....

ಶ್ರೀ ವಾಟಾಳ್ ನಾಗರಾಜ್:- ಆಫೀಸರ್ ಪ್ರಶ್ನೆ ಇಲ್ಲಿ ಬರುತ್ತಿಲ್ಲ, ಯಾರೋ ಒಬ್ಬರು ಆಫೀಸರ್ ಇರುತ್ತಾರೆ ಬಿಡಿ. ಅಧಿಕಾರಿಗಳ ಬಗ್ಗೆ ಪ್ರಶಂಸೆ ಆಮೇಲೆ ಮಾಡೋಣ.

ಶ್ರೀ ಎಂ. ವೀರಪ್ಪಮೊಯಿಲಿ:- ಪ್ರಶಂಸೆ ಮಾಡುವವರ ಬಗ್ಗೆ ಮಾಡಲೇ ಬೇಕು ಏತಕ್ಕೆ ಬೇಡ, ಅಲ್ಲ ಎಂದು ತಾವು ಹೇಳುತ್ತೀರಾ?

ಶ್ರೀ ವಾಟಾಳ್ ನಾಗರಾಜ್:- ಮಾಡಿ ಮಾಡಿ ಸಂತೋಷ, ನಾವು ಯಾವ ಅಧಿಕಾರಿಗಳನ್ನೂ ಇಲ್ಲಿ ವಿರೋಧ ಮಾಡುತ್ತಿಲ್ಲ, ಸಿ.ಓ.ಡಿ. ಬಗ್ಗೆ ಇಲ್ಲಿ ಚರ್ಚೆ ನಡೆಯುತ್ತಿಲ್ಲ. ಸಿ.ಓ.ಡಿ. ಹೇಗಿದೆ, ಆ ಅಧಿಕಾರಿಗಳು ಯಾರು ಎಂದು ಚರ್ಚೆ ನಡೆಯುತ್ತಿಲ್ಲ, ಸಿ.ಬಿ.ಐ. ಬಗ್ಗೆ ಚರ್ಚೆ ನಡೆಯುತ್ತಿಲ್ಲ, ತಮ್ಮಲ್ಲಿ ನಾವು ಅತ್ಯಂತ ಕಳಕಳಿಯಿಂದ ಮನವಿ ಮಾಡುವುದು ಏನೆಂದರೆ ಹಿಂದಿದ್ದ ತಮ್ಮ ನಿಲುವಿಗೂ, ಈಗಿನ ನಿಲುವಿಗೂ ಬಹಳ ಅಜಗಜಾಂತರ ಇದೆ ಬದಲಾವಣೆಯಾಗುತ್ತಿದ್ದೀರಿ, ಅದನ್ನು ನಿಮ್ಮ ಆತ್ಮ ಸಾಕ್ಷಿಗೆ ಬಿಟ್ಟಿದ್ದೇವೆ.

ಶ್ರೀ ಎಂ. ವೀರಪ್ಪಮೊಯಿಲಿ:- ನಮ್ಮ ಆತ್ಮ ಸಾಕ್ಷಿಯಾಗಿ ಹೇಳುವುದು ಇದ್ದರೆ ಈ ವಿಚಾರ ಸಿ.ಓ.ಡಿ.ಗೆ ಎನ್‌ಕ್ವೈರಿ ಮಾಡಲಿಕ್ಕೆ ಸಾಧ್ಯ ಇದೆ, ಸಾಧ್ಯತೆ ಇದ್ದುದರಿಂದಲೇ ಆ ವಿಚಾರ ಮಾಡಿದ್ದೇವೆ, ಏತಕ್ಕೆಂದರೆ ಕಂಟ್ರಾಕ್ಟರ್ ಪೂನಾ ಹೈದರಾಬಾದ್‌ನಲ್ಲಿದ್ದಾರೆ ಎಂದು ಹೇಳಿದ್ದೀರಿ. ಆದರೆ ಕಂಟ್ರಾಕ್ಟರ್ಸ್ ಸೈನ್ ಮಾಡಿದ್ದು ಎಲ್ಲಿ ಬೆಂಗಳೂರಿನಲ್ಲಿ.

ಶ್ರೀ ವಾಟಾಳ್ ನಾಗರಾಜ್:- ಕಂಪ್ಯೂಟರ್ ಸೈನ್ ಮಾಡಿದ್ದೂ ಇದೇ ಊರಿನಲ್ಲಿ.

ಶ್ರೀ ಎಂ. ವೀರಪ್ಪಮೊಯಿಲಿ:- ಕಂಪ್ಯೂಟರ್‌ನಲ್ಲಿ ಇಂಪೋರ್ಟ್ ಕಾಂಪೋನೆಂಟ್ ಇದೆ, ಫಾರಿನ್ ಎಕ್ಸ್‌ಚೇಂಜ್ ವಿಚಾರ ಇದೆ. Can you convince me that C.O.D. can do this Job? ಆದರೆ ಕಂಪ್ಯೂಟರ್ ಬಗ್ಗೆ ಹೇಳುವುದು ಇದ್ದರೆ I am not convinced that C.O.D. can do that kind of Job and that kind dimensions ಮತ್ತೆ ಹೈಕೋರ್ಟ್ ಜಡ್ಜ್‌ಮೆಂಟ್ ಕೂಡ ಬಂದಿದೆ. ಆಶ್ರಯ ಯೋಜನೆ ಬಗ್ಗೆ ಯಾರಿಗೆ ಮೊಬಿಲೈಸೇಷನ್ ಅಡ್ವಾನ್ಸ್ ಕೊಟ್ಟಿದ್ದೇವೆ,

ಆದರ ಬಗ್ಗೆ ಸಿ.ಒ.ಡಿ. ಸರಿಯಾಗಿ ತನಿಖೆ ಮಾಡುವುದಕ್ಕೆ ಸಾಧ್ಯ ಇದೆ, ಸಿ.ಒ.ಡಿ. ಎನ್‌ಕ್ವೈರಿ ಮಾಡಲಿ, ಒಂದು ವೇಳೆ ಸಿ.ಒ.ಡಿ.ಯಿಂದ ತನಿಖೆ ಮಾಡುವುದಕ್ಕೆ ಸಾಧ್ಯ ಇಲ್ಲ ಎಂಬ ವಿಚಾರ ನಮಗೆ ಮನವರಿಕೆಯಾದರೆ ಅಥವ ತಮಗೆ ಮನವರಿಕೆಯಾದರೆ ಆಮೇಲೆ ಸಿ.ಬಿ.ಐ. ವಿಚಾರ ನೋಡೋಣ, ಕಡೇ ಪಕ್ಷ ಒಂದು ಪ್ರಾಸ್ತಾವಿಕ, ಪ್ರಿಲಿಮಿನರಿ ಇನ್‌ವೆಸ್ಟಿಗೇಷನ್ ಸಿ.ಒ.ಡಿ.ಯವರು ಮಾಡಲಿ, ಸಪೋಸ್ ಪ್ರಿಲಿಮಿನರಿ ಇನ್‌ವೆಸ್ಟಿಗೇಷನ್ ಮೇಲೆ ಆದರ ಗಂಭೀರತೆಗೆ ಹೊಂದಿಕೊಂಡು ಸಿ.ಒ.ಡಿ. ತನಿಖೆ ಮುಂದುವರಿಸುವುದು ಅಸಾಧ್ಯ, ಆದು ತೊಂದರೆ ಇದೆ ಎಂದು ಹೇಳಿದರೆ ಸಿ.ಬಿ.ಐ.ಗೆ ಕೊಡುವುದಕ್ಕೆ ನಮ್ಮದೇನೂ ಅಡ್ಡಿ ಇಲ್ಲ, We are an open government. I would like to entrust Premilinary Investigation to C.O.D. ಸಿ.ಒ.ಡಿ. ತನಿಖೆ ಮಾಡಿದಮೇಲೆ, ಒಂದು ವೇಳೆ ಆದರ ಗಾಂಭೀರ್ಯತೆಯ ಪ್ರಶ್ನೆಯನ್ನು ಹೊಂದಿಕೊಂಡು ಇಲ್ಲ, ಇದು ಸಿ.ಬಿ.ಐ.ಗೆ ಕೊಡಬೇಕಾದ ವಿಚಾರ ಎಂದು ಸರಕಾರಕ್ಕೆ ಮನವರಿಕೆಯಾದರೆ, ತಮಗೂ ಮನವರಿಕೆಯಾದರೆ I am ready to entrust it to C.B.I.

ಶ್ರೀ ಆರ್.ವಿ. ದೇಶಪಾಂಡೆ:- ನಮಗೆ ಮನವರಿಕೆಯಾದ ಮೇಲೆಯೇ ತಮಗೆ ಸಿ.ಬಿ.ಐ. ಎನ್‌ಕ್ವೈರಿ ಮಾಡುವುದಕ್ಕೆ ಹೇಳುತ್ತಿದ್ದೇವೆ. ಈಗ ತಾವೂ ಒಪ್ಪಿಕೊಳ್ಳುತ್ತಿದ್ದೀರಿ, ಕಾಂಟ್ರಾಕ್ಟರ್ಸ್ ಔಟ್ ಸೈಡ್ ದಿ ಸ್ಟೇಟ್‌ನವರು, crores of Rupees have been given. 5 ಲಕ್ಷ 10 ಲಕ್ಷ 2 ಲಕ್ಷ ಅಲ್ಲ. Crores of Rupees mobilisation, advance unsecured advance ಆಗಿ ಕೊಡಲಾಗಿದೆ. ತಾವು ಏನೂ ಸೀರಿಯಸ್‌ನೆಸ್ ಇಲ್ಲ ಎಂದು ಹೇಳುತ್ತಿದ್ದೀರಿ, ಇನ್ನೇನು ಸೀರಿಯಸ್‌ನೆಸ್ ಬೇಕು. ಸ್ಕ್ಯಾಂಡಲ್ ಆಫ್ ದಿ ಸೆಂಚುರಿ ಎಂದು ತಾವು ಹೇಗೆ ಹೇಳಿದಿರಿ. When you say scandal of the century what is the meaning. It means the granite scandle, DLF scandal, Computer scandle they are minor. According to you when this becomes a scandal of the century or 2000 AD other scandles become minor. Why you are not giving that importance today, What is the reason? When you said scandal of the century, according to you the granite scandal or the DLF scandal or the computer scandal all scandals are minor but the Ashraya is important to you than others, Why you are not trying to stick on to your statement.

SRI M.VEERAPPA MOILY:- Ashraya is very important for us and Ashraya is very important for the weaker sections. That you should not forget.

ಶ್ರೀ ವಾಟಾಳ್ ನಾಗರಾಜ್:- ಅದರ ಬಗ್ಗೆ ನಮಗೂ ನಂಬಿಕೆ ಇದೆ.

ಶ್ರೀ ಎಂ. ವೀರಪ್ಪಮೊಯಿಲಿ:- ಆಶ್ರಯ ಬಗ್ಗೆ ನಮಗೆ ಪೂರ್ತಿ ವಿಶ್ವಾಸ ಇದೆ. ಆದು ಜನಗಳಿಗೆ ಸಂಬಂಧಪಟ್ಟ ವಿಚಾರ. ಆದನ್ನು ಅನುಷ್ಠಾನ ಮಾಡಬೇಕು. ಅನುಷ್ಠಾನದ ಮಧ್ಯದಲ್ಲಿ ನಮಗೆ ಅಡೆತಡೆ ಬರಬಾರದು. I do not want any hinderance to come. I want that should be implemented properly. Let the COD make a preliminary enquiry. Why you and myself make any politics out of it. It is not politics. ಇಲ್ಲಿ ಸರಿಯಾದಂತಹ ನ್ಯಾಯವಾದಂಥ ತನಿಖೆ ಆಗಬೇಕು ನಾನು ಒಪ್ಪುತ್ತೇನೆ. ಸರಿಯಾದ ತನಿಖೆ ಆಗಬೇಕು. ಕ್ಲಾಸಿಕ್ ಕಂಪ್ಯೂಟರ್ ವಿಚಾರ ಬಹಳ ಗಂಭೀರವಾದಂತಹ ವಿಚಾರ. ಆಶ್ರಯ ಪ್ರಕರಣ ಕಡಿಮೆ ಗಂಭೀರ ಎಂದಲ್ಲ. I am attaching equal importance to this also. The question is choosing the agency for the present. ಕ್ಲಾಸಿಕ್ ಕಂಪ್ಯೂಟರ್‌ಗೂ ಇದಕ್ಕೂ ಇರುವ ವ್ಯತ್ಯಾಸವನ್ನು ನಾನು ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ a preliminary enquiry is not necessary to Classic Computers because the High

Court has already analysed and given a judgement. Otherwise, I would have entrusted the Preliminary Enquiry on Classic Computer to COD. It was not found necessary because High Court has already given a judgement on this and what else I can do about it? So the preliminary enquiry report is already available, to us as the High Court has done it. So the next step was not the COD but the CBI. That is predominantly... ಇದರಲ್ಲಿ ದಯಮಾಡಿ ದೇಶಪಾಂಡೆಯವರೇ ರಾಜಕೀಯ ಮಾಡಲಿಕ್ಕೆ ನೀವು ಹೋಗುವುದು ಬೇಡ ನಾವು ಹೋಗುವುದು ಬೇಡ.

ಶ್ರೀ ಡಿ.ಬಿ. ಚಂದ್ರೇಗೌಡ:- ಒಂದು ನಿಮಿಷ. ಹೈಕೋರ್ಟ್‌ನಲ್ಲಿ ತೀರ್ಮಾನ ಆಗಿದೆ ಎನ್ನತಕ್ಕಂಥಾದ್ದು ತಮಗೆ ಗೊತ್ತಾದ ಮೇಲೆ you should have taken steps to see that Criminal Case is filed? ಮತ್ತೆ ಅದರ ಮೇಲೆ ಏನು ಎನ್‌ಕ್ವೈರಿ? As against High Court judgement. ಇಲ್ಲಿ ನಮಗೆ ಬೇಕಾಗಿರತಕ್ಕಂಥಾದ್ದು ಆಶ್ರಯ ಸ್ಕೀಮ್‌ನಲ್ಲಿ ನಡೆದಿರತಕ್ಕಂಥ ದೊಡ್ಡ ಪ್ರಮಾಣದ ಹಗರಣ ತನಿಖೆ ಆಗಬೇಕು. ತನಿಖೆ ಅಂದರೆ ಏನು ನಮಗೆ ಸಿ.ಬಿ.ಐ.ನಿಂದ ಆದರೂ ಮಾಡಿ ಸಿ.ಒ.ಡಿ.ನಿಂದ ಆದರೂ ಮಾಡಿಸಿ ಸತ್ಯಶೋಧನೆ ಆಗಬೇಕು ಆ ಸತ್ಯಶೋಧನೆ ಬಹಳ ಬೇಗ ಆಗಬೇಕು. ನಿಮ್ಮ ಕಾರ್ಯಕ್ರಮ 91-92, 92-93 ಒಪ್ಪಿಕೊಂಡರೆ ನಾವು....

SRI M.VEERAPPA MOILY:- Today the enquiry has already commenced.

SRI D.B.CHANDRE GOWDA:- That is not the point. Is it a time bound?

SRI M.VEERAPPA MOILY:- I think Mr.Chandre Gowda is quite correct. As far as Classic Computer is concerned, we have already written to the Central Government. Even till today they have not commenced the enquiry. There is some urgency involved in this. ಇದರಲ್ಲಿ ತಡಮಾಡಬಾರದು. That's why I would like to say, suppose the COD today has already stepped in, I would like them to go through, seize the materials, they can seize the accounts of the particular persons. Atleast some money, some materials you can have it. ನಾನು ಸಿ.ಬಿ.ಐ.ಗೆ ಕಾಗದ ಬರೆದಿದ್ದೇನೆ. It will take its own time to commence the enquiry. If the C.O.D. has entrusted it would have commenced an enquiry. They will go to the respective places, if necessary seize the materials, the accounts, and attach the accounts. They can do it. ಇದೆಲ್ಲಾ ಮಾಡುವುದಕ್ಕೆ ಸಾಧ್ಯವಾಗುತ್ತದೆ. For the CBI it may take 1-2 months to get into action. ಈಗ ನಮಗೆ ಒಬ್ಬರನ್ನು ಹಿಡಿಯುವುದು ಮುಖ್ಯ ಅಲ್ಲ. ಸತ್ಯಶೋಧನೆ ಆಗಬೇಕು. ಸತ್ಯಶೋಧನೆ ಹೊರಗೆ ಬರಬೇಕು. ನಮಗೆ ಬರಬೇಕಾದಂತಹ ಆಸ್ತಿ ನಮ್ಮ ಕೈ ತಪ್ಪಿ ಹೋಗಬಾರದು. ನಾಳೆ ನಾನು ಬೇಜವಾಬ್ದಾರಿ ಮುಖ್ಯಮಂತ್ರಿ ಅಥವಾ ಸರ್ಕಾರ ಆಗಬಾರದು. I must preserve the property which is going out from me. You must understand this delicacy. We have considered all these aspects. ಈ ವಿಚಾರದಲ್ಲಿ I myself spoke to Sri Revanasiddaiah today morning and said that you should step into action immediately, so that atleast something could be done, something could be saved. ಈಗಾಗಲೇ ಸಿ.ಒ.ಡಿ. ಎನ್‌ಕ್ವೈರಿ ಪ್ರಾರಂಭವಾಗಿದೆ. So I do not think any public will find fault with me or my Government that I have not stepped into action immediately it will take another 2-3 months for the CBI to step in. I am not aversed to CBI enquiry. ಆಕ್ಷನ್ ತೆಗೆದುಕೊಂಡು ಪ್ರಿಲಿಮಿನರಿ ರಿಪೋರ್ಟ್ ಕೊಡ್ಲಿ,

ಮತ್ತೆ ಇದಕ್ಕೆ ಬೇಕಾದಂತಹ ಕಾರ್ಯಾಚರಣೆ ಮಾಡಲಿ. Therefore, let them get into action. Let them give preliminary report. In the meanwhile if it is necessary, I am here to entrust to CBI. You don't have any suspicion about our staff.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಮುಖ್ಯಮಂತ್ರಿಗಳೆ, 2,38,000 ಮನೆಗಳನ್ನು 91-92, 92-93ರಲ್ಲಿ 2 ವರ್ಷದಲ್ಲಿ ಕಟ್ಟಬೇಕಾಗಿತ್ತು, 2 ವರ್ಷ ಮುಗಿಯಿತು. ಮಾನ್ಯ ಸಚಿವರು-607 ಮನೆ ಕಟ್ಟಿದ್ದೇವೆಂದು ಹೇಳಿದರು. ಇದರಿಂದ ತಮ್ಮ ಸರ್ಕಾರಕ್ಕೆ ಎಷ್ಟು ಗೌರವ ಬಂದಿದೆ, ಇದರ ಬಗ್ಗೆ ತಾವೇ ತೀರ್ಮಾನ ಮಾಡಬೇಕು. ತಮ್ಮ ಗಮನಕ್ಕೆ ಮತ್ತೊಂದು ಮಾತನ್ನು ತರುತ್ತೇನೆ. ಮುಂದೆ 2,40,000 ಮನೆಗಳನ್ನು ಕಟ್ಟುತ್ತೇವೆಂದು ಹೇಳಿದ್ದೀರಿ. ಬಹಳ ಸಂತೋಷ. ಕಟ್ಟಿರಿ. ನಮ್ಮದು ಸಂಪೂರ್ಣ ಸಹಕಾರ ಇದೆ. ಇದು ಆಶ್ರಯ ಕಾರ್ಯಕ್ರಮ ಬಡವರ ಕಾರ್ಯಕ್ರಮ. ನಾವೂ ಕೂಡ ಸ್ವಾಗತ ಮಾಡಿದ್ದೇವೆ. ಕಾರ್ಯಕ್ರಮದ ಬಗ್ಗೆ ನಮ್ಮದು ವಿರೋಧವಿಲ್ಲ. ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಒಂದೂ ಮನೆ ಕಟ್ಟಿಲ್ಲ. ಜನತಾ ಮನೆ ಕಾರ್ಯಕ್ರಮ ಒಳ್ಳೆಯದಿತ್ತು. ಇಂದಿರಾ ಆವಾಸ್ ಒಳ್ಳೆಯ ಕಾರ್ಯಕ್ರಮ ಇತ್ತು. ಹುಡ್ಕೋ ಮನೆ ಒಳ್ಳೆಯದಿತ್ತು, ಈ ಎಲ್ಲಾ ಕಾರ್ಯಕ್ರಮಗಳಿಗೆ ತಿಲಾಂಜಲಿ ಕೊಟ್ಟು ಈ ಕಾರ್ಯಕ್ರಮ ತೆಗೆದುಕೊಂಡಿರಿ, ಇದೂ ಆಗಲಿಲ್ಲ ಅದೂ ಆಗಲಿಲ್ಲ. ಇನ್ನು ಒಂದೂವರೆ, ಎರಡು ವರ್ಷದ ಕಾಲಾವಧಿ ಏನಿದೆ ಅದರಲ್ಲಿ ನೀವು ಮನೆ ಕಟ್ಟಬೇಕು. ಮತ್ತೆ ಅಂಬೇಡ್ಕರ್ ಹೆಸರಿನಲ್ಲಿ 29 ಸಾವಿರ ಮನೆಗಳನ್ನು ಕಟ್ಟು ಪೈಕಿ 10 ಮನೆ ಕಟ್ಟಲಾಗಿದೆ, ರಾಜ್ಯದಲ್ಲಿ ಕಳೆದ 3 ವರ್ಷದಿಂದ ಯಾವುದೇ ಮನೆ ಕಟ್ಟಲಿಕ್ಕೆ ಆಗಿಲ್ಲ. ಇದರಿಂದ 45 ಕೋಟಿ ರೂಪಾಯಿಗಳ ದುರ್ವ್ಯವಹಾರವಾಗಿದೆ. ಅದರ ಸಲುವಾಗಿ ನೀವು ಸಿಬಿಐ ಎನ್‌ಕ್ವೈಯರಿ ಮಾಡಿ ಎಂದು ಹೇಳಿದೆನೇ ವಿನಹ ನಿಮ್ಮ ಬೋನಾಫೈಡ್‌ನ್ನು ನಾನು ಚ್ಯಾಲೆಂಜ್ ಮಾಡುತ್ತಿಲ್ಲ. Try to understand the seriousness of the problem. ನಾವು ಏನು ಮಾಡಿದರೂ ಸಹ There must be a time bound programme.

ಶ್ರೀ ಗೋಪಿನಾಥ ಆರ್. ಸಾಂಡ್ರ:- ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಸಿ.ಬಿ.ಐ. ಎನ್‌ಕ್ವೈರಿ ಮಾಡಬೇಕೆಂದು ಹೇಳಿದ್ದಾರೆ.

ಉಪಾಧ್ಯಕ್ಷಿಣಿಯವರು:- ಅದು ಮುಗಿಯಿತು. ಮುಂದೆ ಹೋಗಿ.

ಶ್ರೀ ಗೋಪಿನಾಥ ಆರ್. ಸಾಂಡ್ರ:- ವಸತಿ ಖಾತೆಯಲ್ಲಿ ಆಗಲೀ, ಬೇರೆ ಯಾವುದೇ ಖಾತೆಯಲ್ಲಿಯಾಗಲೀ ಎಲ್ಲಿ ಅನ್ಯಾಯ ನಡೆಯುತ್ತಿದೆ? ಎಲ್ಲಿ ನಿಯಮಗಳ ವಿರುದ್ಧ ಕೆಲಸಗಳು ಆಗುತ್ತಿವೆ? ಎಲ್ಲಿ ಭ್ರಷ್ಟಾಚಾರ ಆಗುತ್ತಿದೆಯೆಂದು ನಮಗೆ ಕಂಡುಬರುತ್ತದೆ? ಅಲ್ಲೆಲ್ಲಾ ನಾವು ಅದಕ್ಕೆ ಮುಟ್ಟುಗೋಲು ಹಾಕತಕ್ಕಂಥ ವ್ಯವಸ್ಥೆ ಮಾಡಿದ್ದೇವೆ. ಅದರ ಬಗ್ಗೆ ಯಾರೂ ಸಂಶಯ ಪಡತಕ್ಕದ್ದಲ್ಲ. ಶಾಸಕರಾದಂಥವರು, ಸಮಾಜದ ಸೇವಕರಾದಂಥವರು, ಎಲ್ಲಿ ಸರ್ಕಾರದ ದುಡ್ಡು ದುಂದು ವೆಚ್ಚವಾಗುತ್ತದೆ, ಅಪವ್ಯಯವಾಗುತ್ತದೆ ಅಂಥಾದ್ದನ್ನು ನಮ್ಮ ಸರ್ಕಾರದ ಜನರಿಗೆ ತೆಗೆದುಕೊಂಡು ಬಂದರೆ ನಾವು ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಕಾಯಿದೆಗೆ ಅನುಗುಣವಾಗಿ ಯಾರೇ ಇರಲಿ, ಎಷ್ಟೇ ಪ್ರಭಾವಶಾಲಿಗಳಾಗಿರಲಿ, ಯಾವುದೇ ಪಕ್ಷದವರು ಇರಲಿ, ಅವರ ಮೇಲೆ ಕ್ರಮ ತೆಗೆದುಕೊಳ್ಳುವುದು ಖಂಡಿತಾ; ಖಚಿತ ಎನ್ನುವ ಮಾತನ್ನು ಮತ್ತೊಮ್ಮೆ ನಿಮಗೆ ಹೇಳುತ್ತಿದ್ದೇನೆ. I extend invitation to give all the records which you have got to prove that they are the corrupt, hon.members can give it to me and I am prepared to take action in accordance with law. I am going to take action against those people. ನಮ್ಮ ಸರ್ಕಾರ ಸಂಕಲ್ಪ ಮಾಡಿದೆ. ಅದರಲ್ಲಿ ಹಿಂದಕ್ಕೆ ಹೆಜ್ಜೆ ಎಂದೂ ಇಡುವುದಿಲ್ಲ ಎನ್ನುವ ಮಾತನ್ನು ಮತ್ತೊಮ್ಮೆ ಹೇಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಪ್ರಾಮಾಣಿಕತೆಯಿಂದ ನಿಷ್ಠೂರತೆಯಿಂದ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಈಗಲೂ ನಾನು ಮಂತ್ರಿಪದವಿ ತೆಗೆದುಕೊಂಡಾಗ ಅನೇಕ ದೂರುಗಳು ಪತ್ರಿಕೆಗಳಲ್ಲಿ ಬರುತ್ತವೆ, ಜನ ಕೊಡುತ್ತಿದ್ದಾರೆ, ಅವುಗಳನ್ನೆಲ್ಲಾವನ್ನೂ ಪರಿಶೀಲಿಸಿ ಕಾಯಿದೆ. ಚೌಕಟ್ಟಿನಲ್ಲಿ ಅದನ್ನು ತೆಗುದುಕೊಂಡು ಬಂದು ಯಾರು ತಪ್ಪಿತಸ್ಥರಿದ್ದಾರೋ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವ ಭರವಸೆ ತಮಗೆ ಕೊಡಬಲ್ಲೆ. ಇನ್ನೊಂದು ಮಾತನ್ನು ತಾವು ಹೇಳಿದಿರಿ. ರೈನ್ ಅಫೆಕ್ಟೆಡ್ ಮನೆಗಳಿಗೆ ಹಣ ಕೊಟ್ಟಿಲ್ಲವೆಂದು ಮತ್ತು ಯಾವ ಕೆಲಸ ಆಗಿಲ್ಲವೆಂದು. ನಾವು ಕೋಲಾರದಲ್ಲಿ 15 ನೂರು ಮನೆಗಳನ್ನು ತುಮಕೂರಿನಲ್ಲಿ 750 ಮನೆಗಳನ್ನು ಬೆಂಗಳೂರು ರೂರಲ್‌ನಲ್ಲಿ 200 ಮನೆಗಳನ್ನು ಕಟ್ಟಬೇಕೆಂದು 2 ವರ್ಷದ ಹಿಂದೆ ಮಾಡಿದ್ದೆವು. ಅವು ಬೇರೆ ಬೇರೆ ಹಂತದಲ್ಲಿವೆ. ಬೇರೆ ಬೇರೆ ಹಂತದಲ್ಲಿ ಅಂದರೆ, ಅರ್ಧಂಬರ್ಧವಾಗಿವೆ. ಹಿಂದಿನದು ಹೇಳುತ್ತೇನೆ, ಮತ್ತೆ ಅವುಗಳಿಗೆ ಈಗಾಗಲೇ, ಪೂರ್ತಿ ಮಾಡಲಿಕ್ಕೆ 1 ಕೋಟಿ ಹಣ ಕೊಟ್ಟಿದ್ದೇವೆ. ಮತ್ತೆ ಇನ್ನೂ 7 ಕೋಟಿ ರೂಪಾಯಿ ಕೊಡಬೇಕೆಂದು ನಾವು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಆ ಕಾರ್ಯಕ್ರಮ ನಡೆಯುತ್ತದೆ.

ಶ್ರೀ ಸಿ. ಬೈರೇಗೌಡ:- ಬಿದ್ದು ಹೋದ ಮನೆಗಳೆಷ್ಟು ಹೇಳಿ?

ಶ್ರೀ ಗೋಪಿನಾಥ ಆರ್. ಸಾಂಡ್ರ:- ಬರಿ ಫೌಂಡೇಷನ್ ಆಗಿದೆ ಅಷ್ಟೇ. ಇನ್ನು ಬಿದ್ದು ಹೋಗುವ ಪ್ರಶ್ನೆ ಇಲ್ಲ. ಅವು ಎಲ್ಲವೂ ಫೌಂಡೇಷನ್ ಲೆವೆಲ್ ಮತ್ತು ಲಿಂಟಲ್ ಲೆವೆಲ್‌ನಲ್ಲಿ ಇದ್ದಾವೆ. ಇನ್ನು ಬೀಳುವ ಪ್ರಶ್ನೆ ಎಲ್ಲಿ ಬರುತ್ತದೆ? ಎಲ್ಲಿ ಬಿದ್ದಿದೆ ಎಂದರೆ, ಯಲಹಂಕದಲ್ಲಿ ಮನೆಗಳೆಲ್ಲಾ ಬಿದ್ದಿವೆ.

ಶ್ರೀ ಸಿ. ಬೈರೇಗೌಡ:- ಕೋಲಾರ ಜಿಲ್ಲೆಯಲ್ಲಿ ಮಳೆಯಿಂದಾಗಿ ಎಷ್ಟು ಮನೆಗಳು ಬಿದ್ದು ಹೋದುವು ಮತ್ತು ಅದರಲ್ಲಿ ಎಷ್ಟು ಮನೆಗಳನ್ನು ಕಟ್ಟಿಕೊಟ್ಟಿದ್ದೀರಿ ಎಂಬ ಬಗ್ಗೆ ಹೇಳಿ?

ಶ್ರೀ ಗೋಪಿನಾಥ ಆರ್. ಸಾಂಡ್ರ:- ಆ ಅಂಕಿಅಂಶಗಳು ಈಗ ನನ್ನ ಹತ್ತಿರ ಇಲ್ಲ. ನಾವು 1500 ಮನೆಗಳನ್ನು ಅಲ್ಲಿ ಕಟ್ಟುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ.

ಶ್ರೀ ಸಿ. ಬೈರೇಗೌಡ:- ನಮ್ಮ ಪ್ರಕಾರ ಸುಮಾರು 50 ಸಾವಿರದಿಂದ 60 ಸಾವಿರಗಳವರೆಗೆ ಮನೆಗಳು ಬಿದ್ದಿವೆ. ಅದರಲ್ಲಿ ಕೇವಲ 1,500 ಮನೆಗಳನ್ನು ಮಾತ್ರ ಕಟ್ಟುತ್ತೇವೆ ಎಂದರೆ ನಾವು ಏನು ಹೇಳಬೇಕು?

ಶ್ರೀ ಗೋಪಿನಾಥ ಆರ್. ಸಾಂಡ್ರ:- ಇದರ ಬಗ್ಗೆ ನಾವು ವಿಚಾರ ಮಾಡುತ್ತೇವೆ. ಈಗ ನಾನು ನೇರವಾಗಿ ಪ್ರಶ್ನೆಗಳಿಗೆ ಉತ್ತರ ಕೊಡಲು ಪ್ರಾರಂಭ ಮಾಡುತ್ತೇನೆ. ಮಾನ್ಯ ದೇಶಪಾಂಡೆಯವರು ತಮ್ಮ ಪ್ರಶ್ನೆಯಲ್ಲಿ, ಗೃಹಮಂಡಳಿಯವರು ಮೈಸೂರು, ಕೆಂಗೇರಿ, ಯಲಹಂಕಗಳಲ್ಲಿ ಸರಕಾರದ ಅನುಮತಿ ಇಲ್ಲದೆ 175 ಕೋಟಿ ರೂಪಾಯಿಗಳ ವೆಚ್ಚದ ಒಂದು ವಸತಿ ಯೋಜನೆಯನ್ನು ರೂಪಿಸಿದ್ದಾರೆ. ಈ ಯೋಜನೆಗಳಿಗೆ ಸರಕಾರದ ಅಥವಾ ರಾಷ್ಟ್ರೀಕೃತ ಬ್ಯಾಂಕ್‌ಗಳ ಅಥವಾ ಯಾವುದೇ ಹಣಕಾಸು ಸಂಸ್ಥೆಗಳಿಂದ, ಅಥವಾ ತಾಂತ್ರಿಕ ಸಮಿತಿಯಿಂದ ಯೋಜನೆಯನ್ನು ನಿಗದಿಪಡಿಸಿಕೊಳ್ಳದೆ ಗುತ್ತಿಗೆದಾರರಿಗೆ ಈಗಾಗಲೇ 20 ರಿಂದ 50 ಕೋಟಿ ರೂಪಾಯಿಗಳವರೆಗೆ ಮುಂಗಡ ಹಣವನ್ನು ನೀಡಲಾಗಿದೆ ಎಂದು ಹೇಳಿದ್ದಾರೆ. ಯಲಹಂಕದ ಯೋಜನೆಗೆ ಸರಕಾರದಿಂದ 7-4-92ರಲ್ಲಿ ಅಪ್ರೂವಲ್ ಆಗಿದೆ.

ಶ್ರೀ ಆರ್.ವಿ. ದೇಶಪಾಂಡೆ:- ನಿಮ್ಮ ಫೈನಾನ್ಷಿಯರ್ ಯಾರು? ನೀವು ಹುಡ್ಕೋಗೆ ಅಪ್ಲೈ ಮಾಡಿದ್ದೀರಾ? ಅದು ಮಂಜೂರು ಆಗದೇ ನೀವು ಇಲಾಖೆಯ ವತಿಯಿಂದ ಶುರು ಮಾಡಿದ್ದೀರಿ....

ಶ್ರೀ ಗೋಪಿನಾಥ ಆರ್. ಸಾಂಡ್ರ:- ಯೋಜನೆಯನ್ನು ತೀವ್ರಗತಿಯಿಂದ

ಮಾಡಬೇಕೆನ್ನುವ ದೃಷ್ಟಿಯಿಂದ ಮಾಡಲಾಗಿದೆ. ಸರಕಾರದ ಅಪ್ರೂವಲ್, ಸರಕಾರದ ಗ್ಯಾರಂಟಿ, ತೆಗೆದುಕೊಂಡು ನಾವು ಮಾಡಿದ್ದೇವೆ. ಹುಡ್ಕೋಗೆ ನಾವು ಅರ್ಜಿ ಹಾಕಿದ್ದೇವೆ. ಹುಡ್ಕೋದಲ್ಲಿ 8-10 ದಿವಸಗಳಲ್ಲಿ ಈ ಕೆಲಸ ಆಗುವುದಿಲ್ಲ. ಅದಕ್ಕೆ ಸಮಯಾವಕಾಶ ಬೇಕಾಗುತ್ತದೆ. ಅವರಿಂದ ಹಣ ನಮಗೆ ಬರುತ್ತದೆ ಎಂಬ ಅಪೇಕ್ಷೆ ಇದೆ. ಹಾಗೆಯೇ ಯಂತ್ರದ ಖರೀದಿ ಬಗ್ಗೆ ಮಾತನಾಡುತ್ತಾ ಮಾನ್ಯ ವಿರೋಧ ಪಕ್ಷದ ನಾಯಕರು, ಪೇಟೆಯಲ್ಲಿ ಬೇರೆ ಕಂಪನಿಗಳವರು ಇಟ್ಟಿಗೆ ತಯಾರು ಮಾಡುವ ಯಂತ್ರಗಳು ದೊರೆಯುತ್ತಿದ್ದರೂ ಈ ಯಂತ್ರಗಳ ಖರೀದಿ ಮಾಡದೆ ಶಿರ್ಕೆ ಕಂಪನಿಯಿಂದ ದಿನಕ್ಕೆ 1500 ಇಟ್ಟಿಗೆಗಳನ್ನು ಮಾಡುವ 71 ಯಂತ್ರಗಳನ್ನು ಕೊಂಡಿದ್ದೀರಿ ಎಂದು ಹೇಳಿದರು. ಯಂತ್ರದಲ್ಲಿ ಮಿಕ್ಸರ್, ಬ್ಲಾಕ್ ತಯಾರಿಸುವುದು, ಮತ್ತು ಟ್ರಾಲಿ ಇರುತ್ತದೆ. ಒಂದು ಯಂತ್ರಕ್ಕೆ 2.5 ಲಕ್ಷ ರೂಪಾಯಿಗಳಂತೆ 71 ಮೆಶಿನ್ಸ್ ಖರೀದಿಸಿದ್ದೇವೆ. ಅದರಲ್ಲಿ ಕೆಲವು ಗುತ್ತಿಗೆದಾರರ ವತಿಯಿಂದ ಮಾಡಿದ್ದರೆ, ಕೆಲವನ್ನು ಸ್ವಂತವಾಗಿ ಖರೀದಿ ಮಾಡಿದ್ದಾರೆ. ಇದರ ಬೆಲೆ ಹೆಚ್ಚಿಗೆ ಆಯಿತು ಎಂದು ತಾವುಗಳು ಹೇಳಿದ್ದೀರಿ. ಇದರ ಬಗ್ಗೆ ಕೂಲಂಕುಷವಾಗಿ ವಿಚಾರ ಮಾಡಿ ಯೋಗ್ಯವಾದಂಥ ನಿರ್ಣಯವನ್ನು ನಾವು ತೆಗೆದುಕೊಳ್ಳುತ್ತೇವೆ. ಅಕಸ್ಮಾತ್ತಾಗಿ ತಾವುಗಳು ಅಂದುಕೊಂಡಂತೆ ದರದಲ್ಲಿ ಹೆಚ್ಚು ಕಡಿಮೆಯಾಗಿದ್ದರೆ, ಕಾಯಿದೆ ಪ್ರಕಾರ ಅಂಥವರ ಮೇಲೆ ಯೋಗ್ಯವಾದ ಕ್ರಮವನ್ನು ತೆಗೆದುಕೊಂಡು, ವಿಚಾರಣೆ ಮಾಡುವ ಕ್ರಮ ಜರುಗಿಸುತ್ತೇವೆ. ಹಾಗೆಯೇ ಟೆಂಡರ್ ಪಬ್ಲಿಷ್ ಮಾಡದೇ ಮೆಶಿನರಿ ಖರೀದಿ ಮಾಡಿದ್ದೀರಿ ಎಂದು ಹೇಳಿದ್ದೀರಿ. ಪ್ರೊಸೀಜರ್ ಪ್ರಕಾರ ಟೆಂಡರ್ ಕರೆಯಬೇಕಾಗಿತ್ತು, ಆದರೆ ಟೆಂಡರ್ ಕರೆಯಲಾಗಲಿಲ್ಲ. ಏಕೆ ಕರೆಯಲಿಲ್ಲ ಎನ್ನುವ ಪ್ರಶ್ನೆ ಕೇಳಿದಾಗ, ಇವರು "Recognised machinery manufactures, they are the first in India, and we have already purchased some machineries. ಯಂತ್ರ ಕೂಡ ಮ್ಯಾಗ್ಸಿಮಮ್ ಕ್ಯಾಪಾಸಿಟಿ ಹೊಂದಿರುತ್ತದೆ. ಹಾಗೂ ಉತ್ತಮ ಗುಣಮಟ್ಟದ್ದಾಗಿದೆ ಎನ್ನುವ ದೃಷ್ಟಿಯಿಂದ, ಇದರ ಅವಶ್ಯಕತೆಯನ್ನು ಮನಗಂಡು, ಅಂದಿನ ಅಧಿಕಾರಿಗಳು ಅದನ್ನು ಟೆಂಡರ್ ಕರೆಯದೆ ಮಾಡಿದ್ದಾರೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಕ್ವಾಲಿಟಿ, ಕ್ವಾಂಟಿಟಿ ಚೆನ್ನಾಗಿ ಬರುತ್ತದೆ ಎಂದು ಹೇಳಿದ್ದಾರೆ ಅದನ್ನು ಕೂಡ ನಾನು ಒಪ್ಪಿಕೊಳ್ಳುತ್ತೇನೆ. ಯಲಹಂಕದ ಬಗ್ಗೆ ಕೇಳಿದ್ದೀರಿ. ಅದರ ವಿವರಗಳನ್ನು ಹೇಳುತ್ತೇನೆ. ಇದು ಕಾಂಪೋಸಿಟ್ ಹೌಸಿಂಗ್ ಸ್ಕೀಮ್ ಯಲಹಂಕ 6ನೇ ಫೇಸ್. ಇದರಲ್ಲಿ Number of houses proposed 3500, that is 233 blocks. Project cost is about 90 crores. National Housing Board's Assistance sought about 60 crores, number of applications received 147, I do not want to hide anything. I will put before you the naked picture of what we have done and we assure you that whatever has happened has happened, and law will take its own course for those who have done wrong and whatever target that has been fixed that will be fulfilled and completed. Administrative approval has been given on 7.4.92, schedule date of completions is 30.6.94, tender amount is 60 crores, the amount spent so far is 13.51 crores. There is physical progress in all the blocks except 41 blocks. All the blocks are under different stages of construction and we have given 9.48 crores as mobilisation advance. Since the loan amount has not been received under this project expenditure of 13.51 crores had been met out of the project funds to keep up the contractual obligation. Now I will come to Kengeri. It is also a composite housing scheme. Number of units proposed is 2508, project cost is 32.30 crores, tender amount is 24.72 crores, expenditure as on date 16.85 crores, HUDCO

assistance is 5 crores 70 lakhs,initial deposit from allottees 79 lakhs. Board fund from other projects is 9.36 crores, in all 16.18 crores.

4.50 ಪಿ.ಎಂ.

Mobilisation advance is again is Rs 7 crores. Date of administrative approval, you were telling that there were no administrative approval, and directly they have invested, but that is not the case. Date of administrative approval is 7.5.91.

ಶ್ರೀ ಆರ್.ವಿ. ದೇಶಪಾಂಡೆ:- ಎರಡನೆಯ ಪ್ರಶ್ನೆಗೆ ಉತ್ತರ ಕೊಟ್ಟು ಬಿಡಿ. 'ಆಶ್ರಯ' ಯೋಜನೆಯಲ್ಲಿ ಅಂಬೇಡ್ಕರ್ ಶತಾಬ್ದಿ ಎಂದು ಹಣ ಬಿಡುಗಡೆಯಾಗಿತ್ತಲ್ಲ, ಆ ಹಣವನ್ನು ಈ ಸ್ಕೀಮ್‌ನಲ್ಲಿ ಮೊಬಿಲೈಸೇಷನ್ ಅಡ್ವಾನ್ಸ್ ಕೊಡಲಿಕ್ಕೆ ಉಪಯೋಗ ಮಾಡಿದ್ದಾರೋ ಇಲ್ಲವೋ? ಈ ಸ್ಕೀಮ್ ತೆಗೆದುಕೊಂಡು ಕರ್ನಾಟಕ ಹೌಸಿಂಗ್ ಬೋರ್ಡ್ ಆರ್ಥಿಕ ಸ್ಥಿತಿ ಬಹಳ ಕೆಟ್ಟುಹೋಗಿದೆ, ಇವಕ್ಕೆ ಉತ್ತರಕೊಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ:- ಮೂರನೆಯದಕ್ಕೂ ಉತ್ತರ ಕೊಡಿ. ವಸೂಲು ಮಾಡುವಾಗ ಬಡ್ಡಿ ಸೇರಿಸಿ ವಸೂಲು ಮಾಡ್ತೀರೋ ಅಥವಾ ಹಾಗೆಯೇ ಅಸಲು ತೆಗೆದುಕೊಳ್ಳುತ್ತೀರೋ?

ಶ್ರೀ ಗೋಪಿನಾಥ ಆರ್. ಸಾಂಡ್ರ:- ತಾವು ಹೇಳಿದಹಾಗೆ ಹಣವನ್ನು ಡೈವರ್ಟ್ ಮಾಡಿದ್ದುದು ನಿಜ, ಅದನ್ನು ಅಲ್ಲಗಳೆಯುವುದಿಲ್ಲ. ಎರಡನೆಯ ಪ್ರಶ್ನೆ, ಆರ್ಥಿಕ ಪರಿಸ್ಥಿತಿ ಸ್ವಲ್ಪ ಶಿಥಿಲವಾಗಿದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅಂಬೇಡ್ಕರ್‌ದು ಡೀಟೇಲ್ ಬೇಡವೇ?

ಶ್ರೀ ವಾಟಾಳ್ ನಾಗರಾಜ್:- 10 ಮನೆಯದು ನೀವು ಹೆಂಚು ಎಷ್ಟು ಹಾಕಿದಿರಿ, ಕಲ್ಲು ಎಷ್ಟು ಹಾಕಿದಿರಿ, ಅಂತ ಹೇಳಬಹುದಷ್ಟೇ. ಆಮೇಲೆ ಮಾಧುಸ್ವಾಮಿಯವರ ಕೆಲವು ಪ್ರಶ್ನೆಗಳನ್ನು ಕೇಳಿದರು. ಎಕ್ಸೈಜ್ ಮತ್ತು ಫಾರೆಸ್ಟ್ ಲ್ಯಾಂಡ್ಸ್. ಟಾಸ್ಕ್‌ಫೋರ್ಸ್ ಕಮಿಟಿಯವರು ಅವುಗಳನ್ನು ತೆಗೆದು ಹಂಚಲಿಕ್ಕೆ ರೆಕಮೆಂಡ್ ಮಾಡಿದ್ದರು, ಆ ಶಿಫಾರಸಿನಂತೆ ಸರ್ಕಾರ ಕೂಡ ಪ್ರಯತ್ನ ಮಾಡುತ್ತಿದೆ. ಅಬ್ಕಾರಿ ಇಲಾಖೆಯವರು ನಾವು ತೆಗೆದುಕೊಂಡ ಜಮೀನಿನಲ್ಲಿ ಯಾವುದೇ ಗಿಡ ಇಲ್ಲ ಅದನ್ನು ಏಕೆ ಪರಿವರ್ತನೆ ಮಾಡಬಾರದು ಎಂದು ಸರ್ಕಾರ ಸೀರಿಯಸ್ಸಾಗಿ ವಿಚಾರ ಮಾಡುತ್ತಿದೆ. ಅವರ ಸಲಹೆಯನ್ನು ಇತ್ಯರ್ಥ ಮಾಡಲು ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಗ್ರಾಮೀಣ ಪ್ರದೇಶದಲ್ಲಿ 30-40 ನಿವೇಶನ ಕೊಟ್ಟಿದ್ದೀರಿ, ಪಟ್ಟಣಗಳಲ್ಲಿ 25-30 ಕೊಟ್ಟಿದ್ದೀರಿ ಎಂದು ಹೇಳಿದರು. ಅದಕ್ಕೆ ಉತ್ತರ ಇಷ್ಟೇ.

ಶ್ರೀ ಜೆ.ಸಿ. ಮಾಧುಸ್ವಾಮಿ:- ಆ ಪ್ರಶ್ನೆ ನಾನು ಕೇಳಲೇ ಇಲ್ಲ ಸ್ವಾಮಿ. ನೀವು ಮುನಿಸಿಪಲ್ ಏರಿಯಾದಲ್ಲಿ ಕೊಡುವ ಆಶ್ರಯ ಸೈಟ್‌ಗಳಿಗೆ 50 ಪರ್ಸೆಂಟ್ ಕಾಸ್ಟನ್ನು ವಸೂಲು ಮಾಡಿ ಎಂದು ಹೇಳಿದ್ದೀರಿ.

ಶ್ರೀ ಗೋಪಿನಾಥ ಆರ್. ಸಾಂಡ್ರ:- ತಮ್ಮ ಸಲಹೆಯನ್ನು ಸೂಕ್ಷ್ಮವಾಗಿ ಪರಿಶೀಲಿಸುತ್ತೇನೆ. ಆಶ್ರಯ ಸ್ಕೀಮ್‌ಗೆ ಹುಡ್ಕೊದಿಂದ ಸಾಲ ತೆಗೆದುಕೊಳ್ಳುತ್ತೇವೆ. ಅಲ್ಲಿ ಹೀಗೆ ಮಾಡಬೇಕು ಎಂದು ಟರ್ಮ್ಸ್ ಅಂಡ್ ಕಂಡಿಶನ್ ಹಾಕಿದ್ದಾರೆ. ಅದರಲ್ಲಿ ಹೆಚ್ಚು ಕಡಿಮೆ ಮಾಡಲಿಕ್ಕೆ ಆಗುವುದಿಲ್ಲ, ಒಂದು ವೇಳೆ ಮಾಡಬೇಕಾದರೆ ಇಡೀ ಸ್ಕೀಮ್‌ಗೆ ಅಮೆಂಡ್‌ಮೆಂಟ್ ತರಬೇಕು, ಹಾಗೆ ಮಾಡಿದರೆ ತೊಂದರೆಯಾಗುತ್ತದೆ. ನೀವು ಹೇಳುವ ಸಲಹೆ ಬಗ್ಗೆ ಮತ್ತೇನಾದರೂ ಉಪಾಯಮಾಡಿ ಸಲ್ಯೂಶನ್ ಹುಡುಕಲು ಪ್ರಯತ್ನ ಮಾಡುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ:- ಅಲ್ಲಿ ದುಡ್ಡನ್ನು ಕಲೆಕ್ಟ್ ಮಾಡುವುದಕ್ಕೆ ತಡೆಯುವುದಕ್ಕಾಗುವುದಿಲ್ಲ ಆಮೇಲೆ. 350 ರೂಪಾಯಿ ತೆಗೆದುಕೊಳ್ಳಿ ಎಂದು ಹೇಳಿದರಲ್ಲಾ, ಅಲ್ಲಿ 600-700 ರೂಪಾಯಿ ವಸೂಲಿಯಾಗುತ್ತಿದೆ.

ಶ್ರೀ ಗೋಪಿನಾಥ ಆರ್. ಸಾಂಡ್ರ:- ಅದನ್ನೇ ಹೇಳುತ್ತೇನೆ. ಸನ್ಮಾನ್ಯ ದೇಶಪಾಂಡೆಯವರು ಹೇಳಿದರು, ಅದನ್ನೇ ತಾವು ಹೇಳುತ್ತೀರಿ. ಕಡುಬಡವರಿಗಾಗಿ ಮನೆ ಅಥವಾ ಸೈಟುಗಳನ್ನು ನಾವು ಕೊಡುತ್ತೇವೆ. ಕೆಲವು ದಳ್ಳಾಳಿಗಳು ಇದ್ದಾರೆ ಏಜೆಂಟರು ಇದ್ದಾರೆ, ಈ ಮಧ್ಯಂತರ ಜನರು ಏನಿದ್ದಾರೆ, ಅವರು ಹಣವನ್ನು ಬಡವರ ಕಡೆಯಿಂದ ವಸೂಲು ಮಾಡುತ್ತಿದ್ದಾರೆ. ಅದು ಟಾಸ್ಕ್ ಫೋರ್ಸ್ ಕಮಿಟಿಯವರಾಗಲೀ, ಯಾರೇ ಆಗಲಿ, ಏಜೆಂಟರು ಯಾರು ಇದ್ದಾರೆ, ಅದರ ಬಗ್ಗೆ ನಾನು ಹೆಚ್ಚು ಮಾತನಾಡುವುದಿಲ್ಲ. ಅವರಲ್ಲಿ ಅತ್ಯಂತ ಕಳಕಳಿಯಿಂದ ಪ್ರಾರ್ಥನೆ ಮಾಡುವಂಥದ್ದು ಏನೆಂದರೆ ಅಂಥ ವ್ಯವಸ್ಥೆಯನ್ನು ಮಾಡುವಂಥ ಜನರು ಯಾರಿದ್ದಾರೆ, ಅದರ ಬಗ್ಗೆ ಸೂಕ್ಷ್ಮವಾಗಿ ನೀವು ನಮಗೆ ಹೇಳಿದರೆ ಇಂಥಿಂಥವರು ಇಂಥ ಕೆಲಸಗಳನ್ನು ಮಾಡುತ್ತಾರೆ ಎಂದು ಹೇಳಿದರೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಮೆಂಬರ್‌ಗಳೇ ಏಜೆಂಟರು ಇದ್ದರೆ ಏನು ಮಾಡುತ್ತೀರಿ?

ಶ್ರೀ ಗೋಪಿನಾಥ ಆರ್. ಸಾಂಡ್ರ:- ಅವರ ಹೆಸರುಗಳನ್ನೇ ಹೇಳಿ ನೀವು. ನೀವೇ ಟಾಸ್ಕ್ ಫೋರ್ಸ್ ಕಮಿಟಿಯ ಛೇರ್ಮನ್ ಇದ್ದೀರಿ, ಇದು ನಿಮ್ಮ ನೇತೃತ್ವದಲ್ಲಿಯೇ ನಡೆದರೆ ನಾವೇನು ಮಾಡುವುದಕ್ಕೆ ಬರುತ್ತದೆ. ನೀವೇ ಸ್ವತಃ ಬಂದು ಹೇಳಿದರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವಂಥ ಜವಾಬ್ದಾರಿಯನ್ನು ನಾನು ಹೊತ್ತುಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ:- 350ನ್ನು ತಾವು ವೇವ್ ಮಾಡಬೇಕು.

ಶ್ರೀ ಗೋಪಿನಾಥ ಆರ್. ಸಾಂಡ್ರ:- ಅದನ್ನು ಸರ್ಕಾರದ ನೀತಿ ನಿಯಮಗಳಿಗನುಗುಣವಾಗಿ ಮಾಡಬೇಕಾಗುತ್ತದೆ. ನಿಮ್ಮ ಸಲಹೆಯನ್ನು ನಾವು ಕೇಳುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ:- ಮುನಿಸಿಪಲ್ ಏರಿಯಾದಲ್ಲಿ 350 ವಸೂಲಿ ಮಾಡಿ ಎಂದು ಕಂಡೀಷನ್ ಹಾಕಿದ್ದಾರೆ.

ಶ್ರೀ ಗೋಪಿನಾಥ ಆರ್. ಸಾಂಡ್ರ:- ಇನ್ನು ಷಫಿ ಸಾಹೇಬರು ಒಂದು ಸಲಹೆಯನ್ನು ಹೇಳಿದರು. ನಾವು ಗ್ರಾಮಾಂತರ ಪ್ರದೇಶದಲ್ಲಿ ಹೇಗೆ ಜಮೀನು ಖರೀದಿ ಮಾಡುವಾಗ ಅಪ್ರೇಜ್ ತೆಗೆದುಕೊಂಡು 30 ಪರ್‌ಸೆಂಟ್ ಹೆಚ್ಚಿಗೆ ಕೊಡುವಂಥ ವ್ಯವಸ್ಥೆ ಏನಿದೆ, ಅದೇ ವ್ಯವಸ್ಥೆಯನ್ನು ಪಟ್ಟಣದಲ್ಲಿ ಮಾಡಬೇಕು ಎಂದು ಹೇಳಿದ್ದಾರೆ. ಅದರ ಬಗ್ಗೆ ನಾವು ವಿಚಾರ ಮಾಡಿ ಒಂದು ನಿರ್ಣಯಕ್ಕೆ ಬರುತ್ತೇವೆ. ಈಶ್ವರಪ್ಪನವರು ಒಟ್ಟು ತೆಗೆದುಕೊಂಡ ಮನೆಗಳ ಸಂಖ್ಯೆ ಬಗ್ಗೆ ಕೇಳಿದ್ದಾರೆ. ಅವರು ಸೀಟಿನಲ್ಲಿ ಇಲ್ಲ. ಉತ್ತರ ಹೇಳುವ ಅವಶ್ಯಕತೆ ಇಲ್ಲ, ಥ್ಯಾಂಕ್ಸ್. ಮಾನ್ಯ ಹನುಮೇಗೌಡರು ಕಾಂಗ್ರೆಸ್‌ನವರಿಗೆ ಕಂಟ್ರಾಕ್ಟ್ ಕೊಟ್ಟಿದ್ದಾರೆ ಎಂದು ನಮ್ಮ ಎದುರುಕಡೆ ಒಂದು ಪ್ರಶ್ನೆಯನ್ನು ಇಟ್ಟಿದ್ದಾರೆ. ನಾವು ಕಾಂಗ್ರೆಸ್, ನಾನ್-ಕಾಂಗ್ರೆಸ್, ಜನತಾದಳ ಎಂದು ಹೇಳಿ ಕೊಟ್ಟಿಲ್ಲ.

ಶ್ರೀ ಕೆ.ಹೆಚ್. ಹನುಮೇಗೌಡ:- ಕಂಟ್ರಾಕ್ಟನ್ನು ಬೇರೆಯವರಿಗೆ ಕೊಟ್ಟಿದ್ದಾರೆ. ಕೆಲವರು ಕೇಳಿದರೆ ಬೇನಾಮಿ ಹೆಸರಿನಲ್ಲಿ ನಾವು ತೆಗೆದುಕೊಂಡಿದ್ದೇವೆ, ನಮ್ಮನ್ನು ಏನು ಮಾಡುತ್ತಾರೆ ಎನ್ನುವ ತರಹದಲ್ಲಿ ಹಗುರವಾಗಿ ಮಾತನಾಡುತ್ತಾರೆ. ಅಂಥ ವಿಚಾರದಲ್ಲಿ ಸರ್ಕಾರದ ದುಡ್ಡು ಹೋದೀತು ಎಂದು ದುಡ್ಡು ರಿಕವರಿ ಮಾಡಿಕೊಳ್ಳುವ ಬಗ್ಗೆ ಹೇಳಿದೆ. ಎರಡನೆಯದು ಪಾಯವನ್ನು ಒಂದೂವರೆ ಅಡಿ ತೆಗೆದು ಮರಳು ಕೆಸರುಮಣ್ಣು ಎಲ್ಲಾ ಹಾಕಿ ಮನೆ ಎಲ್ಲಾ ಬಿದ್ದುಹೋಗಬಹುದು. ಈಗ ಇನ್ನೊಂದು ಹೊಸದಾಗಿ ಹೇಳುತ್ತೇನೆ ಕೇಳಿ. ಸ್ವಾಮಿ ಇಷ್ಟೆಲ್ಲಾ ಖರ್ಚು ಮಾಡಿ ಹದಿನೈದೂವರೆ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಮನೆ ಕಟ್ಟಿಸುತ್ತೀರಲ್ಲಾ, ಅಲ್ಲಿ ಹಾಕುವುದು ನೀವು ಆಸ್‌ಬೆಸ್ಟಾಸ್ ಷೀಟು. ಯಾರಾದರೂ ಗೊತ್ತಿಲ್ಲದ

ಹುಡುಗರು ಎರಡು ಕಲ್ಲು ಎಸೆದರೆ ತೂತು ಬಿದ್ದು ಹೋಯಿತು. ತೂತು ಬಿದ್ದರೆ ಇಡೀ ಷೀಟನ್ನೇ ಛೇಂಜ್ ಮಾಡಬೇಕಾಗುತ್ತದೆ. ಬಡವರ ಕೈಯಲ್ಲಿ ಆ ಶಕ್ತಿ ಇರುವುದಿಲ್ಲ. ಗೋಡೆ ಪರ್ಮನೆಂಟ್ ಮಾಡಿಕೊಡುತ್ತೀರಾ, ಒಪ್ಪಿಕೊಂಡೆ ಸಂತೋಷ. ಆಮೇಲೆ ನೆಲಕ್ಕೆ ಏನೂ ಮಾಡುವುದಿಲ್ಲವಂತೆ, ಹಾಗೆ ಮಲಗಿಕೊಳ್ಳಲಿ ಅಂತ, ಆಸ್‌ಬೆಸ್ಟಾಸ್ ಷೀಟ್, ಮತ್ತೆ ಫ್ಲೋರಿಂಗ್ ಎರಡನ್ನೂ ಸೇಫ್ಟಿಯಾಗಿ ಮಾಡಿ ಅವರು ನೆಮ್ಮದಿಯಾಗಿ ಮಲಗಿಕೊಳ್ಳುವ ಹಾಗೆ ಮಾಡಿ.

ಶ್ರೀ ಗೋಪಿನಾಥ ಆರ್. ಸಾಂಡ್ರ:- ಇನ್ನೊಂದು ಪ್ರಾಬ್ಲಮ್‌ನ್ನು ತಾವು ಹೇಳಿದಿರಿ. ಸೈಟ್ಸ್, ಮನೆಗಳನ್ನು ಅಲಾಟ್ ಮಾಡುವುದರಲ್ಲಿ ಅಪರಾತಪರ ಆಗಿದೆ, ಸರಿಯಾಗಿ ಆಗಿಲ್ಲ, ಅಧಿಕಾರ ದುರುಪಯೋಗವಾಗಿದೆ ಎಂದು ಹೇಳಿದ್ದೀರಿ, ಇದರ ಬಗ್ಗೆ ನಾವು ಸಾರಾಸಾರಾ ವಿಚಾರ ಮಾಡಿ ಇದರಲ್ಲಿ ಎನ್‌ಕ್ವೈರಿಯಾಗಬೇಕು, ನಮಗೆ ಪ್ರೈಮಾಫೇಸಿ ಕೇಸ್ ಇದೆ ಎಂದು ತಿಳಿದು ನಾವು ಇದರಲ್ಲಿ ಎನ್‌ಕ್ವೈರಿ ಮಾಡಬೇಕು ಎಂದು ನಿರ್ಧಾರವನ್ನು ಸರ್ಕಾರದವರು ಕೈಗೊಂಡಿದ್ದೇವೆ. ಅದಕ್ಕೆ ನಮ್ಮ ಮಾಜಿ ಅಡಿಷನಲ್ ಚೀಫ್ ಸೆಕ್ರೆಟರಿ ವಿಶ್ವನಾಥನ್ ಅವರನ್ನು ಸಿಂಗಲ್ ಎನ್‌ಕ್ವೈರಿ ಆಫೀಸರ್ ಎಂದು ಮಾಡಿದ್ದೇವೆ, ಅದರ ಬಗ್ಗೆ ವಿಚಾರಣೆ ನಡೆಯುತ್ತದೆ. ಬೈರೇಗೌಡರು ಇಂದಿರಾನಗರದಲ್ಲಿ ಒಂದು ಮನೆ ಇತ್ತು, ಅದು ಗೆಸ್ಟ್ ಹೌಸ್ ಆಗಿತ್ತು, ತದನಂತರ ಅದನ್ನು ಬಾಡಿಗೆಗೆ ಕೊಡಲಾಯಿತು, ಮುಂದೆ ಅದನ್ನು ಮಾರಾಟಕ್ಕೆ 20-25 ಲಕ್ಷ ರೂಪಾಯಿ ಬೆಲೆ ಉಳ್ಳಂಥ ಮನೆ, ಅದನ್ನು ಕೇವಲ ಎರಡು-ಮೂರು ಲಕ್ಷ ರೂಪಾಯಿಗಳಿಗೆ ಕೊಟ್ಟಿದ್ದಾರೆ ಎನ್ನುವ ಒಂದು ಮಾತನ್ನು ಇಲ್ಲಿ ಹೇಳಿದ್ದಾರೆ. ಅದರ ಬಗ್ಗೆ ಹೆಚ್ಚಿನ ಮಾಹಿತಿಯನ್ನು ತೆಗೆದುಕೊಂಡು ಬರುವುದಕ್ಕೆ ಈಗಾಗಲೇ ನಾನು ಹೇಳಿದ್ದೇನೆ. ಇನ್ನು ಆ ಮಾಹಿತಿ ಬಂದಿಲ್ಲ, ಆಕಸ್ಮಾತ್ ಬಂದರೆ ನಾನು ಈಗಲೇ ಹೇಳುತ್ತೇನೆ. ದಯಮಾಡಿ ನನ್ನ ಛೇಂಬರ್‌ಗೆ ಬಂದರೆ ಅದರ ಬಗ್ಗೆ ಎಲ್ಲಾ ವಿವರವನ್ನು ನಿಮ್ಮ ಎದುರುಗಡೆ ಇಡುತ್ತೇನೆ. ನಿಮ್ಮ ಅಭಿಪ್ರಾಯವನ್ನು ಕೇಳಿಕೊಂಡು ಮುಂದಿನ ಕ್ರಮವನ್ನು ನಾನು ತೆಗೆದುಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ:- ಈ ವಿಷಯವನ್ನು ನಾನು ಎರಡನೇ ಸಾರಿ ಪ್ರಸ್ತಾಪ ಮಾಡುತ್ತಾ ಇರುವುದು. ಅದೇನು ದೂರ ಇದೆಯೋ ಇನ್ನೂ ಮಾಹಿತಿ ಬಂದಿಲ್ಲ ಎಂದರೆ ನನಗೆ ಅದೇ ಅನುಮಾನ ಬಂದಿರುವುದು.

ಉಪಾಧ್ಯಕ್ಷರು:- ಉತ್ತರ ತರಿಸಿಕೊಡುತ್ತೇನೆಂದು ಹೇಳಿದ್ದರಲ್ಲ.

ಶ್ರೀ ಸಿ. ಬೈರೇಗೌಡ:- ಏಕೆಂದರೆ ಮಾನ್ಯ ನರಸಿಂಹ ಮೂರ್ತಿಯವರು ಉತ್ತರ ಕೊಡತಕ್ಕ ಸಂದರ್ಭದಲ್ಲಿ ನಾನೂ ಸಹ ಇದನ್ನು ಪ್ರಶ್ನೆ ಮಾಡಿದ್ದೆ. ಇದೇ ಉತ್ತರವನ್ನು ಕೊಟ್ಟರು. ಇವತ್ತು ಕೂಡ ಇದೇ ಉತ್ತರ ಬರುತ್ತಿದೆ. ಇದನ್ನು ನೋಡಿದರೆ ಮಾನ್ಯ ಮಂತ್ರಿಗಳು ಇದರಲ್ಲಿ ಹೇಳಿದ ಹಾಗೆ ಅಪರಾತಪರ ಅಂತೂ ಖಂಡಿತ ಆಗಿದೆ.

ಉಪಾಧ್ಯಕ್ಷರು:- ಡೀಟೇಲ್ಸ್ ತರಿಸಿ ಮಾಹಿತಿ ಕೊಡುತ್ತೇನೆಂದು ಹೇಳಿದ್ದಾರೆ.

ಶ್ರೀ ಗೋಪೀನಾಥ ಆರ್ ಸಾಂಡ್ರ:- ಶ್ರೀಮಾನ್ ಬೈರೇಗೌಡರ ಸಮಸ್ಯೆಗೆ ಇಲ್ಲಿ ಒಂದು ಉತ್ತರ ಬಂದಿದೆ. ಗೆಸ್ಟ್‌ಹೌಸ್‌ನಿಂದ ಆಗಿದೆ ಮತ್ತು ಅದು ಕೋರ್ಟಿಗೆ ಹೋಗಿದೆ, ನಾವು ಕೋರ್ಟಿಗೆ ಹೋಗಿದ್ದೇವೆ.

ಶ್ರೀ ಸಿ. ಬೈರೇಗೌಡ:- ಏನೂ ಸಂಬಂಧ ಇಲ್ಲದೇ ಇರುವುದನ್ನು ಹೇಳಿದರೆ ಹೇಗೆ? ಇದಕ್ಕೆ ಏನು ಹೇಳಬೇಕು?

ಶ್ರೀ ವೈ.ಕೆ. ರಾಮಯ್ಯ:- ನಮ್ಮಲ್ಲಿ ಒಂದು ಗಾದೆ ಇದೆ. ''ಜಗ ಹೊರುವವಳಿಗೆ ಮಗು ಭಾರವೆ'' ಎಂದು ಪ್ರಪಂಚದ ವಿಷಯ ಎಲ್ಲಾ ಹೇಳುತ್ತಿದ್ದಾರೆ. ಹೌಸಿಂಗ್ ಬೋರ್ಡ್‌ನ ಎಲ್ಲಾ

ವಿಷಯ ಹೇಳುತ್ತಿದ್ದಾರೆ. ಆ ಒಂದು ಡೇಟ್ ಹೇಳಿ ಎಂದು ಬೆಳಿಗ್ಗೆಯಿಂದ ಕೇಳುತ್ತಿದ್ದೇವೆ ಹೇಳುತ್ತಿಲ್ಲ. ಯಾವಾಗ ಅಲಾಟ್ ಆಯಿತು ಎಂದು ಡೇಟ್ ಹೇಳಿ ಸ್ವಾಮಿ.

ಶ್ರೀ ಸಿ. ಬೈರೇಗೌಡ:- ಅಲಾಟ್ ಮಾಡಿರತಕ್ಕವರು ಯಾರು? ಹೇಗೆ ಅಲಾಟ್ ಆಯಿತು? ಏಕೆ ಆಯಿತು? ಎಷ್ಟು ರೂಪಾಯಿಗೆ ಅಲಾಟ್ ಆಗಿದೆ?

SRI GOPINATH R. SANDRA:- Since the matter is before the Court, it would be sub-judice if I say anything.

ಶ್ರೀ ಸಿ. ಬೈರೇಗೌಡ:- ಅದಕ್ಕೂ ಇದಕ್ಕೂ ಸಂಬಂಧ ಏನು? ನಾನು ವಕೀಲ ಇಲ್ಲದೇ ಇರಬಹುದು. ಆದರೆ ಕಾಮನ್ ಸೆನ್ಸ್ ಇದೆ. ಅದಕ್ಕೂ ಇದಕ್ಕೂ ಸಂಬಂಧ ಇಲ್ಲ ಎಂದು.

ಶ್ರೀ ಗೋಪೀನಾಥ ಆರ್ ಸಾಂಡ್ರ:- ನಿಮ್ಮ ಬೇಡಿಕೆ ಏನು ಇದೆ, ಆ ಫೈಲ್ ಅಡ್ವೊಕೇಟ್ ಹತ್ತಿರ ಇದೆಯಂತೆ. ನಾಳೆ ನಾಡಿದ್ದು ಅದನ್ನು ತರಿಸಿ ನಿಮ್ಮ ಗಮನವನ್ನು ಆ ಕಡೆ ಸೆಳೆಯುತ್ತೇನೆ.

SRI Y.K. RAMAIAH:- We want only the date of allotment.

SRI GOPINATH R.SANDRA:- The file is not with me. The file is with the Advocate.

(ಗೊಂದಲ)

ಶ್ರೀ ಸಿ. ಬೈರೇಗೌಡ:- ಯಾರು ಅಲಾಟ್ ಮಾಡಿದ್ದಾರೆ, ಎಷ್ಟು ಆಯಿತು ತರಿಸಿ ಅದನ್ನು ನೋಡೋಣ.

ಉಪಾಧ್ಯಕ್ಷರು:- ಅವರು ತರಿಸಿ ನಿಮಗೆ ಉತ್ತರ ತಿಳಿಸುತ್ತೇನೆಂದು ಹೇಳುತ್ತಾರೆ. He is ready to furnish the details.

ಶ್ರೀ ಗೋಪೀನಾಥ ಆರ್. ಸಾಂಡ್ರ:- ಶ್ರೀಮಾನ್ ಬೈರೇಗೌಡರೆ ನಾವು ಯಾವುದನ್ನೂ ಬಚ್ಚಿಡುವಂತಹ ಗೋಜಿಗೆ ಹೋಗುವುದಿಲ್ಲ. ಯಾರನ್ನೂ ನಾವು ಪ್ರೊಟೆಕ್ಟ್ ಮಾಡುತ್ತೇವೆಂದು ತಿಳಿದುಕೊಳ್ಳಬೇಡಿ. ನಾವು ಸತ್ಯವಾಗಿ, ನ್ಯಾಯ ನಿಷ್ಠೂರತೆಯಿಂದ ಯಾರ ದಯ ದಾಕ್ಷಿಣ್ಯಕ್ಕೆ, ಇಂಟೆರೆಸ್ಟ್‌ಗೆ ಒಳಗಾಗದೇ ಇಂತಹ ಯಾವುದೇ ಕೆಲಸ ನಮ್ಮ ಖಾತೆಯಲ್ಲಿ ಆದರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ಮತ್ತೊಮ್ಮೆ ನಿಮಗೆ ಹೇಳುತ್ತೇನೆ. ಅದರ ಬಗ್ಗೆ ನೀವು ಯಾರೂ ಚಿಂತೆ ಮಾಡತಕ್ಕದ್ದು ಅಲ್ಲ. ಕೊನೆಯದಾಗಿ ಒಂದು ಮಾತನ್ನು ಹೇಳುತ್ತೇನೆ. ಗೃಹಮಂಡಳಿಯಾಗಲೀ ವಸತಿ ಖಾತೆಯಲ್ಲಿ ಯಾವುದೇ ಲೋಪದೋಷಗಳು ತಮ್ಮ ಗಮನಕ್ಕೆ ಬಂದರೆ ಆಧಾರ ಸಹಿತ ಕೊಡಿ....

ಶ್ರೀ ವಾಟಾಳ್ ನಾಗರಾಜ್:- ಅದು ಗ್ರಹಮಂಡಲಿ. ಅದು ಗೃಹಮಂಡಲಿ ಅಲ್ಲ, ಗ್ರಹಮಂಡಲಿ.

ಶ್ರೀ ಗೋಪೀನಾಥ ಆರ್ ಸಾಂಡ್ರ:- ನಾನೇ ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಅದು ಯಾವ ಗ್ರಹ, ಎಂಟನೇ ಗ್ರಹ.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಸಚಿವರೇ, ಅದು ಶನಿಗ್ರಹ ಎಂದು ಕಾಣುತ್ತದೆ.

ಗ್ರಹಮಂಡಲಿ ಶ್ರೀ ವಾಟಾಳ್ ನಾಗರಾಜ್:- ಅಷ್ಟಮ ಶನಿ ನಿಮಗೆ ವಕ್ಕರಿಸಿಕೊಳ್ಳುತ್ತದೆ. ಅದು

ಶ್ರೀ ಗೋಪೀನಾಥ ಆರ್. ಸಾಂಡ್ರ:- ಮಾನ್ಯ ವಾಟಾಳ್‌ರವರೆ ಕೇಳಿ. ಗ್ರಹಣ ಏನು ಇತ್ತು, ಅದು ಹೋಗಿದೆ ಈಗ. ಸೂರ್ಯ ಗ್ರಹಣ ಆದ ಮೇಲೆ ಚಂದ್ರ ಹೇಗೆ ಪ್ರಕಾಶಮಾನ ಆಗುತ್ತಾನೆ. ಹಾಗೆ ಗೃಹಮಂಡಲಿಯನ್ನು ನಡೆಸುವಂತಹ ನಮಗೆ ಯಾವುದೇ ಬಾಧೆ ಬರುವುದಿಲ್ಲ. ಗ್ರಹಣ ಹೋಗಿದೆ. ಗ್ರಹಣ ಗೇಲೆ ಗ್ರಹಣ್ ಗೇಲೆ ಎಂದು ಮರಾಠಿಯಲ್ಲಿ ಹೇಳುತ್ತಾರೆ. ನಾವು ಅಧಿಕಾರಕ್ಕೆ ಬಂದ ಮೇಲೆ.

ಶ್ರೀ ಆರ್.ವಿ. ದೇಶಪಾಂಡೆ:- ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಈಗ ಗ್ರಹಣ ಹೋಗಿದೆ. ಶನಿ ಕಾಟ ಶುರು ಮಾಡಿದೆ.

ಶ್ರೀ ಗೋಪೀನಾಥ ಆರ್. ಸಾಂಡ್ರ:- ಅದು ತಪ್ಪು ಕಲ್ಪನೆ, ದಯಮಾಡಿ ಇನ್ನು ಮೂರು ತಿಂಗಳು ನೋಡಿ, ಅದು ಶನಿ ಕಾಟನೋ ಏನು ಆಗುತ್ತದೋ ನೋಡಿ.

ಶ್ರೀ ವೈ.ಕೆ. ರಾಮಯ್ಯ:- ಒಂದೇ ಒಂದು ತಾಂತ್ರಿಕವಾದ ಕಷ್ಟ ಹೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು:- ಶ್ರೀಯುತ ಚಂದ್ರೇಗೌಡರು ಹೇಳಿದ ಮೇಲೆ ತಾವು ಕೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ:- ಸನ್ಮಾನ್ಯ ಅಧ್ಯಕ್ಷಿಣಿಯವರೇ, ಇತ್ತೀಚೆಗೆ ಕೇಂದ್ರ ಸರ್ಕಾರದಿಂದ ಮನೆ ಕಟ್ಟುವುದಕ್ಕೆ ಮೊನ್ನೆ ನಡೆದಂಥ ದೊಡ್ಡ ಭೀಕರ ಬಿರುಗಾಳಿಯಲ್ಲಿ ಒಂದು ಮನೆಗೆ 22 ಸಹಸ್ರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಕೊಟ್ಟಿದ್ದಾರೆಂದು ಸದನಕ್ಕೆ ಹೇಳಿದರು ಆ ಮನೆ ಕಟ್ಟುವಾಗ, ಸ್ಥಳೀಯವಾಗಿರತಕ್ಕಂಥಹ, ಗ್ರಾಮೀಣ ಪ್ರದೇಶದಲ್ಲಿರತಕ್ಕಂಥ ಸಲಕರಣೆಗಳು ಏನು ಇವೆ, ಅದನ್ನೇ ಬಳಸಿಕೊಂಡು ಮನೆ ಕಟ್ಟತಕ್ಕಂತಹ ಕಾರ್ಯಕ್ರಮ ಅದು ಎಂದು ಹೇಳಿದ್ದೇವೆ. ಇಲ್ಲಿ ಎರಡೇ ಎರಡು ವಿಚಾರಗಳನ್ನು ನಿಮ್ಮ ಗಮನಕ್ಕೆ ತರುತ್ತೇನೆ. ವಿಶೇಷವಾಗಿ ಮಲೆನಾಡು ಪ್ರದೇಶದಲ್ಲಿ ಬರತಕ್ಕ ಮನೆಗಳು ಗ್ರೂಪ್ ಹೌಸಿಂಗ್ ಸ್ಕೀಮ್ ಆಗುವುದಿಲ್ಲ. ಹಿಂದೆ ಕೊಟ್ಟಿರತಕ್ಕ ಜಾಗಗಳು, ಮತ್ತು ಈಗ ಕೊಟ್ಟಿರತಕ್ಕ ಜಾಗಗಳು ಇವೆ. ನಿಮ್ಮ ಆಶ್ರಯ ಸ್ಕೀಮ್‌ನಲ್ಲಿ ಮುಖ್ಯವಾಗಿರತಕ್ಕ ದೋಷಗಳು ಏನು ಅಂದರೆ ಹಿಂದೆ ಕೊಟ್ಟಿರತಕ್ಕ ಮನೆ ಜಾಗಗಳಲ್ಲಿ ಮನೆ ಕಟ್ಟುವುದಿಲ್ಲ ಎಂದು ಹೇಳಿದ್ದೀರಿ. ಆಶ್ರಯ ಸ್ಕೀಮ್‌ನಲ್ಲಿ ಕೊಟ್ಟಂತಹ ಜಾಗಗಳಲ್ಲಿ ಅಷ್ಟೇ ಮನೆಗಳನ್ನು ಕಟ್ಟುವುದು ಎಂದು ಹೇಳಿದ್ದೀರಿ. ಹೀಗಾಗಿ ಹಿಂದೆ ತೆಗೆದುಕೊಂಡಿರತಕ್ಕ ಬಡವರಿಗೆ ಅನ್ಯಾಯ ಆಗುತ್ತದೆ. ಆದ್ದರಿಂದ ಯಾವುದೇ ಸೈಟ್ ಇರಲಿ. ಅವರು ಈ ವ್ಯಾಪ್ತಿಯ ಮಿತಿಯೊಳಗೆ ಕಟ್ಟತಕ್ಕದ್ದು ಒಂದು. ಮಲೆನಾಡು ಪ್ರದೇಶದಲ್ಲಿ ಗ್ರೂಪ್ ಹೌಸಿಂಗ್ ಸ್ಕೀಮ್‌ನಿಂದ ಸಾಧ್ಯವಾಗುವುದಿಲ್ಲ. ಇವರು ಕಟ್ಟತಕ್ಕಂಥ 30 × 40 ಮನೆಗಳಿಗೆ ಈಗಾಗಲೇ ಏನು ಅರ್ಜಿ ಬಂದಿವೆ ಅಂದರೆ ರಸ್ತೆ ಕೊಡಿ, ಬಾವಿ ಕೊಡಿ, ಶಾಲೆ ಕೊಡಿ ಹೊಸದಾಗಿ ಕಾಲೋನಿ ಕಟ್ಟುತ್ತಿದ್ದೀರಿ, ಆಸ್ಪತ್ರೆ ಕೊಡಿ, ಎಂದು ಕೇಳುತ್ತಿದ್ದಾರೆ. ದಯಮಾಡಿ ಗ್ರಾಮದ ಪಕ್ಕದಲ್ಲಿ ಎಲ್ಲಾ ವ್ಯವಸ್ಥೆ ಇರತಕ್ಕಂಥ ಜಾಗದಲ್ಲಿ ಮನೆಯನ್ನು ಕಟ್ಟುವುದಕ್ಕೆ ಸಾಧ್ಯವೇ ಎನ್ನತಕ್ಕದ್ದನ್ನು ನೀವು ಆಲೋಚನೆ ಮಾಡಿ.

ಶ್ರೀ ಗೋಪಿನಾಥ್ ಆರ್. ಸಾಂಡ್ರ:- ಆದಷ್ಟು ಮಟ್ಟಿಗೆ ತಾವು ಹೇಳಿದಂತಹ ರೋಡುಗಳನ್ನು ಮಾಡಿಕೊಡುವಂತಹ ವ್ಯವಸ್ಥೆಯನ್ನು ಮಾಡಲಿಕ್ಕೆ ನಾವು ಈಗಾಗಲೇ ಒಂದು ಯೋಜನೆಯನ್ನು ಮಾಡುತ್ತಿದ್ದೇವೆ. ತಾವು ರೀ ಹ್ಯಾಬಿಲಿಟೇಶನ್ ಹೌಸಸ್ 22 ಸಾವಿರ ರೂಪಾಯಿಗಳೆಂದು ಹೇಳಿದ್ದೀರಿ. ಅದು ಕಂದಾಯ ಖಾತೆಗೆ ಸಂಬಂಧಪಟ್ಟದ್ದು. ಆದರೂ ಕೂಡ ನನಗೆ ಅದರ ಬಗ್ಗೆ ಸ್ವಲ್ಪ ಜ್ಞಾನವಿರುವುದರಿಂದ ಹೇಳುತ್ತೇನೆ. ಪ್ರಧಾನಿಮಂತ್ರಿಯವರು ನಮ್ಮ ಸರ್ಕಾರಕ್ಕೆ ನಾಲ್ಕು ನಮೂನೆಯ ಮನೆಗಳನ್ನು ಕಟ್ಟಬೇಕೆಂದು ಹೇಳಿದ್ದಾರೆ.

ಶ್ರೀ ವೈ.ಕೆ. ರಾಮಯ್ಯ:- ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುತ್ತಾ ಮೂಲತಃ ಪ್ರೀ ಫ್ಯಾಬ್ರಿಕೇಟೆಡ್ ಮನೆಗಳನ್ನು ಕಟ್ಟಬೇಕೆನ್ನುವಂತಹ ಯೋಜನೆಯನ್ನು ನಾವು ಬದಲಾವಣೆ ಮಾಡಿ

ಮಾರ್ಪಾಟು ಮಾಡಿ, ಹೊಸದಾಗಿ ಸಾಂಪ್ರದಾಯಕವಾದಂತಹ ಮನೆಗಳನ್ನು ಕಟ್ಟುವಂತಹ ಯೋಜನೆಯನ್ನು ಕೈಗೆತ್ತಿಕೊಂಡಿದ್ದೇವೆಂದು ಅಪ್ಪಣೆಯನ್ನು ಕೊಟ್ಟಿದ್ದಾರೆ. ಕೆಳಹಂತದಲ್ಲಿ ಕೆಲಸ ಮಾಡುವಾಗ ಅಲ್ಲಿನ ಅಧಿಕಾರಿಗಳು ಒಂದು ಸಮಸ್ಯೆಯನ್ನು ನಮ್ಮ ಗಮನಕ್ಕೆ ತಂದಿದ್ದಾರೆ. 2,41,000 ಮನೆಗಳನ್ನು ಕಟ್ಟಬೇಕೆನ್ನುವಂತಹ ಒಪ್ಪಂದ ಕಂಟ್ರಾಕ್ಟರುದಾರರ ಜೊತೆಯಲ್ಲಿ ಗುತ್ತಿಗೆದಾರರ ಜೊತೆಯಲ್ಲಿ ಒಪ್ಪಂದ ಮುಗಿದಿದೆ. The Government or the Housing Board have entered into a contract with the contractor for construction of 2,41,000 houses with the pre-fabricated materials on a definite specification. ನೀವು ಅದನ್ನು ಮುರಿದು ಸಾಂಪ್ರದಾಯಕವಾದಂತಹ ಮನೆಯನ್ನು on a different specification ಕಟ್ಟಿಸುತ್ತೇವೆನ್ನುವ ಸಂದರ್ಭದಲ್ಲಿ does it not amount to breach of contract? ಈ ಒಪ್ಪಂದವನ್ನು ಮುರಿದಂತಹ ಸಂದರ್ಭದಲ್ಲಿ ನೀವು ಅದರ ಮೇಲೆ ಯಾವ ರೀತಿ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ, ಸಿ.ಒ.ಡಿ. ಸಿ.ಬಿ.ಐ. ತನಿಖೆ ಮಾಡುವುದಕ್ಕೆ ಸಾಧ್ಯ? ಒಪ್ಪಂದವನ್ನು ಮುರಿದ ಕಾರಣಕ್ಕಾಗಿ ಆ ಕಂಟ್ರಾಕ್ಟರುಗಳು ನಿಮ್ಮ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ನೀವು ಏನು ಮಾಡುತ್ತೀರಿ ದಯಮಾಡಿ ಅದಕ್ಕೆ ಉತ್ತರವನ್ನು ಕೊಡಿ.

ಶ್ರೀ ಗೋಪಿನಾಥ್ ಆರ್. ಸಾಂಡ್ರ:- ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಇದು ಉತ್ತರ ರೂಪವಾಗಿ ಇದು ನಿಜ, ಅಗ್ರಿಮೆಂಟ್ ನಮಗೂ ಮತ್ತು ಗುತ್ತಿಗೆದಾರರಿಗೂ ಆಗಿದೆ. ಗುತ್ತಿಗೆದಾರರಿಗೆ ನಾವು ಇಷ್ಟು ಹಣಕೊಡುತ್ತೇವೆ, ಇಷ್ಟು ಮನೆ ಪೂರ್ತಿಯಾಗಿ, ಇಷ್ಟು ವಿತ್ ಇನ್ ಎ ಟೈಮ್ ಕೊಡಬೇಕೆಂದು ಹೇಳಿದ್ದೆವು. ಈ ಸಮಸ್ಯೆ ಬರಬಾರದು ಈ ಸಮಸ್ಯೆಯಿಂದ ಮತ್ತೆ ಗೃಹಮಂಡಲಿಗೆ ತೊಂದರೆ ಆಗಬಾರದು ಎನ್ನುವ ದೃಷ್ಟಿಯಿಂದ ನಾವು ಯಾರ್ಯಾರಿಗೆ ಹಣವನ್ನು ಮುಂಗಡವಾಗಿ ಕೊಟ್ಟಿದ್ದೇವೊ, ಯಾರೊಡನೆ ನಾವು ಕಂಟ್ರಾಕ್ಟ್ ಮಾಡಿಕೊಂಡಿದ್ದೆವು, ಅವರನ್ನೆಲ್ಲಾ ಕರೆಯಿಸಿ ಈ ಪರಿಸ್ಥಿತಿ ಹೀಗಿದೆ, ತಾವು ಮತ್ತೆ ಯಾವುದೇ ಕೋರ್ಟ್ ಕಛೇರಿಗೆ ಹೋಗಬಾರದು. ಹೊಸ ಫ್ರೆಶ್ ಅಗ್ರಿಮೆಂಟ್ ಮಾಡಿಕೊಂಡು ಬರೀ 40 ಸಾವಿರ ಮನೆಗಳಿಗೆ ಅಲ್ಲ, ನಾವು ಇನ್ನು ಕಟ್ಟಿಸಬೇಕಾದಂತಹ ಬಹಳಷ್ಟು ಮನೆಗಳು ಇವೆ. ನಾವು ಸಾಲ ಎಷ್ಟು ಕೊಟ್ಟಿದ್ದೇವೆ, ಅದರಲ್ಲಿ ಶೇಕಡ 20ರಷ್ಟು ಮುರಿದುಕೊಂಡು ಉಳಿದ ಹಣವನ್ನು ನಿಮಗೆ ಕೊಡುತ್ತೇವೆ. ನಿಮ್ಮ ಕೆಲಸವೂ ಸರಿಯಾಗಿರಬೇಕು. ನಮ್ಮ ಮನೆಯೂ ಆಗಿರಬೇಕೆನ್ನುವ ದೃಷ್ಟಿಯಿಂದ ಮಾಡಿದ್ದೇವೆ. ಗೃಹಮಂಡಳಿ ಮತ್ತು ಗುತ್ತಿಗೆದಾರರ ಮೇಲೆ ಏನು ಅಗ್ರಿಮೆಂಟ್ ಆಗಿದೆ ಆ ಭಯ ಇರಕೂಡದೆಂದು ನಾನು ಹೇಳಿದ್ದೇನೆ.

ಶ್ರೀ ವೈ.ಕೆ. ರಾಮಯ್ಯ:- ಹೊಸ ಒಪ್ಪಂದಗಳು ಆಗಿದೆಯೋ ಎಂದು ಕೇಳುತ್ತಿದ್ದೇವೆ. ನಿಮಗೂ ಆ ಕಷ್ಟ ಇದೆ ಎಂದು ಕಾಣಿಸುತ್ತದೆ. ಅಧಿಕಾರಿಗಳನ್ನು ಕೇಳಿದರೆ ಕಂಟ್ರಾಕ್ಟರುಗಳು ಬರುವುದಿಲ್ಲ ಎಂದು ಹೇಳುತ್ತಾರೆ. ಹೊಸ ಒಪ್ಪಂದಗಳು ಆಗಿದೆ ಎಂದು ಹೇಳಿದರೆ ನಾವು ಇಂಜಿನಿಯರ್‌ಗಳನ್ನು ಕೇಳುತ್ತೇವೆ. ಅದರ ಪ್ರಕಾರ ಕೆಲಸವನ್ನು ಮಾಡಿ ಎಂದು ಕೇಳುತ್ತೇವೆ.

ಶ್ರೀ ಗೋಪಿನಾಥ್ ಆರ್. ಸಾಂಡ್ರ:- ನಾನೇ ಮಾಡಿದ್ದೇನೆ. ನಾನು ಆ ಕಂಟ್ರಾಕ್ಟರ್ ಎಲ್ಲರನ್ನು ಕರೆಯಿಸಿ ಅವರೊಡನೆ ಮಾತನಾಡಿದ್ದೇನೆ. ಅವರೂ ಒಪ್ಪಿಕೊಂಡಿದ್ದಾರೆ. 40 ಸಾವಿರ ಮನೆಗಳಲ್ಲಿ ಯಾರಿಗೆ ಎಷ್ಟು ಕೊಡಬೇಕೆಂದು ತಾಲ್ಲೂಕುವಾರು ಕ್ಷೇತ್ರವಾರು ನಾವು ಮಾಡಿದ್ದೇವೆ. ಅವರು ಕೆಲಸ ಮಾಡಲಿಕ್ಕೆ ಈಗಾಗಲೇ ಬಂದಿದ್ದಾರೆ.

ಶ್ರೀ ಬಿ.ಹೆಚ್. ಬನ್ನಿಕೋಡ್:- ಮಾನ್ಯ ಸಚಿವರು ಹೊಸದಾಗಿ ಮನೆಗಳನ್ನು ಕಟ್ಟುವ ಬಗ್ಗೆ ಹೇಳುತ್ತಿದ್ದಾರೆ. 87ರಿಂದ ಇಲ್ಲಿಯವರೆಗೆ ಜನತಾ ಹೌಸಿಂಗ್ ಸ್ಕೀಂನಲ್ಲಿ ಪ್ಲಿಂತ್ ಆಗಿರುವಂಥ, ಗೋಡೆ ಕಟ್ಟಿರುವಂತವುಗಳು ಅಪೂರ್ಣವಾಗಿರುವ ಮನೆಗಳು ಬಿದ್ದು ಹೋಗುತ್ತಿವೆ. ಇವುಗಳಿಗೆ 42 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕಿದೆ. ಬಡವರಿಗೆ ಕೊಡಬೇಕಾದ ಹಣ.

ಉಪಾಧ್ಯಕ್ಷರು!:- ಇದರ ಬಗ್ಗೆ ಆಗಲೇ ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಉಪಾಧ್ಯಕ್ಷಿಣಿಯವರೆ, ಬೆಳಿಗ್ಗೆ ಈ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇರಲಿಲ್ಲ. ಆಗ ನಾವು ಒಂದು ಪ್ರಶ್ನೆಯನ್ನು ಎತ್ತಿದ್ದೆವು. ಏನೆಂದರೆ, ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾದಂಥ....

† ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ):- ನಾವು 145ನೇ ನಿಯಮದಡಿ ಒಂದು ನಿರ್ಣಯವನ್ನು ಕಳುಹಿಸಿದ್ದೇವೆ. ಆ ನಿರ್ಣಯ ಇಡೀ ಸದನ ಒಟ್ಟಾಗಿ ಸೇರಿ ಅನಿವಾರ್ಯವಾಗಿ ಮಾಡಲೇಬೇಕಾಗಿರುವಂಥ ನಿರ್ಣಯ. ಈಗ ಮುಂಬೈ ಅಗ್ನಿಕುಂಡವಾಗಿದ್ದು, ಇದರ ವಿಷಯವಾಗಿ ಇವೊತ್ತು ಪುನಃ ಸಂಜೆ ಪತ್ರಿಕೆಯಲ್ಲಿ ಬಂದಿದೆ. ನನ್ನ ನಿರ್ಣಯವನ್ನು ಕುರಿತು ಬೆಳಿಗ್ಗೆ ಮಾನ್ಯ ಸಭಾಧ್ಯಕ್ಷರು ಮುಖ್ಯಮಂತ್ರಿಗಳು ಬರಲಿ ತೆಗೆದುಕೊಳ್ಳೋಣ ಎಂದು ಹೇಳಿದರು. ಈಗ ಸದನಕ್ಕೆ ಮುಖ್ಯಮಂತ್ರಿಗಳು ಬಂದಿದ್ದಾರೆ. ಆದುದರಿಂದ, ಆ ನಿರ್ಣಯವನ್ನು ಒಟ್ಟಾರೆ ಮಾಡಿ, ಏಕೆಂದರೆ, ಇಡೀ ದೇಶದಲ್ಲಿ ಎಲ್ಲಿಯೂ ಕೂಡ ಶಾಸನ ಸಭೆಗಳು ನಡೆಯುತ್ತಿಲ್ಲ. ನಾವು ಮುಂಬೈಯಲ್ಲಿ ನಡೆಯುತ್ತಿರತಕ್ಕಂಥ ಭೀಕರವಾದಂಥ ಘಟನೆ ಬಗ್ಗೆ ಗಮನವನ್ನಾದರೂ ಸೆಳೆಯಬೇಕು. ಆದುದರಿಂದ, ಈ ಒಂದು ನಿರ್ಣಯವನ್ನು ತಾವು ಸರ್ವಾನುಮತದಿಂದ ಅಂಗೀಕರಿಸಿದರೆ ಬಹಳ ಒಳ್ಳೆಯದು. ಆ ದೃಷ್ಟಿಯಿಂದ ತಾವು ಆಲೋಚನೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಅಲ್ಲದೆ, ಆ ನಿರ್ಣಯದಲ್ಲಿ ಕನ್ನಡಿಗರನ್ನು ಓಡಿಸುತ್ತಿರತಕ್ಕಂಥಾದ್ದು ತೀರಾ ಖಂಡನೀಯ ಎಂದು ಸೇರಿಸಬೇಕು. ಇಲ್ಲದಿದ್ದರೆ, ನಿರ್ಣಯ ಮಾಡಿ ಏನೂ ಪ್ರಯೋಜನವಿಲ್ಲ. ಈಗ ತಂದಿರುವಂಥ ನಿರ್ಣಯದಲ್ಲಿ ಉಪ್ಪು ಇಲ್ಲ, ಹುಳಿ ಇಲ್ಲ. ಸುಮ್ಮನೆ ನೀವು ಒಂದು ನಿರ್ಣಯ ಮಾಡಿ ಅದನ್ನು ಸಂತಾಪ ಸೂಚಕ ಸಭೆ ಮಾಡುವಂತೆ ಮಾಡಬೇಡಿ. ಆ ನಿರ್ಣಯದಲ್ಲಿ ಏನಿದೆಯೆಂದು ಓದಿ ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ:- 145ನೇ ನಿಯಮದಲ್ಲಿ 7 ದಿವಸಗಳ ಕಾಲ ಕಾಲಮಿತಿ ಹಾಕಿದ್ದೀರಿ. ನಾನು ಬೆಳಿಗ್ಗೆ ಮಾನ್ಯ ಸಭಾಧ್ಯಕ್ಷರ ಗಮನಕ್ಕೆ ತಂದಾಗ ಅದನ್ನು ತೆಗೆದುಕೊಳ್ಳಬಹುದೆಂದು ಹೇಳಿದ್ದಾರೆ. ನಿಯಮ 145ರಲ್ಲಿ ನಾವು ಕೊಟ್ಟ 7 ದಿವಸಗಳ ಕಾಲಮಿತಿಗೆ ತಾವು ಅಪ್ಪಣೆ ಕೊಟ್ಟಿದ್ದೀರೆಂದು ಭಾವಿಸುತ್ತಾ, ನಿರ್ಣಯವನ್ನು ಈ ರೀತಿ ಮಾಡಿದ್ದೇವೆ.

ಉಪಾಧ್ಯಕ್ಷಿಣಿಯವರು:- ಈಗ ಸದನದ ಅಭಿಪ್ರಾಯ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಅದರ ಬಗ್ಗೆ ತಮಗೆ ಅಧಿಕಾರವಿದೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಉಪಾಧ್ಯಕ್ಷಿಣಿಯವರೆ, ವಿರೋಧ ಪಕ್ಷದ ನಾಯಕರು ನಿನ್ನೆ ಒಂದು ವಿಷಯವನ್ನು ಎತ್ತಿ ಅದಕ್ಕೆ ಉತ್ತರ ಬಯಸಿದ್ದರು. ಅದಕ್ಕೆ ಉತ್ತರ ಈಗ ಸಿದ್ಧವಾಗಿದೆ.

ಉಪಾಧ್ಯಕ್ಷಿಣಿಯವರು:- ಈಗ ಬೇಡ, ಈಗ ತೆಗೆದುಕೊಂಡಿರುವ ವಿಷಯದ ನಂತರ ಹೇಳಿ.

† ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):- ಮಾನ್ಯ ಉಪಾಧ್ಯಕ್ಷಿಣಿಯವರೆ, ನಿರ್ಣಯವನ್ನು ತಾವು ಏನು ಕಳುಹಿಸಿದ್ದೀರಿ, ಅದನ್ನು ನಾವೆಲ್ಲರೂ ಸರ್ವಾನುಮತದಿಂದ ಅಂಗೀಕರಿಸೋಣ. ಆದರೆ, ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರಿಗೆ ಹೇಳಬೇಕೆಂದರೆ, ನನ್ನ ಅನುಭವದ ಪ್ರಕಾರ ನಿನ್ನೆ ಹಾಗೂ ಮೊನ್ನೆ ದಿವಸ ಕೂಡ ನಾನು ಮುಂಬೈನಲ್ಲಿ ಸಂಬಂಧಪಟ್ಟವರೊಡನೆ ಮಾತನಾಡಿದ್ದೇನೆ. ಅಲ್ಲಿರತಕ್ಕಂಥ ಕನ್ನಡಿಗರಿಗೆ ಏನಾದರೂ

ತೊಂದರೆಯಾಗಿದೆಯೆ? ಎನ್ನುವುದರ ಬಗ್ಗೆ ಅಲ್ಲಿಯ ಎಲ್ಲಾ ಕನ್ನಡ ಸಂಘಸಂಸ್ಥೆಗಳವರು ನಮಗೆ ಯಾರು ಪರಿಚಯವಿದ್ದಾರೋ ಅವರ ಹತ್ತಿರ ಹಾಗೂ ಇನ್ನೂ ಅನೇಕರನ್ನು ದೂರವಾಣಿ ಮುಖಾಂತರ ಸಂಪರ್ಕಿಸಿ ಕೇಳಿದ್ದೇನೆ. ಸ್ವಲ್ಪ ಭಯ ಪಟ್ಟುಕೊಂಡು ಕೆಲವು ಕನ್ನಡಿಗರು ಇಲ್ಲಿಗೆ ಬಂದಿದ್ದಾರೆಯೇ ಹೊರತು ಯಾವುದೇ ಸಾವು-ನೋವು, ಆಸ್ತಿ-ಪಾಸ್ತಿ ನಷ್ಟ ಆಗಿಲ್ಲವೆಂಬುದು ನಮಗೆ ವರ್ತಮಾನ ಬಂದಿದೆ. ಮಹಾರಾಷ್ಟ್ರದ ಮುಖ್ಯಮಂತ್ರಿಗಳಾದ ಸನ್ಮಾನ್ಯ ಸುಧಾಕರ ನಾಯಕ್‌ರವರ ಜೊತೆ, ಕನ್ನಡ ಸಂಘಗಳ ಸಾಮಾನ್ಯವಾಗಿ ನಮಗೆ ಪರಿಚಯವಿದ್ದಂಥ ಅಧ್ಯಕ್ಷರುಗಳ ಹಾಗೂ ಇತರೆ ಎಲ್ಲರ ಜೊತೆ ಮಾತನಾಡಿದ್ದೇನೆ. let us understand the truth. ಆಗದಿರುವುದನ್ನು ಇವೊತ್ತು ಇಲ್ಲಿ ಪ್ರಸ್ತಾಪ ಮಾಡಿ ಅದಕ್ಕೆ ನಾವು ಬೆಂಕಿ ಹಚ್ಚುವಂಥ ಪ್ರಯತ್ನ ಮಾಡುವುದು ಬೇಡ. ಅದರ ಬಗ್ಗೆ ಆದಷ್ಟು ಸಂಯಮದಿಂದ ಇಲ್ಲಿ ಮಾತನಾಡೋಣ. ದೇವರ ದಯೆಯಿಂದ ಕನ್ನಡಿಗರ ಪ್ರಾಣದ ಬಗ್ಗೆಯಾಗಲಿ, ಆಸ್ತಿಯ ಬಗ್ಗೆಯಾಗಲಿ ಯಾವುದೇ ಅನಾಹುತ ಕೂಡ ಆಗಿಲ್ಲ. ಆಗದಿರುವುದನ್ನು ನಾವು ಇವೊತ್ತು ಪ್ರಸ್ತಾಪಿಸಿ, ಅದರಿಂದ ಮತ್ತೆ ಏನಾದರೂ ಆದರೆ ನಾವುಗಳೆಲ್ಲರೂ ಅದರ ಜವಾಬ್ದಾರಿ ಹೊರಬೇಕಾಗುತ್ತದೆ. ನಾನು ಎಲ್ಲಾ ಕನ್ನಡ ಸಂಘಗಳವರ ಹತ್ತಿರ ಮಾತನಾಡಿದ್ದೇನೆ. ನಾನು ಸುಮಾರು 10-15 ಜನರ ಜೊತೆ ಮಾತನಾಡಿದ್ದೇನೆ. ಏಕೆಂದರೆ, ಮುಂಬೈನಲ್ಲಿ ಅನೇಕ ಭಾಗಗಳಿವೆ. ಅವುಗಳಲ್ಲಿ ಘಾಟ್‌ಕೋಪರ್ ಮತ್ತು ಅಂಧೇರಿ ಇದೆ. ಈ ಎಲ್ಲಾ ಭಾಗದಲ್ಲಿರುವ ಕನ್ನಡಿಗರ ಪರಿಚಯವಿದ್ದು, ಎಲ್ಲರ ಜೊತೆಯೂ ದೂರವಾಣಿ ಮುಖಾಂತರ ಮಾತನಾಡಿದಾಗ ಅವರು ''ಇಲ್ಲಿ ದೇವರ ದಯೆಯಿಂದ ಏನೂ ಆಗಿಲ್ಲ'' ಎಂದು ಹೇಳಿದರು. ಈ ತಿಂಗಳ 24ನೇ ತಾರೀಖಿನಂದು ಮುಂಬೈನಲ್ಲಿ ಕರ್ನಾಟಕ ಸಂಘದವರು ಒಂದು ಸಭೆಯನ್ನು ಕರೆದಿದ್ದಾರೆ. ಆ ಸಭೆಗೆ ಹಾಜರಾಗುವುದಕ್ಕೆ ನಾನು ಮುಂಬೈಗೆ ಹೋಗುತ್ತಿದ್ದೇನೆ. ನಾನು ''ಮುಂಬೈನಲ್ಲಿ ಪ್ರಕ್ಷುಬ್ಧ ಹಾಗೂ ಗೊಂದಲ ಪರಿಸ್ಥಿತಿ ಇರುವುದರಿಂದ ನಾನು ಬರುವುದಕ್ಕಾಗುತ್ತಿಲ್ಲ, ನೀವು ಸಭೆಯನ್ನು ನಡೆಸುವುದಕ್ಕಾಗುತ್ತದೆಯೆ? ಸಭೆಯನ್ನು ಮುಂದೂಡಿ'' ಎಂದು ಕೇಳಿದಾಗ ಅವರು ''ಇಲ್ಲಿರುವ ಕನ್ನಡಿಗರಿಗೆ ದೇವರ ದಯೆಯಿಂದ ಏನೂ ಆಗಿಲ್ಲ, ಆದುದರಿಂದ, ದಯಮಾಡಿ ಬನ್ನಿ, ನಾವು ಸಮಾಧಾನದಿಂದ ನೆಮ್ಮದಿಯಾಗಿದ್ದೇವೆ'' ಎಂದು ಹೇಳಿದ್ದಾರೆ. ಪರಿಸ್ಥಿತಿ ಹೀಗಿರುವಾಗ ಪುನಃ ಅದರ ಬಗ್ಗೆ ವಿಚಾರ ಪ್ರಸ್ತಾಪಿಸಿದರೆ ಅದರಿಂದ ಏನಾದರೂ ತೊಂದರೆಯಾದರೆ, ಅದರ ಜವಾಬ್ದಾರಿಯನ್ನು ನಾವುಗಳೆಲ್ಲರೂ ಹೊರಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:- ತಾವು ವಸ್ತುಸ್ಥಿತಿಯನ್ನು ಒಪ್ಪಿಕೊಳ್ಳುವುದಿಲ್ಲ ಎಂದರೆ ಏನರ್ಥ?

ಶ್ರೀ ಎಂ. ವೀರಪ್ಪಮೊಯಿಲಿ:- ಹಾಗಲ್ಲ. ಈಗ ಆ ವಿಷಯವನ್ನು ಪ್ರಸ್ತಾಪಿಸುವುದು ಬೇಡ. ಏಕೆಂದರೆ, ಏನೂ ಆಗದಿರುವುದನ್ನು ನಾವು in that case no resolution. Let us not do any Resolution.

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಉಪಾಧ್ಯಕ್ಷಿಣಿಯವರೆ, ನನ್ನ ಪ್ರಾರ್ಥನೆ ಇಷ್ಟು....

ಶ್ರೀ ಎಂ. ವೀರಪ್ಪಮೊಯಿಲಿ:- ಇದರ ಬಗ್ಗೆ ಚರ್ಚೆ ಬೇಡ. ನಮ್ಮ ನಿರ್ಣಯ ಈ ರೀತಿ ಇದೆ. 1992ನೇ ಡಿಸೆಂಬರ್ 6ನೇ ದಿನಾಂಕದಂದು ಅಯೋಧ್ಯೆ ಘಟನೆ ನಂತರ ರಾಷ್ಟ್ರಾದ್ಯಂತ ನಡೆದ ಮತೀಯ ಹಿಂಸೆಗಳನ್ನು ವಿಶೇಷವಾಗಿ ಅಹಮದಾಬಾದ್ ಮತ್ತು ಮುಂಬೈ ನಗರಗಳಲ್ಲಿ ನಡೆದ ಮುಂದುವರೆದ ಹಿಂಸಾಚಾರಗಳನ್ನು ಈ ಸದನವು ತೀವ್ರವಾಗಿ ಖಂಡಿಸುತ್ತದೆ ಮತ್ತು ಮತೀಯ ಗಲಭೆಗಳಲ್ಲಿ ನೊಂದವರಿಗೆ ತನ್ನ ದುಃಖ ವ್ಯಕ್ತಪಡಿಸಿ ರಾಷ್ಟ್ರದಲ್ಲಿ ವಿಶೇಷವಾಗಿ ರಾಜ್ಯದಲ್ಲಿ ಹಿಂಸಾಚಾರಗಳು ಮರುಕಳಿಸದಂತೆ ಶಾಂತಿ, ಸಂಯಮದಿಂದ ಕೋಮು ಸೌಹಾರ್ದವನ್ನು ಕಾಪಾಡಿಕೊಂಡು ಬರಲು ಜನತೆಯಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು):- ಮಾನ್ಯ ಉಪಾಧ್ಯಕ್ಷಿಣಿಯವರೆ, ನಾನು ಈ ನಿರ್ಣಯವನ್ನು ಸ್ವಾಗತಿಸುತ್ತಿದ್ದೇನೆ. ಇದು ಸ್ವಚ್ಛ ನಿರ್ಣಯವಾಗಿದ್ದು, ನೀವು ಮಾಡಿರುವುದು ಯೋಗ್ಯವಾಗಿದೆ. ಏಕೆಂದರೆ, ನಿನ್ನೆ ಪ್ರಧಾನಮಂತ್ರಿಯವರು ಪ್ರಕ್ಷುಬ್ಧ ಹಾಗೂ ಉದ್ರಿಕ್ತ ಪರಿಸ್ಥಿತಿಯಿರುವ ಮುಂಬೈಗೆ ಭೇಟಿ ಕೊಟ್ಟಿದ್ದಾರೆ. ಆದರೂ ಸಹ ಅಲ್ಲಿ ಇನ್ನೂ ಗಲಭೆ, ಗಲಾಟೆಗಳು ನಡೆಯುತ್ತಿರುವ ದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಗಳು ಏನು ಒಂದು ನಿರ್ಣಯ ಮಂಡಿಸಿದ್ದಾರೆ, ಅದನ್ನು ನಾನು ಅನುಮೋದಿಸಿ, ಸ್ವಾಗತಿಸುತ್ತೇನೆ.

ಉಪಾಧ್ಯಕ್ಷಿಣಿಯವರು:- ಈಗ ಮಾನ್ಯ ಮುಖ್ಯಮಂತ್ರಿಗಳು ಸಭೆಯ ಮುಂದೆ ತಂದಿರುವ ನಿರ್ಣಯಕ್ಕೆ ಸಭೆಯ ಸರ್ವಾನುಮತದ ಒಪ್ಪಿಗೆ ಇದೆಯೆಂದು ನಾನು ಭಾವಿಸುತ್ತೇನೆ.

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು ಮನವಿ ಮಾಡಿಕೊಳ್ಳುತ್ತಿದ್ದೇನೆ. ಏನೆಂದರೆ, ಆಂಧ್ರಪ್ರದೇಶದ ಮುಖ್ಯಮಂತ್ರಿಗಳು ಬಚಾವತ್ ತೀರ್ಪನ್ನು ಮರು ಪರಿಶೀಲನೆ ಮಾಡುವುದಿಲ್ಲವೆಂದು ಮೊನ್ನೆ ದಿವಸ ಒಂದು ಹೇಳಿಕೆ ಕೊಟ್ಟಿದ್ದಾರೆ. ಈ ಕುರಿತು ಬೆಳಿಗ್ಗೆ ಸದನದಲ್ಲಿ ತಮ್ಮ ಗಮನ ಸೆಳೆಯುವುದಕ್ಕೆ ಪ್ರಯತ್ನ ಪಟ್ಟೆ. ಇಂತಹ ಪರಿಸ್ಥಿತಿಯಲ್ಲಿ ನಮ್ಮ ಸರ್ಕಾರದ ನಿಲುವೇನು? ಕೃಷ್ಣಾ ಯೋಜನೆ ಬಗ್ಗೆ ಮತ್ತೇನಾದರೂ ತಾವು, ಆಂಧ್ರಪ್ರದೇಶದ ಮುಖ್ಯಮಂತ್ರಿಗಳು ಹಾಗೂ ಮಹಾರಾಷ್ಟ್ರ ಮುಖ್ಯಮಂತ್ರಿಗಳು ಒಟ್ಟಿಗೆ ಸೇರುತ್ತಿದ್ದೀರಾ? ಈ ಹಿಂದೆ ಎರಡು ಬಾರಿ ಸಭೆ ಸೇರಿದ್ದೀರಿ, ಮೂರನೆಯ ಸಭೆ ಸೇರಲಿಲ್ಲ. ಮೂರನೆಯ ಸಭೆ ಸೇರಬೇಕೆಂಬುದರ ಬಗ್ಗೆ ಅವರೂ ಕೂಡ ಕಾಳಜಿ ವಹಿಸಿದ್ದಾರೆ. ಅಲ್ಲದೆ, ಇದರ ಜೊತೆಗೆ ಆಂಧ್ರಪ್ರದೇಶದ ಮುಖ್ಯಮಂತ್ರಿಗಳು ಪ್ರಶ್ನೆಗೆ ಉತ್ತರವಾಗಿ ಮಾತನಾಡುತ್ತಿರತಕ್ಕಂಥ ಸಂದರ್ಭದಲ್ಲಿ ರಾಯಚೂರು ಮತ್ತು ಗುಲ್ಬರ್ಗಗಳಲ್ಲಿ ನಕ್ಸಲೀಯ ನೆಲೆಗಳಿವೆಯೆಂದು ಹೇಳಿದ್ದಾರೆ. ಈ ಬಗ್ಗೆ ತಮ್ಮ ನಿಲುವು ಏನು? ತಮ್ಮ ಸರ್ಕಾರದ ವಿಚಾರಗಳೇನು? ಸರ್ಕಾರಕ್ಕೆ ಈ ವಿಚಾರ ಗೊತ್ತಿದೆಯೆ? ಆಂಧ್ರ ಮುಖ್ಯಮಂತ್ರಿಗಳು ಈ ಮಾತನ್ನು ಹೇಳಬೇಕಾದರೆ ಅವರು ಬಹಳ ಜವಾಬ್ದಾರಿಯಿಂದ ಹೇಳಿದ್ದಾರೆಂದು ನಾನು ಅಂದುಕೊಂಡಿದ್ದೇನೆ. ರಾಯಚೂರು ಮತ್ತು ಗುಲ್ಬರ್ಗಗಳಲ್ಲಿ ನಕ್ಸಲೀಯ ಚಟುವಟಿಕೆಗಳ ನೆಲೆ ಇದೆಯೆಂದು ಹೇಳಿರುವ ವಿಷಯ ಪತ್ರಿಕೆಗಳಲ್ಲಿಯೂ ಬಂದಿದೆ. ಇದಲ್ಲದೆ, ತುಂಗಭದ್ರಾ ಮಂಡಳಿಯನ್ನು ರದ್ದು ಮಾಡುವ ಬಗ್ಗೆ ನಾವು ಮೊದಲಿನಿಂದಲೂ ಒತ್ತಾಯ ಮಾಡುತ್ತಿದ್ದೇವೆ. ನಮ್ಮ ರಾಜ್ಯದ ರೈತರಿಗೆ ತುಂಗಭದ್ರಾ ಮಂಡಳಿಯಿಂದ ತೀವ್ರವಾಗಿ ಅನ್ಯಾಯವಾಗುತ್ತಿದೆ. ಈ ಮಂಡಳಿಯನ್ನು ರದ್ದುಮಾಡುವ ಬಗ್ಗೆ ಸರ್ಕಾರದ ಕಾರ್ಯಕ್ರಮವೇನು? ಸರ್ಕಾರ ಆಂಧ್ರಪ್ರದೇಶದ ಜೊತೆ ಮಾತುಕತೆ ಆಡುತ್ತಿದೆಯೆ? ನಮ್ಮ ರೈತರುಗಳಿಗೆ ತೊಂದರೆಯಾಗಿರುವ ಬಗ್ಗೆ ತಾವು ಏನಾದರೂ ಪರಿಶೀಲನೆ ಮಾಡುತ್ತಿದ್ದೀರಾ? ಈ ಬಗ್ಗೆ ತಾವು ಸ್ಪಷ್ಟವಾದ ವಿಚಾರಗಳನ್ನು ತಿಳಿಸಬೇಕು. ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾದ ಶ್ರೀ ವಿಜಯ ಭಾಸ್ಕರರೆಡ್ಡಿಯವರು ಈ ರೀತಿ ಹೇಳಿರುವುದರ ಬಗ್ಗೆ ತಮ್ಮ ನಿಲುವು ಏನು?

ಶ್ರೀಮತಿ ಮೋಟಮ್ಮ:- ಸದನದಲ್ಲಿ ಬರೀ ಸಾಮಾನ್ಯ ಪ್ರಶ್ನೆಗಳೇ ಬರುತ್ತಿದೆ. ನಾವು ಗಮನ ಸೆಳೆಯುವ ಸೂಚನೆಗೋಸ್ಕರ ಕಾಯ್ದುಕೊಂಡು ಕುಳಿತಿದ್ದೇವೆ. ಗಮನ ಸೆಳೆಯುವ ಸೂಚನೆ ಬಹಳ ಮಹತ್ವವಾದುದು. ನಮಗೆ ಅವಕಾಶವಿಲ್ಲವೆಂದರೆ ಏನು ಮಾಡಬೇಕು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಮಾನ್ಯ ಉಪಾಧ್ಯಕ್ಷಿಣಿಯವರೆ, ನಾನು ತಮಗೊಂದು ಪತ್ರ ಕಳುಹಿಸಿದ್ದೇನೆ. ಆ ವಿಷಯ ಪ್ರಸ್ತಾಪಿಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಏಕೆಂದರೆ, ಆರು ಗಂಟೆಗೆ ನಾನು ಊರಿಗೆ ಹೋಗಬೇಕಾಗಿದೆ.

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಉಪಾಧ್ಯಕ್ಷಿಣಿಯವರೆ, ಕಳೆದ 3–4 ದಿವಸಗಳಿಂದ ಸದನದಲ್ಲಿ ಸಾಕಷ್ಟು ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಲಾಗಿದೆ. ಉದಾಹರಣೆಗೆ, ಮೈಸೂರು ಡೈರಿ ವಿಚಾರದ ಬಗ್ಗೆ, ಬಚಾವತ್ ತೀರ್ಪಿನ ಬಗ್ಗೆ ಈಗ ತಾನೆ ಪ್ರಸ್ತಾಪಿಸಿದ್ದಾರೆ ಮತ್ತು ಹುಬ್ಬಳ್ಳಿಯಲ್ಲಿರುವ ಕಮರ್ಶಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್ ಬಗ್ಗೆ ಪ್ರಸ್ತಾಪಿಸಿರುವುದಕ್ಕೆ ಇವುಗಳಿಗೆಲ್ಲಾ ತಮ್ಮ ಹೇಳಿಕೆ ಸಿದ್ಧವಾಗಿದೆಯೆ? ಪ್ರಸ್ತಾಪಿಸಿರುವ ವಿಷಯಗಳಿಗೆ ಇನ್ನೂ ಉತ್ತರ ಬಂದಿಲ್ಲ. ಆದುದರಿಂದ, ತಾವು ಅವುಗಳಿಗೆ ಉತ್ತರ ಕೊಡಬೇಕಾಗುತ್ತದೆ. ಗಮನ ಸೆಳೆಯುವ ಸೂಚನೆ ಬಹಳ ಮಹತ್ವವಾಗಿದೆ, ನಾನು ಇಲ್ಲವೆಂದು ಹೇಳುವುದಿಲ್ಲ. ಅದರಲ್ಲಿ ಚರ್ಚೆಯಾಗಬೇಕು. ಆದರೆ, ಶೂನ್ಯ ವೇಳೆಯಲ್ಲಿ ಯಾವ ವಿಷಯಗಳನ್ನು ಎತ್ತಲಾಗಿದೆ, ಅವುಗಳಿಗೆಲ್ಲಾ ಉತ್ತರ ಕೊಡಬೇಕು.

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿ):– ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಬಚಾವತ್ ತೀರ್ಪಿನ ವಿಷಯದಲ್ಲಿ ಎರಡು ಭಾಗಗಳಿದ್ದು, ಒಂದು 'ಎ' ಭಾಗ ಮತ್ತೊಂದು 'ಬಿ' ಭಾಗವಾಗಿದೆ. 'ಬಿ' ಭಾಗ ಸರ್‌ಪ್ಲಸ್ ವಾಟರ್ ಡಿಸ್ಟ್ರಿಬ್ಯೂಷನ್ ಬಗ್ಗೆ ಇದೆ. ಈ ವಿಷಯ 2000 ಎ.ಡಿ. ನಂತರ ಬರುತ್ತದೆ. ಈಗ ಆ ಪ್ರಶ್ನೆ ಉದ್ಭವಿಸುವುದಿಲ್ಲ.

5.20 ಪಿ.ಎಂ

ಆದರೆ 'ಎ' ಭಾಗ ಎಂದರೆ ನಮ್ಮ ಪಾಲಿಗೆ ಏನು ನೀರು ಬರುತ್ತದೆ ಅದನ್ನು 2000ನೇ ಇಸವಿಯೊಳಗೆ ಉಪಯೋಗ ಮಾಡಿಕೊಳ್ಳುತ್ತೇವೆ. ಒಂದು ಹನಿ ನೀರನ್ನೂ ಆಂಧ್ರಪ್ರದೇಶಕ್ಕೆ ಹೋಗದ ರೀತಿಯಲ್ಲಿ ನಾವು ಜಾಗರೂಕತೆ ವಹಿಸುತ್ತೇವೆ. ಇಲ್ಲಿ ಬಂದಿರತಕ್ಕ ಪ್ರಶ್ನೆ ಎಂದರೆ, ತೆಲುಗು ಗಂಗಾಕ್ಕೆ ಸಂಬಂಧಪಟ್ಟಂತೆ 'ಬಿ' ಬಗ್ಗೆ ಹೇಳುವುದಾದರೆ, ಇದಕ್ಕೆ ನಮ್ಮ ಪಾಲಿನ ನೀರನ್ನು ಕೊಡುವುದಿಲ್ಲ ಎಂದು ಹೇಳಿದ್ದೇವೆ. ಇವತ್ತಿಗೂ ಕೂಡ ಇದೇ ನಮ್ಮ ನಿರ್ಧಾರ.

ಇನ್ನು ಎರಡನೆಯ ಪ್ರಶ್ನೆ ಎಂದರೆ ತೆಲುಗು–ಗಂಗಾಕ್ಕೆ ಬೇಕೆಂದು ಅವರು ಕೇಳಿದರೆ ಪಾರ್ಟ್ 'ಬಿ' ಏನಿದೆ ಅದರ ಬಗ್ಗೆ ರಿವ್ಯೂ ಮಾಡಬೇಕಾದರೆ ಇವತ್ತೇ ಚರ್ಚೆಗೆ ನಾವು ಸಿದ್ಧವಾಗಿದ್ದೇವೆ. ಪಾರ್ಟ್ 'ಬಿ'ನ ಹಂಚುವಿಕೆಯ ಬಗ್ಗೆ ನಾವು 2 ಸಾರಿ ಮೀಟಿಂಗ್ ಸೇರಿದ್ದೆವು. ಅದು ಪಾರ್ಟ್ 'ಎ' ಬಗ್ಗೆ ಅಲ್ಲ. ಪಾರ್ಟ್ 'ಬಿ' ಬಗ್ಗೆ ಏನು ಚರ್ಚೆ ಮಾಡಬೇಕು, ಸಮಾಲೋಚನೆ ಮಾಡಬೇಕು ಅದರ ಬಗ್ಗೆ ಮಹಾರಾಷ್ಟ್ರ ಮುಖ್ಯಮಂತ್ರಿಗಳಾದ ಮಾನ್ಯ ಸುಧಾಕರ ನಾಯಕ್‌ರವರ ಜೊತೆ ಮತ್ತು ಆಂಧ್ರದ ಮಾನ್ಯ ಮುಖ್ಯಮಂತ್ರಿಗಳಾದ ವಿಜಯಭಾಸ್ಕರ ರೆಡ್ಡಿಯವರ ಜೊತೆ ಮಾತನಾಡಿದ್ದೇವೆ. ಈಗ 2 ಮೀಟಿಂಗ್ ಆಗಿದ್ದು 3ನೇ ಮೀಟಿಂಗ್ ಮಹಾಬಲೇಶ್ವರದಲ್ಲಿ ಆಗಬೇಕಾಗಿತ್ತು. ಇದರ ಬಗ್ಗೆ ಪರಸ್ಪರ ಆಲೋಚನೆ ಮಾಡಲು ಸಧ್ಯದಲ್ಲೇ ಒಂದು ಮೀಟಿಂಗ್‌ನ್ನು ಕರೆಯುವುದಾಗಿ ಮಹಾರಾಷ್ಟ್ರದ ಮುಖ್ಯಮಂತ್ರಿಗಳಾದ ಸುಧಾಕರ ನಾಯಕ್‌ರವರು ಹೇಳಿದ್ದಾರೆ. ಬಚಾವತ್ ಅವಾರ್ಡ್ ಪ್ರಕಾರ ನಮ್ಮ ನಿಲುವು ಅಚಲ. ನಮ್ಮ ಪಾಲಿನ ಒಂದು ಹನಿ ನೀರನ್ನೂ ಕೂಡ ಅವರಿಗೆ ಕೊಡತಕ್ಕ ಪ್ರಶ್ನೆ ಇಲ್ಲ. ಆ ನೀರನ್ನು ನಾವೇ ನ್ಯಾಯವಾಗಿ ಉಪಯೋಗ ಮಾಡಿಕೊಳ್ಳುತ್ತೇವೆ. ಆದರೆ ಪಾರ್ಟ್ 'ಬಿ' ಬಗ್ಗೆ 2001ನೇ ಇಸವಿಯಲ್ಲಿ ಮಾತನಾಡುವುದಕ್ಕೆ ಬದಲು ಇವತ್ತೆ ಚರ್ಚೆ ಮಾಡೋಣ ಎಂದರೆ, 3 ರಾಜ್ಯಗಳವರೂ ಒಪ್ಪಿದರೆ ಅದಕ್ಕೆ ನಾವು ಸಿದ್ಧವಾಗಿದ್ದೇವೆ.

ಇನ್ನು ತುಂಗಭದ್ರಾ ಬೋರ್ಡ್ ಬಗ್ಗೆ ಹೇಳುವುದಾದರೆ, ಅಲ್ಲಿ ನಮ್ಮ ಇಂಜಿನಿಯರ್‌ಗಳು ವಾಚ್ ಮಾಡುತ್ತಿದ್ದಾರೆ. ಬೋರ್ಡನ್ನು ಅಬಾಲಿಷ್ ಮಾಡಬೇಕೆಂಬ ವಿಚಾರ ಆಗಿಂದಾಗ್ಗೆ ಚರ್ಚೆಗೆ ಬರುತ್ತಿದೆ. ಏಕೆಂದರೆ ಅವರವರ ಪಾಲಿನ ನೀರನ್ನು ಉಪಯೋಗ ಮಾಡಿಕೊಳ್ಳಬೇಕೆಂದು ನಿರ್ಣಯವಾಗಿರುವುದರಿಂದ ನಾವು ಅದನ್ನು ರೆಗ್ಯುಲೇಟ್ ಮಾಡತಕ್ಕ ವ್ಯವಸ್ಥೆ ಬೋರ್ಡ್‌ನಿಂದ

ಮಾಡಬೇಕೆಂಬ ಅವಶ್ಯಕತೆ ಇಲ್ಲ. ಬಚಾವತ್ ಅವಾರ್ಡ್ ಮೇರೆಗೆ ಅದು ತುಂಗಭದ್ರಾ ನೀರು ಇರಬಹುದು, ಅಥವಾ ಬೇರೆ ಯಾವುದೇ ನೀರು ಇರಬಹುದು, ನಮ್ಮ ಪಾಲಿನ ನೀರನ್ನು ನಾವು ಉಪಯೋಗ ಮಾಡಿಕೊಳ್ಳುತ್ತೇವೆ. ಬಚಾವತ್ ಅವಾರ್ಡ್‌ನಿಂದ ಕನ್ನಡಿಗರಿಗೆ ಯಾವುದೇ ರೀತಿಯಲ್ಲೂ ಮೋಸ ಆಗದಂತೆ ನಾವು ನೋಡಿಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್:- ಪತ್ರಿಕೆಗಳಲ್ಲಿ ಬಂದಿದೆ; ನಮ್ಮ ರಾಜ್ಯದಲ್ಲಿ ನಕ್ಸಲೈಟ್ಸ್ ಟ್ರೈನಿಂಗ್ ಕೊಡುತ್ತಿದ್ದಾರೆ ಎಂದು....

ಶ್ರೀ ಎಂ. ವೀರಪ್ಪಮೊಯಿಲಿ:- ಶಿವರಾಸನ್ ಇಲ್ಲಿಗೆ ಬಂದಿದ್ದು ಅವನು ಕೊನೆಗೆ ಏನು ಆದ ಎಂಬುದು ತಮಗೇ ಗೊತ್ತಿದೆ. ನಮ್ಮ ರಾಜ್ಯ ಈಗ ಶಾಂತವಾಗಿದೆ. ನಕ್ಸಲೈಟ್ಸ್ ಟ್ರೈನಿಂಗ್ ಕೊಡುತ್ತಿದ್ದಾರೆಂದು ನೀವು ತಿಳಿದುಕೊಂಡಿದ್ದರೆ ಅದು ಸರಿಯಲ್ಲ. ಎಲ್.ಟಿ.ಟಿ.ಯವರು ಇರಬಹುದು, ನಕ್ಸಲೈಟ್ಸ್ ಇರಬಹುದು, ಶಿವರಾಸನ್‌ನನ್ನು ಯಾವರೀತಿ ಹಿಡಿದುಹಾಕಿದೆವೋ ಅದೇರೀತಿ ಇವರನ್ನೂ ಕೂಡ ಹಿಡಿದುಹಾಕುತ್ತೇವೆ. ಇಲ್ಲಿ ಯಾವುದೇ ರೀತಿಯ ಟ್ರೈನಿಂಗ್, ದುಷ್ಕೃತ್ಯ ಅಕೃತ್ಯಗಳು ಆಗದಂತೆ ನಾವು ನೋಡಿಕೊಳ್ಳುತ್ತೇವೆ. ಅಂಥವರೇನಾದರೂ ಇದ್ದರೆ ಒದ್ದು ಹೊರಗೆ ಓಡಿಸುತ್ತೇವೆ.

ಶ್ರೀ ಹಾರ್‍ನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷಿಣಿಯವರೆ, ವಿರೋಧಪಕ್ಷದ ನಾಯಕರಾದ ಮಾನ್ಯ ದೇಶಪಾಂಡೆಯವರು ಕೇಳಿದ್ದಂಥ ವಿಚಾರಗಳಲ್ಲಿ (ಹುಬ್ಬಳ್ಳಿಯ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತ ಶ್ರೀ ನಂಜುಂಡೇಗೌಡರ ವಿಚಾರ) ನಾನು ಈ ಹೇಳಿಕೆಯನ್ನು ಕೊಡಬಯಸುತ್ತೇನೆ.

ಮಾನ್ಯ ಅಧ್ಯಕ್ಷರೆ, ಧಾರವಾಡ ಜಿಲ್ಲೆಯ ಹುಬ್ಬಳ್ಳಿ ಪಟ್ಟಣವು ರಾಜ್ಯದ ಅತೀ ದೊಡ್ಡ ಮತ್ತು ಪ್ರಾಮುಖ್ಯವಾದ ವ್ಯಾಪಾರ ಕೇಂದ್ರವಾಗಿದೆ. ಇಲ್ಲಿಯ ವರ್ತಕರು ಸರ್ಕಾರಕ್ಕೆ ಪಾವತಿ ಮಾಡಬೇಕಾದ ತೆರಿಗೆಗಳ್ಳತನವನ್ನು ತೊಡೆದುಹಾಕುವ ಉದ್ದೇಶದಿಂದ ಹುಬ್ಬಳ್ಳಿಯನ್ನು ಕೇಂದ್ರ ಸ್ಥಾನವಾಗಿಟ್ಟು ಇತ್ತೀಚೆಗೆ ವಾಣಿಜ್ಯ ತೆರಿಗೆ ಜಂಟಿ ಆಯುಕ್ತ (ಗುಪ್ತವಾರ್ತೆ)ರವರ ಕಛೇರಿಯನ್ನು ಸ್ಥಾಪಿಸಲಾಗಿದೆ. ಗುಪ್ತವಾರ್ತೆ ದಳದವರು ತಮ್ಮ ಸಾಮಾನ್ಯ ಕರ್ತವ್ಯದ ಮೇಲೆ ದಿನಾಂಕ 30-11-92ರಂದು ಹುಬ್ಬಳ್ಳಿಯ ಕುಬ್ಬಸದ್ ಗಲ್ಲಿಯಲ್ಲಿರುವ ಮೆ: ಪಾರ್‌ಮರ್ ಇಂಡಸ್ಟ್ರೀಸ್‌ರವರ ಕಛೇರಿಗಳನ್ನು ತಪಾಶಿಸುವ ಸಲುವಾಗಿ ಹೋಗಿದ್ದರು. ವಾಣಿಜ್ಯ ತೆರಿಗೆ ಜಂಟಿ ಆಯುಕ್ತ (ಗುಪ್ತವಾರ್ತೆ)ರವರ ವರದಿಯಂತೆ ಈ ಸಂಸ್ಥೆಯವರು ತೆರಿಗೆಯನ್ನು ವಂಚಿಸಿರುವ ಪ್ರಕರಣಗಳಿವೆ. ಮೇಲಿನ ಕಛೇರಿಯ ತಪಾಸಣೆಯು ವಾಣಿಜ್ಯ ತೆರಿಗೆ ಜಂಟಿ ಆಯುಕ್ತ (ಗುಪ್ತವಾರ್ತೆ)ರವರ ಮೇಲ್ವಿಚಾರಣೆಯಲ್ಲಿ ನಡೆಯುತ್ತಿತ್ತು. ತಪಾಸಣೆಯ ಸಮಯದಲ್ಲಿ ಈ ಸಂಸ್ಥೆಯವರ ವಶದಲ್ಲಿದ್ದ ಕೆಲವೊಂದು ಸಂಶಯಾತ್ಮಕ ದಾಖಲಾತಿಗಳು ಅಧಿಕಾರಿಗಳ ಗಮನಕ್ಕೆ ಬಂದಿರುವುದಲ್ಲದೆ ಈ ಸಂಸ್ಥೆಯವರು ಕರ್ನಾಟಕ ಮಾರಾಟಕರ ತೆರಿಗೆ ಅಲ್ಲದೆ ಆದಾಯಕರ ತೆರಿಗೆಯನ್ನು ವಂಚಿಸಿರುವುದು ಅಧಿಕಾರಿಗಳ ಗಮನಕ್ಕೆ ಬಂದಿದೆ. ದಾಖಲಾತಿಗಳನ್ನು ವಶಪಡಿಸಿಕೊಳ್ಳುವ ಸಲುವಾಗಿ ಮತ್ತು ಹೇಳಿಕೆಗಳನ್ನು ಪಡೆಯುವ ಸಮಯದಲ್ಲಿ ಸಂಸ್ಥೆಯ ಮಾಲೀಕರ ಸಹೋದರರು ಕಛೇರಿಯನ್ನು ಪ್ರವೇಶಿಸಿ ವಶಪಡಿಸಿಕೊಳ್ಳಲಾದ, ದಾಖಲಾತಿಗಳನ್ನು ಕಸಿದುಕೊಂಡಿದ್ದಲ್ಲದೆ, ತಪಾಸಣೆಯ ಅಧಿಕಾರಿಗಳನ್ನು ಸ್ಥಳದಿಂದ ಹೊರಗೆ ಹೋಗುವಂತೆ ಬಲಾತ್ಕಾರ ಮಾಡಿರುತ್ತಾರೆ. ಈ ಘರ್ಷಣೆಯಲ್ಲಿ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತ (ಗುಪ್ತವಾರ್ತೆ)ರಾಗಿ ಸೇವೆ ಸಲ್ಲಿಸುತ್ತಿದ್ದ ಶ್ರೀ ಕೆ. ನಂಜುಂಡೇಗೌಡರವರಿಗೆ ತಲೆಗೆ ಏಟು ಬಿದ್ದಿರುತ್ತದೆ. ಅಲ್ಲದೆ ಸಂಸ್ಥೆಯ ಕಛೇರಿಯ ಹೊರಗೆ ನಿಲ್ಲಿಸಿದ್ದ ಇಲಾಖೆಯ ವಾಹನಕ್ಕೆ ಬೆಂಕಿ ನೀಡುವ ಸಂಚು ಮಾಡಿರುತ್ತಾರೆಂದು ತಿಳಿದು ಬಂದಿದೆ. ಇದೇ ಸಮಯದಲ್ಲಿ ಆರಕ್ಷಕ ಸಿಬ್ಬಂದಿಗಳು ಅಲ್ಲಿ ಬಂದಿದ್ದು, ಇಲಾಖಾ ವಾಹನಕ್ಕೆ ಬೆಂಕಿ ಕೊಡುವ ಸಂಚನ್ನು ತಪ್ಪಿಸಿ ಸಂಸ್ಥೆಯವರ

ವಿರುದ್ಧ ಮೊಕದ್ದಮೆಯನ್ನು ದಾಖಲು ಮಾಡಲಾಗಿದೆ ಎಂದು ತಿಳಿದು ಬಂದಿದೆ. ಇಂತಹದೇ ಇನ್ನೆರಡು ಪ್ರಕರಣಗಳು ದಿನಾಂಕ 19-9-91 ಮತ್ತು 11-10-91ರಂದು ನಡೆದಿದೆ ಎಂದು ಇಲಾಖಾ ಅಧಿಕಾರಿಗಳ ವರದಿಯಿಂದ ತಿಳಿದು ಬಂದಿದೆ.

ಈ ಘಟನೆ ನಡೆದ ಬಳಿಕ ಕೆಲವು ವರ್ತಕರು ಮಾನ್ಯ ಮುಖ್ಯಮಂತ್ರಿಯವರಿಗೆ ಶ್ರೀ ಕೆ.ನಂಜುಂಡೇಗೌಡರವರ ವಿರುದ್ಧ ಲಂಚದ ಆಪಾದನೆಗಳನ್ನು ಹೊರಿಸಿ ಮನವಿಯನ್ನು ನೀಡಿರುತ್ತಾರೆ. ಅಲ್ಲದೆ ದಿನಾಂಕ 1-12-92ರಂದು ಈ ವರ್ತಕರು ಹರತಾಳವನ್ನು ಆಚರಿಸಿರುತ್ತಾರೆ.

ಅಧಿಕಾರಿಗಳ ವಿರುದ್ಧ ಬಂದಿರುವ ದೂರು ಅರ್ಜಿಯನ್ನು ಕೇಂದ್ರ ಕಛೇರಿಯ ವಾಣಿಜ್ಯ ತೆರಿಗೆ ಅಪರ ಆಯುಕ್ತರೊಬ್ಬರನ್ನು ನಿಯೋಜಿಸಿ ವಿಚಾರಿಸಲಾಗುವುದು. ಅಲ್ಲದೆ ವಿಚಾರಣಾ ವರದಿ ಬಂದ ಬಳಿಕ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮವನ್ನು ಕೈಗೊಳ್ಳಲಾಗುವುದು.

ಶ್ರೀ ಸಿ. ಬೈರೇಗೌಡ:- ಇವತ್ತು ಬೆಳಿಗ್ಗೆ ನಾವು ಒಂದು....

ಉಪಾಧ್ಯಕ್ಷರು:- ಮೇಲ್ಮನೆಯಿಂದ ಒಂದು ಸೂಚನೆ ಬಂದಿದೆ. ಅವರಿಗೆ ಹೆಚ್ಚು ಬಿಜಿನೆಸ್ ಇಲ್ಲದೆ ಇರುವುದರಿಂದ ಇದೊಂದು ಶಾಸನ ರಚನೆ ಮುಗಿಸಿ. ನಾವು ಕಳಿಸಿದರೆ ಮುಂದೆ ಕಾಲಿಂಗ್ ಅಟೆನ್‌ಷನ್ ಅದನ್ನು ಆಮೇಲೆ ತೆಗೆದುಕೊಳ್ಳೋಣ.

ಶ್ರೀ ಹೆಚ್. ಏಕಾಂತಯ್ಯ:- ಟ್ರಾನ್ಸ್‌ಫಾರ್ಮರ್ ಬಗ್ಗೆ ಚರ್ಚೆಗೆ ತೆಗೆದುಕೊಳ್ಳಬೇಕು.

ಶ್ರೀ ಸಿ. ಬೈರೇಗೌಡ:- ಇವತ್ತು ತೆಗೆದುಕೊಳ್ಳಬೇಕು.

ಉಪಾಧ್ಯಕ್ಷರು:- ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ:- ರಾಜ್ಯದ ಜನರಿಗೆ ವಿದ್ಯುತ್ ಸಪ್ಲೈ ಆಗುತ್ತಿಲ್ಲ.

ಶ್ರೀ ಸಿ. ಬೈರೇಗೌಡ:- ಇವತ್ತು ವಿದ್ಯುಚ್ಛಕ್ತಿ ಬಗ್ಗೆ ಚರ್ಚೆಯಾಗಬೇಕು.

ಉಪಾಧ್ಯಕ್ಷರು:- ಇದಾದ ಮೇಲೆ ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್:- ಇದರಲ್ಲಿ ಬಹಳ ಅನ್ಯಾಯವಾಗಿದೆ ಇದರ ಬಗ್ಗೆ ಸಮಗ್ರವಾಗಿ ಚರ್ಚೆಯಾಗಬೇಕು. ಅದಕ್ಕೋಸ್ಕರ ಮುಖ್ಯಮಂತ್ರಿಗಳನ್ನು ಕಾದು ಕುಳಿತಿದ್ದೇವೆ.

ಶ್ರೀ ಆರ್.ವಿ. ದೇಶಪಾಂಡೆ:- ರೈತರ ಸಮಸ್ಯೆ ಚರ್ಚೆಯಾಗಬೇಕಾಗಿದೆ. ರೈತರು ಬಹಳ ಕಷ್ಟದಲ್ಲಿದ್ದಾರೆ ಏನೇನೂ ನೀರಾವರಿಯಾಗುತ್ತಿಲ್ಲ. ಹಾಗಾಗಿ ಈ ವಿಷಯ ಚರ್ಚೆ ಮಾಡಬೇಕೆಂದಿದ್ದೇವೆ 7-30, 8 ಗಂಟೆಯಾಗಲೀ ಚರ್ಚೆಯಾಗಬೇಕು. ಇದನ್ನು ಪ್ರಾಧಾನ್ಯತೆ ಮೇಲೆ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಹೆಚ್. ಏಕಾಂತಯ್ಯ:- ಮೂರುವರೆಗೆ ತೆಗೆದುಕೊಳ್ಳೋಣವೆಂದು ಹೇಳಿದ್ದೀರಿ.

ಉಪಾಧ್ಯಕ್ಷರು:- ಹಾಗಾದರೆ ಗಮನ ಸೆಳೆಯುವ ಸೂಚನೆಯಿಂದ ತೆಗೆದುಕೊಳ್ಳೋಣ.

ಶ್ರೀ ಎಂ. ವೀರಪ್ಪಮೊಯಿಲಿ:- ಈ ಮಸೂದೆಯನ್ನು ಪಾಸ್ ಮಾಡಿ ಇದನ್ನು ನಂತರ ಮಾಡೋಣ.

ಶ್ರೀ ಹೆಚ್. ಏಕಾಂತಯ್ಯ:- ಮಸೂದೆಯನ್ನು ಆಮೇಲೆ ಮಾಡೋಣ. ರೈತರ ವಿದ್ಯುತ್ ಪೂರೈಕೆ ಬಗ್ಗೆ ಟ್ರಾನ್ಸ್‌ಫಾರ್ಮರ್ ಬಗ್ಗೆ 4 ದಿವಸದಿಂದ ಬರುತ್ತಿದೆ.

ಶ್ರೀ ಎಂ. ವೀರಪ್ಪಮೊಯಿಲಿ:- ಅದೂ ಆಗಲೀ ಬೇಡವೆಂದು ಹೇಳುತ್ತಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ತಾವು ಇರಲಿಲ್ಲ ಬೆಳಿಗ್ಗೆ ಬಹಳ ಚರ್ಚೆಯಾಗಿದೆ.

ಶ್ರೀ ಸಿ. ಬೈರೇಗೌಡ:- ಈಗ ಅಡ್ಜರ್ನ್ ಮಾಡಿ ಇನ್ನೊಂದು ದಿವಸ ಸೇರಿ ಚರ್ಚೆ ಮಾಡೋಣ. ತೊಂದರೆ ಏನೂ ಇಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ:- ಈ ಸದನ 12ಕ್ಕೆ ಮುಗಿಯಬೇಕಿತ್ತು. ಆದರೂ ಎಲ್ಲಾ ವಿಚಾರಗಳನ್ನು ಮಾಡೋಣ ಎಂದು 16ಕ್ಕೆ ಒಪ್ಪಿದ್ದೇವೆ. ಈ ರೀತಿ ಎದ್ದು ಮಾತನಾಡಿದರೆ ಏನು ಅರ್ಥವಾಗುತ್ತದೆ ಎಂದರೆ ಸರಕಾರ ಅಡಗಿಸಲಿಕ್ಕೆ ಬಹುಶಃ ಯಾವ ಸಂದರ್ಭದಲ್ಲೂ ಕೂಡ ಇಷ್ಟು ವಿಸ್ತರಣೆ ಮಾಡಿದ್ದುದು ಇಲ್ಲ. ಯಾವ ವಿಚಾರ ಹೇಳಿದರೂ ಕೂಡ ಸೈ ಎಂದು ಹೇಳಿದೆವು. ಒಮ್ಮೆಲೆ ಎದ್ದು ನಾವು ಯಾವುದೋ ಹೇಳುತ್ತಿದ್ದೇವೆಂದು ಇಲ್ಲಿ ಬರಬಾರದು. ಬಿ.ಡಿ.ಎ. ಮಸೂದೆ ತಿರಸ್ಕೃತವಾಗಿ ಬಂದಿದೆ. ರಿಟ್ ಪಿಟಿಷನ್ ಬಂದಿದ್ದು ಈ ವಸೂಲಾತಿಗೆ ಅಧಿಕಾರವಿಲ್ಲವೆಂದು ಇಂತಹ ಕಾರ್ಯಕ್ರಮಗಳು ಬಂದಿದೆ. ಅದು ತಮಗೂ ಗೊತ್ತಿದೆ. My Government would like to avoid issue of ordinances. ನಾವು ಪದೇ ಪದೇ ಆರ್ಡಿನೆನ್ಸ್ ಅನ್ನು ತರುವುದಕ್ಕೆ ಇಚ್ಛೆಪಡುವುದಿಲ್ಲ. ನಾವು ಅದನ್ನು ಅವಾಯ್ಡ್ ಮಾಡುತ್ತೇವೆ. ತಾವು ಒಮ್ಮೆ ಇದನ್ನು ಇಲ್ಲಿ ಪಾಸ್ ಮಾಡಿದರೆ, ಹಾಗೆ ಪಾಸ್ ಮಾಡಿದ್ದನ್ನು 5 ನಿಮಿಷದಲ್ಲಿ ಮುಗಿಸಿ ಅಲ್ಲಿಗೆ ಕಳಿಸಬಹುದು ಇವತ್ತು ಆ ಸದನ ಮುಗಿಯುವುದು ಇದೆ.

ಶ್ರೀ ಆರ್.ವಿ. ದೇಶಪಾಂಡೆ:- ಒಪ್ಪಿಕೊಳ್ಳುತ್ತೇನೆ, ಈ ಮನೆಯಿಂದ ಅಲ್ಲಿಗೆ ಹೋದಂತಹ ಬಿಲ್ ಪಾಸಾಗದೆ ಡಿಫೀಟ್ ಆಗಿ ಇಲ್ಲಿಗೆ ಬಂದಿದೆ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ:- ಇದಾದನಂತರ ಎಲ್ಲಾ ವಿಷಯಗಳನ್ನೂ ತೆಗೆದುಕೊಳ್ಳೋಣ.

ಶಾಸನ ರಚನಾ ಕಾರ್ಯಕಲಾಪಗಳು

1993ನೇ ಸಾಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):- ಮಾನ್ಯ ಉಪಾಧ್ಯಕ್ಷರೇ, 1993ನೇ ಸಾಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ (ವಿಧಾನ ಪರಿಷತ್ತಿನಿಂದ ತಿರಸ್ಕೃತವಾಗಿರುವ)ವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು:- ಪ್ರಸ್ತಾವವೇನೆಂದರೆ 1993ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ ವಿಧಾನ ಪರಿಷತ್ತಿನಿಂದ ತಿರಸ್ಕೃತವಾಗಿರುವುದನ್ನು ಪರ್ಯಾಲೋಚಿಸುವುದು.

(ಪ್ರಸ್ತಾವವನ್ನು ಮಂಡಿಸಲಾಯಿತು)

ಶ್ರೀ ಹೆಚ್. ಏಕಾಂತಯ್ಯ:- ಇದರ ಬಗ್ಗೆ ಚರ್ಚೆ ಇಲ್ಲವೇ?

ಉಪಾಧ್ಯಕ್ಷರು:- ಇದರ ಬಗ್ಗೆ ಚರ್ಚೆಯಾಗಿದೆ.